## ಅಧ್ಯಾಯ 12

# ಸ್ತ್ರೀ ಮತ್ತು ಘಟಸರ್ಪ

ಅಧ್ಯಾಯ 11ರ ಮುಕ್ತಾಯದ ವಚನಗಳಲ್ಲಿ, ಏಳನೆಯ ತುತೂರಿಯು ಊದಲ್ಪಟ್ಟಿತು; ನ್ಯಾಯತೀರ್ಪಿನ ಸಮಯವು ಬಂದಿತ್ತು. ಕೋಪದ ಏಳು ಪಾತ್ರೆಗಳು ಮುಂದೆ ಪರಿಚಯಿಸಲ್ಪಡುವವೆಂದು ನಾವು ಯೋಚಿಸಬಹುದು, ಆದರೆ ಆ ಸರಣಿಯು 15 ಮತ್ತು 16 ಅಧ್ಯಾಯಗಳ ತನಕ ಮುಂದೂಡಲ್ಪಡುತ್ತದೆ. ಬದಲಾಗಿ, 12ರಿಂದ 14 ಅಧ್ಯಾಯಗಳಲ್ಲಿ, ದೇವರ ಹಾಗೂ ಕ್ರಿಸ್ತನ ವೈರಿಗಳ ಕುರಿತು ಪರಿಚಯಿಸಲಾಗುತ್ತದೆ. ವೈರಿಗಳು ಮೊದಲು ಒಂದು ಸಮಯದಲ್ಲಿ ದೃಶ್ಯದಲ್ಲಿ ಬರುತ್ತಾರೆ ಮತ್ತು ಅನಂತರದಲ್ಲಿ ವಿರುದ್ಧ ಕ್ರಮದಲ್ಲಿ ತೆಗೆದು ಹಾಕಲ್ಪಡುತ್ತಾರೆ. 12ನೇ ಅಧ್ಯಾಯವು ಹಿಂಸೆಯ ಹಿಂದಿರುವವನನ್ನು ಪರಿಚಯಿಸುತ್ತದೆ: ಸೈತಾನನು. 13ನೇ ಅಧ್ಯಾಯದಲ್ಲಿ ಸೈತಾನನ ಇಬ್ಬರು ಸಹವರ್ತಿಗಳ ವೇದಿಕೆಯ ಮೇಲೆ ಬರುತ್ತಾರೆ: ಮೃಗ ಮತ್ತು ಸುಳ್ಳು ಪ್ರವಾದಿ. 14ನೇ ಅಧ್ಯಾಯವು ಅನಂತರದಲ್ಲಿ ಕ್ಲುಪ್ತವಾಗಿ ಮೋಹಗೊಳಿಸುವ ಮಹಾ ಬಾಬೇಲ ಕುರಿತು ಪ್ರಸ್ತಾಪಿಸುತ್ತದೆ.

12ನೇ ಅಧ್ಯಾಯವು ಬಹಳ ಮುಖ್ಯವಾದದ್ದು. ವೇದ ಪಂಡಿತರು ಇದು ಪ್ರಕಟನೆ ಪುಸ್ತಕದ ಪ್ರಮುಖ ವಿಭಾಗವನ್ನು ಆರಂಭಿಸುತ್ತದೆಂಬುದನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳುತ್ತಾರೆ. ಪುಸ್ತಕದ ಮೊದಲ ಅರ್ಧಭಾಗವು ಪ್ರಾಥಮಿಕವಾಗಿ ಸಭೆ ಹಾಗೂ ರೋಮನ್ ಸಾಮ್ರಾಜ್ಯದ ನಡುವಿನ ಕಾದಾಟದ ಕುರಿತಾಗಿದ್ದರೆ, ಎರಡನೆ ಅರ್ಧಭಾಗವು ತೆರೆಯ ಹಿಂದಿನ ಹೋರಾಟದ ಮೇಲೆ ಹೆಚ್ಚು ಗಮನವನ್ನು ಕೊಡುತ್ತದೆ: ಕ್ರಿಸ್ತನು ಹಾಗೂ ಸೈತಾನನ ನಡುವಿನ ಆತ್ಮೀಕ ಯುದ್ಧ, ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ಕಾದಾಟ.

ಪ್ರಕಟನೆ 12ರ ಒಂದು ಪ್ರಾಥಮಿಕ ಉದ್ದೇಶವು ದೇವರ ಪ್ರಧಾನ ವೈರಿಯಾದ ಸೈತಾನನನ್ನು ಪರಿಚಯಿಸುವದೇ ಆಗಿದೆ. ಈ ವಿಭಾಗವು ಕ್ರೈಸ್ತರ ತೊಂದರೆಗಳಿಗೆ ಸೈತಾನನೇ ಜವಾಬ್ದಾರನಾಗಿದ್ದನು ಎಂಬುದನ್ನು ಬಯಲುಗೊಳಿಸುತ್ತದೆ - ಮತ್ತು ಸೈತಾನನು ಏಕೆ ಕ್ರೈಸ್ತರನ್ನು ಹಗೆ ಮಾಡುತ್ತಾನೆಂಬುದನ್ನು ವಿವರಿಸುತ್ತದೆ. ಅಲ್ಲದೆ ಇದು ಆದಿ ಕ್ರೈಸ್ತರು ಕೇಳುತ್ತಿರಬಹುದಾಗಿದ್ದ ಪ್ರಶ್ನೆಗಳಿಗೆ ಉತ್ತರಿಸುತ್ತದೆ, ಉದಾಹರಣೆಗೆ: "ನಮ್ಮನ್ನು ಏಕೆ ಈ ವಿಧವಾಗಿ ನಡಿಸಿಕೊಳ್ಳಲಾಗುತ್ತದೆ?"; "ನಮಗೆ ಇಂಥ ಸ್ಥಿತಿ ಬರುವದಕ್ಕೆ ಯೋಗ್ಯವಾದ ಯಾವ ಕೃತ್ಯವನ್ನು ನಾವು ಮಾಡಿದ್ದೇವೆ?"; ರೋಮನ್ ಸಾಮ್ರಾಜ್ಯವು ಏಕೆ ನಮ್ಮನ್ನು ಇಷ್ಟೊಂದು ದ್ವೇಷಿಸುತ್ತದೆ?" ಅದು ಅಷ್ಟಾಗಿ ದ್ವೇಷ ಮಾಡಿದ್ದು *ರೋಮನ್ ಸಾಮ್ರಾಜ್ಯ*, ಆದರೆ *ಸೈತಾನನೇ* ಎಂಬುದನ್ನು ತಿಳಿಯಪಡಿಸುತ್ತದೆ. ರೋಮನ್ ಸಾಮ್ರಾಜ್ಯವು ಸೈತಾನನ ಕೈಯಲ್ಲಿನ ಒಂದು ಸಾಧನ ಮಾತ್ರವೇ ಆಗಿತ್ತು.

ಶಾರೀರಿಕ ಯುದ್ಧದ ಕುರಿತಾಗಿರುವ ಇಂದಿನ ಪುಸ್ತಕಗಳು ಹೇಳುವದೇನೆಂದರೆ ವೈರಿಯನ್ನು ಸೋಲಿಸಬೇಕಾದರೆ, ಒಬ್ಬನು ವೈರಿಯನ್ನು ತಿಳಿದವನಾಗಿರಬೇಕು. ಈ ತತ್ವವು ಕ್ರೈಸ್ತರಿಗಿದ್ದ ಮರಣದ ವರೆಗೂ ಹೋರಾಡಬೇಕಿದ್ದ ಯುದ್ಧದ ವಿಷಯದಲ್ಲೇನೂ ಕಡಿಮೆ

ಸತ್ಯವಾಗಿರಲಿಲ್ಲ (ಎಫೆಸ 6:11-18). 12ನೇ ಅಧ್ಯಾಯವು ಕ್ರೈಸ್ತತ್ವವನ್ನು ನಾಶಗೊಳಿಸುವದಕ್ಕೆ ಬಯಸುವವನ ಕುರಿತಾಗಿ ಕಲಿತುಕೊಳ್ಳಲು ನಮಗೊಂದು ಉತ್ತಮ ವಾಕ್ಯಭಾಗವಾಗಿದೆ. "ಈ ಅಧ್ಯಾಯದಲ್ಲಿ ಸೈತಾನನಿಗಿರುವ ಹೆಸರುಗಳು ಕಾಣಿಸಿಕೊಳ್ಳುವಷ್ಟು ಅಧಿಕವಾಗಿ ಶಾಸ್ತ್ರಗಳೊಳಗೆ ಬೇರೆ ಇನ್ನಾವ ವಾಕ್ಯಭಾಗದಲ್ಲೂ ಕಾಣಿಸಿಕೊಳ್ಳುವದಿಲ್ಲ."[1]

## ಒಂದು ಮಗುವು ಹುಟ್ಟಿದೆ (12:1-6)

**1ಪರಲೋಕದಲ್ಲಿ ಒಂದು ಮಹಾ ಲಕ್ಷಣವು ಕಾಣಿಸಿತು. ಅದೇನೆಂದರೆ, ಸೂರ್ಯನನ್ನು ಧರಿಸಿಕೊಂಡಿದ್ದ ಒಬ್ಬ ಸ್ತ್ರೀಯಿದ್ದಳು; ಆಕೆಯ ಕಾಲುಗಳ ಕೆಳಗೆ ಚಂದ್ರನಿದ್ದನು. ಆಕೆಯ ತಲೆಯ ಮೇಲೆ ಹನ್ನೆರಡು ನಕ್ಷತ್ರಗಳುಳ್ಳ ಒಂದು ಕಿರೀಟವಿತ್ತು; 2ಆಕೆಯು ಗರ್ಭಿಣಿಯಾಗಿದ್ದು ಪ್ರಸವವೇದನೆಯಿಂದ ಸಂಕಟಪಡುತ್ತಾ ಕೂಗುತ್ತಿದ್ದಳು. 3ಪರಲೋಕದಲ್ಲಿ ಮತ್ತೊಂದು ಲಕ್ಷಣ ಕಾಣಿಸಿತು. ಅದೇನೆಂದರೆ ಕೆಂಪಾದ ಮಹಾ ಘಟಸರ್ಪವಿತ್ತು; ಅದಕ್ಕೆ ಏಳು ತಲೆಗಳೂ ಹತ್ತು ಕೊಂಬುಗಳೂ ಇದ್ದವು; ಅದರ ತಲೆಗಳ ಮೇಲೆ ಏಳು ಮುಕುಟಗಳಿದ್ದವು. 4ಅದರ ಬಾಲವು ಆಕಾಶದಲ್ಲಿರುವ ನಕ್ಷತ್ರಗಳೊಳಗೆ ಮೂರರಲ್ಲೊಂದು ಭಾಗವನ್ನು ಎಳೆದು ಭೂಮಿಗೆ ಹಾಕಿತು. ಹೆರುತ್ತಿದ್ದ ಆ ಸ್ತ್ರೀಯು ಹೆತ್ತಕೂಡಲೆ ಆಕೆಯ ಮಗುವನ್ನು ನುಂಗಿಬಿಡಬೇಕೆಂದು ಆ ಘಟಸರ್ಪವು ಅಲ್ಲೇ ಕಾದುಕೊಂಡಿತ್ತು. 5ಆಕೆ ಜನಾಂಗಗಳನ್ನು ಕಬ್ಬಿಣದ ಕೋಲಿನಿಂದ ಆಳಬೇಕಾದ ಒಂದು ಗಂಡು ಮಗುವನ್ನು ಹೆತ್ತಳು; ಆ ಕೂಸು ಪಕ್ಕನೆ ದೇವರ ಬಳಿಗೂ ಆತನ ಸಿಂಹಾಸನದ ಬಳಿಗೂ ಎತ್ತಲ್ಪಟ್ಟಿತು. 6ಆ ಸ್ತ್ರೀಯು ಅರಣ್ಯಕ್ಕೆ ಓಡಿಹೋದಳು; ಅಲ್ಲಿ ಆಕೆಗೆ ಸಾವಿರದ ಇನ್ನೂರ ಅರವತ್ತು ದಿನಗಳವರೆಗೆ ಪೋಷಣೆಯಾಗಬೇಕೆಂದು ದೇವರು ಸ್ಥಳವನ್ನು ಸಿದ್ಧ ಮಾಡಿದ್ದನು.**

**ವಚನ 1.** ಈ ವಾಕ್ಯಭಾಗವು ಹೀಗೆ ಆರಂಭಗೊಳ್ಳುತ್ತದೆ, **ಪರಲೋಕದಲ್ಲೆ ಒಂದು ಮಹಾ ಲಕ್ಷಣವು ಕಾಣಿಸಿತು. ಲಕ್ಷಣವು** ಅಪೊಸ್ತಲನಾದ ಯೋಹಾನನಿಗೆ ಒಂದು ನೆಚ್ಚಿನ ಪದವಾಗಿದೆ; ಇದು ಅನೇಕ ಸಾರಿ ಆತನ ಸುವಾರ್ತಾ ಕಥನದಲ್ಲಿ ಕಾಣಿಸಿಕೊಳ್ಳುತ್ತದೆ ಮತ್ತು ಪ್ರಕಟನೆ ಪುಸ್ತಕದಲ್ಲಿ ಏಳು ಸಾರಿ ಕಾಣಿಸಿಕೊಳ್ಳುತ್ತದೆ. ಪ್ರಕಟನೆ ಪುಸ್ತಕದಲ್ಲಿ ಈ ಪದವು ದೇವರಿಂದ ಬರುವ ವಿಶೇಷ ದರ್ಶನಗಳನ್ನು ಸೂಚಿಸುವದಕ್ಕಾಗಿ ಮೂರು ಸಾರಿ ಬಳಸಲ್ಪಡುತ್ತದೆ (12:1, 3; 15:1) ಮತ್ತು ಸೈತಾನನ ಸಹಾಯಕರಿಂದ ಆಚರಿಸಲ್ಪಡುವಂಥ ಮೋಸಕರವಾದ ಸೂಚನೆಗಳನ್ನು ಸೂಚಿಸುವದಕ್ಕಾಗಿ ನಾಲ್ಕು ಸಾರಿ ಬಳಸಲ್ಪಡುತ್ತದೆ (13:13, 14; 16:14; 19:20). ಈ ಪದವು ಯೋಹಾನನ ಸುವಾರ್ತೆ ಮತ್ತು ಪ್ರಕಟನೆ ಪುಸ್ತಕಗಳೆರಡರಲ್ಲೂ ಬಳಸಲ್ಪಟ್ಟಿದೆ ಎಂಬ ವಾಸ್ತವಾಂಶವು ಅಪೊಸ್ತಲನಾದ ಯೋಹಾನನು ಈ ಅಂತ್ಯಕಾಲಿಕ ಪುಸ್ತಕದ ಲೇಖಕನು ಎಂಬುದಕ್ಕೆ ಬಹುಶಃ ಇನ್ನೊಂದು ಸೂಚನೆಯಾಗಿರಬಲ್ಲದು. ಗ್ರಿಕ್ ಪದವಾದ σημεῖον (*sēmeion*) ಎಂಬುದು "ಸೂಚನೆ" ಎಂದು ಅನುವಾದಿಸಲ್ಪಟ್ಟಿದ್ದು, ಒಂದು "ಅಚ್ಚರಿಯುಂಟು ಮಾಡುವ, ಬಹಳ ಗಮನಾರ್ಹವಾದ ಸಂಗತಿಯನ್ನು, ಬಹಳ ಗುರುತಿಸಲ್ಪಟ್ಟ ಸಂಗತಿಯೊಂದನ್ನು," "ಪ್ರಕೃತಿಯ ಸಾಮಾನ್ಯ ಗತಿಯನ್ನು ದಾಟಿ ಸಂಭವಿಸುವ ಒಂದು ಸಹಜವಾದ ಸಂಭವವನ್ನು" ಸೂಚಿಸುವದಾಗಿದೆ.[2] NIVಯಲ್ಲಿ "ಒಂದು ಮಹಾ ಹಾಗೂ ಅದ್ಭುತಕರ ಲಕ್ಷಣ" ಎಂದಿರುತ್ತದೆ.

ಈ ಲಕ್ಷಣವು **ಪರಲೋಕದಲ್ಲಿ** ಸಂಭವಿಸುತ್ತದೆ. ಈ ಸನ್ನಿವೇಶದಲ್ಲಿ, "ಪರಲೋಕ" ಎಂಬ ಪದವು ದೇವರ ನಿವಾಸವನ್ನು ಸೂಚಿಸುವದಿಲ್ಲ, ಆದರೆ ಬದಲಾಗಿ ಅದು "ಆಕಾಶದೊಳಗಿರುವ ನಕ್ಷತ್ರಗಳ" ಸ್ಥಳವನ್ನು ಸೂಚಿಸುತ್ತದೆ (ವ.4) - ಸರಳವಾಗಿ ಹೇಳುವದಾದರೆ, ಗಗನವನ್ನು

ಸೂಚಿಸುತ್ತದೆ. W. B. Westನು ಹೀಗೆ ಬರೆಯುತ್ತಾನೆ, "ಯೋಹಾನನು ಪರಲೋಕದಲ್ಲಿ ಮಹಾ ಲಕ್ಷಣವನ್ನು ಕಂಡನು, ಅದು ಆತನ ಮೇಲ್ಗಡೆಯಲ್ಲಿದ್ದ ಗಗನವಾಗಿತ್ತು ಮತ್ತು ನಮ್ಮೆಲ್ಲರ ಮೇಲಿರುವಂಥ ಗಗನವೇ ಆಗಿತ್ತು."[3] ಹಲವಾರು ಅನುವಾದಕರು "ಆಕಾಶ"ಕ್ಕೆ "ಪರಲೋಕ" ಎಂದು ಅನುವಾದ ಮಾಡುತ್ತಾರೆ.[4] ಅದು ಒಂದು ರೀತಿಯಲ್ಲಿ ಅಪೊಸ್ತಲನು ನಕ್ಷತ್ರಗಳಿಂದ ಕೂಡಿದ ಆಕಾಶದ ಬೃಹತ್ ಪರದೆಯ ಮೇಲೆ ಚಿತ್ರಗಳನ್ನು ದೊಡ್ಡದಾಗಿ ಬಿಂಬಿಸಲ್ಪಟ್ಟಂತೆ ಕಂಡ ಹಾಗಿತ್ತು.[5]

ಯೋಹಾನನು ಕಂಡ "ಮಹಾ ಲಕ್ಷಣ" ಇದೇ ಆಗಿತ್ತು: **ಸೂರ್ಯನನ್ನು ಧರಿಸಿಕೊಂಡಿದ್ದ ಒಬ್ಬ ಸ್ತ್ರೀಯಿದ್ದಳು; ಆಕೆಯ ಕಾಲುಗಳ ಕೆಳಗೆ ಚಂದ್ರನಿದ್ದನು.** ಆಕೆಯ ತಲೆಯ ಮೇಲೆ ಹನ್ನೆರಡು ನಕ್ಷತ್ರಗಳುಳ್ಳ ಒಂದು ಕಿರೀಟವಿತ್ತು. ಸೂರ್ಯ, ಚಂದ್ರ, ನಕ್ಷತ್ರಗಳ ಸಂಭಾವ್ಯ ಸಂಕೇತಗಳನ್ನು ಗುರುತಿಸುವದಕ್ಕೆ ಆಸಕ್ತಿಕರವಾದ ಊಹೆಗಳು ಮಾಡಲ್ಪಟ್ಟಿರುತ್ತವೆ. ಉದಾಹರಣೆಗೆ, ಶಾಸ್ತ್ರಗಳು ದೇವರನ್ನು ಸೂರ್ಯನಿಗೆ ಹೋಲಿಕೆ ಮಾಡುತ್ತವೆ (ಕೀರ್ತನೆ 84:11); ಮತ್ತು ಪ್ರಕಟನೆ ಪುಸ್ತಕದಲ್ಲಿ, ಯೇಸುವಿನ ಮುಖವು ಸೂರ್ಯನಂತೆ ಪ್ರಕಾಶಿಸುತ್ತದೆ (1:16). ಹೀಗೆ ಈ ಸ್ತ್ರೀಯು ದೇವರ ಹಾಗೂ ಯೇಸುವಿನ ಸಂಗಡ ಒಂದು ವಿಶೇಷ ಸಂಬಂಧವನ್ನು ಹೊಂದಿದ್ದಾಳೆ. ಒಂದು ವ್ಯಾಖ್ಯಾನವು ನಕ್ಷತ್ರಗಳನ್ನು ಮೂಲಪಿತೃಗಳ ಯುಗದೊಂದಿಗೆ, ಚಂದ್ರನನ್ನು ಯೆಹೂದಿ ಯುಗಕ್ಕೆ, ಮತ್ತು ಸೂರ್ಯನನ್ನು ಕ್ರೈಸ್ತ ಯುಗಕ್ಕೆ ಹೋಲಿಕೆ ಮಾಡುತ್ತದೆ. ಹೇಗೂ, "ಅತಿ ಕಡಿಮೆ ವ್ಯಾಖ್ಯಾನವು ಹೇಗೋ ಅತಿ ವಿಪರೀತವಾಗಿ ವ್ಯಾಖ್ಯಾನ ಮಾಡುವದೂ ಅಷ್ಟೇ ಅಪಾಯಕಾರಿಯಾಗಿದೆ."6 ಹಾಗಿದ್ದರೂ, ಎರಡು ಅಂಶಗಳು ಮಹತ್ವಪೂರ್ಣವೆಂದು ಕಾಣುತ್ತವೆ: (1) ಸ್ತ್ರೀಯು ಧರಿಸಿಕೊಂಡಿರುವ ಕಿರೀಟವು στέφανος (*stephanos*) ಆಗಿದೆ, ಅದು ಜಯಮಾಲೆ. (2) "ಹನ್ನೆರಡು" ಎಂಬ ಸಂಖ್ಯೆಯು ಸಂಪೂರ್ಣತೆಯ ಯೋಚನೆಯನ್ನು ಒಳಗೊಂಡಿರುತ್ತದೆ. ವಾಡಿಕೆಯಂತೆ, ಒಟ್ಟಾರೆಯಾದ ಅಭಿಪ್ರಾಯವೇ ಪ್ರಾಮುಖ್ಯವಾಗಿರುತ್ತದೆ. ಈ ಸ್ತ್ರೀಯನ್ನು ಆಕಾಶದಲ್ಲಿ ಕಾಣಿಸಿಕೊಂಡವಳಂತೆ ಊಹಿಸಿಕೊಳ್ಳಿರಿ: ಅವಳು ಸೂರ್ಯನ ಕಿರಣಗಳಿಂದ ಹೆಣೆಯಲಾದ ಪ್ರತಿದಾರವೂ ಹೊಳೆಯುತ್ತಿರುವಂಥ ಪಟಿಕದ ಉಡುಪನ್ನು ಧರಿಸಿದ್ದಳು. ಅವಳ ತಲೆಯುಡಿಗೆಯು ಹನ್ನೆರಡು ಪರಲೋಕಿಕವಾದ ವಜ್ರಗಳಿಂದ ಕೂಡಿದ್ದು ಬಿಳೀ ಹಾಗೂ ಕೆಂಡು ಅಗ್ನಿಯಿಂದ ಮಿಡಿಯುತ್ತಿತ್ತು. ಆಕೆಯ ಪಾದಗಳು ಚಂದ್ರನ ಮೇಲೆ ನೆಡಲ್ಪಟ್ಟಿದ್ದನು.[7] ಆಕೆಯು ಕಂಗೊಳಿಸುತ್ತಿದ್ದಳು, ಮಹಿಮೆಯಿಂದ ಕೂಡಿದವಳು, ಅತ್ಯಮೋಘವಾಗಿದ್ದಳು! ಈ ಅಧ್ಯಾಯದ ಕಡೇ ಭಾಗದಲ್ಲಿ, ಆ ಸ್ತ್ರೀಯನ್ನು ಸಭೆ ಎಂಬಂತೆ ಸೂಚಿಸಲಾಗುತ್ತದೆ. ಈ ಸಂಭಾವ್ಯ ವ್ಯಾಖ್ಯಾನವು ಅನೇಕ ಲೇಖಕರನ್ನು ಲೋಕದ ದೃಷ್ಟಿಕೋನದಿಂದ ಸಭೆಯು ಆಕರ್ಷಕವಾಗಿರಲಿಲ್ಲ, ಆದರೆ ದೇವರ ದೃಷ್ಟಿಕೋನದಿಂದ ನೋಡುವಾಗ ಸುಂದರವಾಗಿತ್ತದೆಂದು ವ್ಯಾಖ್ಯೆ ನೀಡುವಂತೆ ನಡಿಸಿರುತ್ತದೆ.

**ವಚನ 2.** ಹಾಗಿದ್ದರೂ, ಸ್ತ್ರೀಯು ಆಪಾಯಕ್ಕೊಳಗಾಗುವ ಸ್ಥಿತಿಯಲ್ಲಿದ್ದಳು - ಯಾವದೇ ಸ್ತ್ರೀಯು ಸಹ ಒಳಗಾಗಬಹುದಾದ ಆಪಾಯವು ಇವಳಿಗೂ ಇತ್ತು - ಯಾಕೆಂದರೆ **ಆಕೆಯು ಗರ್ಭಿಣಿಯಾಗಿದ್ದು ಪ್ರಸವವೇದನೆಯಿಂದ ಸಂಕಟಪಡುತ್ತಾ ಕೂಗುತ್ತಿದ್ದಳು**. ಮಗುವನ್ನು ಹೆರುತ್ತಿರುವ ಒಬ್ಬ ಸ್ತ್ರೀಗೆ ಯಾವದೇ ಆಲೋಚನೆಗಳಾಗಲಿ ಅಥವಾ ಬೇರೆ ಯಾವ ಕಾರ್ಯಕ್ಕಾದರೂ ಬಲವಾಗಲಿ ಇರುವದಿಲ್ಲ. ಆಕೆಯ ಮೇಲೆ ಹೆರಿಗೆಯ ಸಮಯದಲ್ಲಿ ದಾಳಿ ಮಾಡಿದರೆ, ತನ್ನನ್ನು ಕಾಪಾಡಿಕೊಳ್ಳುವದಕ್ಕೆ ಸಹಾಯಕಳಾಗಿರುವಳು.

ಸ್ತ್ರೀಯ ಮುಂದೆ ತೇಲಾಡುತ್ತಿದ್ದ ಅಪಾಯದ ಕುರಿತು ಅಧ್ಯಯನ ಮಾಡುವದಕ್ಕೆ ಮುಂಚೆ (ವ. 3), ಈ "ಸೂರ್ಯನನ್ನು ಧರಿಸಿದ್ದ, ನಕ್ಷತ್ರ-ಮುಕುಟವುಳ್ಳ, ಚಂದ್ರನಲ್ಲಿ ನಡೆದಾಡುವ

ಸ್ತ್ರೀಯು"[8] ಯಾರೆಂಬುದನ್ನು ಗುರುತಿಸುವದು ಅವಶ್ಯಕವಾಗಿರುತ್ತದೆ. ಆಕೆಯು ಯಾರು ಅಥವಾ ಏನನ್ನು ಪ್ರತಿನಿಧಿಸುತ್ತಾಳೆಂಬದರ ಕುರಿತು ವಿವಾದವು ಬುಗಿಲೆದ್ದಿರುತ್ತದೆ. ಆಕೆಯು ಯಾರೆಂಬದರ ಕುರಿತು ಊಹೆಗಳೊಳಗೆ ಹವ್ವಳು, ಜ್ಞಾನದ ವ್ಯಕ್ತಿಕರಣ, ಪವಿತ್ರಾತ್ಮ, ಮತ್ತು ದೇವರು ಎಂದು ಸಹ ಸೇರಿರುತ್ತವೆ. ಆಕೆಯ ಕೂಸು 5ನೇ ವಚನದಲ್ಲಿ ಕ್ರಿಸ್ತನು ಎಂಬದಾಗಿ ಗುರುತಿಸಲ್ಪಟ್ಟಿದ್ದಾನೆಂಬ ವಾಸ್ತವಾಂಸವು "ಮಧ್ಯಯುಗದ ಸಭೆಯಲ್ಲಿನ ಅನೇಕರು ಆಕೆಯನ್ನು ಯೇಸುವಿನ ತಾಯಿಯಾದ ಮರಿಯಳು ಎಂದು ಗುರುತಿಸುವಂತೆ ನಡಿಸಿತು, ಮತ್ತು ಈ ವ್ಯಾಖ್ಯಾನವು ಕ್ಯಾಥೋಲಿಕ್ ಸಭೆಯಲ್ಲಿ ಈಗಲೂ ಪ್ರಸ್ತುತವಿರುತ್ತದೆ."[9] ಅನೇಕ ಕ್ಯಾಥೋಲಿಕ್ ಮನೆಗಳಲ್ಲಿ ಪ್ರಕಟನೆ 12:1ರಲ್ಲಿ ಸಂಕೇತಿಕತೆಯನ್ನು ಪ್ರತಿಬಿಂಬಿಸುವಂಥ ಚಿತ್ರಗಳನ್ನು ಹಾಕಿಕೊಂಡಿರುತ್ತಾರೆ. ಕೇವಲ 1 ಮತ್ತು 2 ವಚನಗಳನ್ನಷ್ಟೆ ಓದುವದಾದರೆ, ಈ ವ್ಯಾಖ್ಯಾನದೊಂದಿಗೆ ನಾವು ಒಪ್ಪಿಗೆಯನ್ನು ಸೂಚಿಸುವ ಒಲವು ತೋರಬಹುದು, ಆದರೆ ಸನ್ನಿವೇಶವು ಆ ಸ್ತ್ರೀಯು ಒಬ್ಬ ನಿರ್ದಿಷ್ಟವಾದ ವ್ಯಕ್ತಿಯೆಂಬುದನ್ನು ಅಸಾಧ್ಯಗೊಳಿಸುತ್ತದೆ. William Barclayನು ಗಮನಕ್ಕೆ ತರುವದೇನಂದರೆ, "ಆಕೆಯು ಸ್ಪಷ್ಟವಾಗಿ ಒಬ್ಬ ಅತಿಮಾನುಷ ವ್ಯಕ್ತಿಯಾಗಿದ್ದು ಆಕೆಯನ್ನು ಯಾವದೇ ಒಬ್ಬ ಮಾನವ ಜೀವಿಯೊಂದಿಗೆ ಗುರುತಿಸುವದು ಸಾಧ್ಯವೇ ಇರುವದಿಲ್ಲ."[10] ಅನಂತರದಲ್ಲಿ ಸ್ತ್ರೀಯು ಎಲ್ಲಾ ಕ್ರೈಸ್ತತ್ವದ ತಾಯಿ ಎಂಬಂತೆ ಬಿಂಬಿಸಲ್ಪಟ್ಟಿದ್ದಾಳೆ (ವ. 17), ಈ ಚಿತ್ರಣವು ಮರಿಯಳಿಗಂತೂ ಸರಿಹೊಂದುವದು ಸಾಧ್ಯವೇ ಇಲ್ಲ.

ಈ ಸ್ತ್ರೀಯು ಒಬ್ಬ ನಿರ್ದಿಷ್ಟವಾದ ವ್ಯಕ್ತಿಯಲ್ಲವಾದ್ದರಿಂದ, ಅನೇಕರು ಆಕೆಯನ್ನು "ನಂಬಿಗಸ್ತ ಇಸ್ರಾಯೇಲ್" ಎಂದು ಕರೆಯುವದಕ್ಕೆ ಒಲವು ತೋರುತ್ತಾ, ಇಸ್ರಾಯೇಲಿನ ಶಾರೀರಿಕ ದೇಶದಲ್ಲಿರುವ ನಂಬಿಗಸ್ತರನ್ನು ಸೂಚಿಸುತ್ತಾರೆ. ದೇವರು ಇಸ್ರಾಯೇಲ್ ಜನಾಂಗವನ್ನು ಪ್ರತ್ಯೇಕಿಸಿದ ಉದ್ದೇಶವು ಲೋಕದೊಳಗೆ ಮೆಸ್ಸೀಯನನ್ನು ಕರೆ ತರುವದೇ ಆಗಿತ್ತು (ಮೀಕನು 5:2). ಇಸ್ರಾಯೇಲ್ಯವು ದೇವರ ಮದಲಗಿತ್ತಿ ಎಂದು ಕರೆಯಲ್ಪಟ್ಟಿತು ಮತ್ತು ಅನೇಕ ಸಾರಿ ಒಬ್ಬ ಗರ್ಭಿಣಿ ಸ್ತ್ರೀಗೆ ಹೋಲಿಕೆ ಮಾಡಲ್ಪಟ್ಟಿದೆ (ನೋಡಿರಿ ಯೆಶಾಯ 9:6; ಮೀಕನು 4:9, 10). ಸ್ತ್ರೀಯ ಪರಲೋಕದ ಉಡುಪು ಯಾಕೋಬನ/ಇಸ್ರಾಯೇಲ್.ನ ಕುಟುಂಬದ ಕುರಿತು ಯೋಸೇಫನಿಗೆ ಬಿದ್ದ ಕನಸನ್ನು ಸಹ ಜ್ಞಾಪಿಸುವದಾಗಿದೆ (ಆದಿಕಾಂಡ 37:9-11); ಹನ್ನೆರಡು ನಕ್ಷತ್ರಗಳು ಹನ್ನೆರಡು ಮಂದಿ ಮೂಲಪಿತೃಗಳನ್ನು ಸೂಚಿಸಬಹುದಾಗಿದೆ.

ಈ ವ್ಯಾಖ್ಯಾನವು ಯೇಸುವಿನ ಜನನಕ್ಕೆ ಮುಂಚೆ ಬಹಳ ಉತ್ತಮವಾಗಿ ಸರಿಹೊಂದುತ್ತದೆ, ಆದರೆ ಆತನು "ದೇವರ ಬಳಿಗೆ ಎತ್ತಲ್ಪಟ್ಟಿತು" (12:5) ಎಂಬದನ್ನು ನಾವು ಓದಿದ ಬಳಿಕ ಛಿದ್ರಗೊಳ್ಳುತ್ತದೆ. ಕ್ರಿಸ್ತನು ಪರಲೋಕಾರೋಹಣಗೊಂಡ ಬಳಿಕ, ಘಟಸರ್ಪವು "ಸ್ತ್ರೀಯನ್ನು ಹಿಂಸಿಸುವದನ್ನು" ಮಾಡಿತು (12:13); ಮತ್ತು ಪರಲೋಕಾರೋಹಣದ ಬಳಿಕ, ಶಾರೀರಿಕವಾದ ಇಸ್ರಾಯೇಲ್ ಹಿಂಸಿಸಲ್ಪಡಲಿಲ್ಲ ಆದರೆ ಬದಲಾಗಿ ಅದೇ ಹಿಂಸಕನಾಗಿತ್ತು ಎಂಬುದು ಒಂದು ಐತಿಹಾಸಿಕ ವಾಸ್ತವಾಂಶವಾಗಿರುತ್ತದೆ (2:9; 3:9). ಅಷ್ಟಮಾತ್ರವಲ್ಲದೆ, ಕೂಸು "ಎತ್ತಲ್ಪಟ್ಟ" ಬಳಿಕ, ಸ್ತ್ರೀಯು ದೇವರಿಂದ ಕಾಪಾಡಲ್ಪಡುತ್ತಾಳೆ (12:6, 14-16); ಆದರೆ ದೇವರು ಇನ್ನು ಮೇಲೆ ಶಾರೀರಿಕ ಇಸ್ರಾಯೇಲಿಗೆ ಆದ್ಯತೆಯ ಉಪಚಾರವನ್ನು ನೀಡುವದಿಲ್ಲ ಎಂದು ಹೊಸ ಒಡಂಬಡಿಕೆಯು ನಮಗೆ ಕಲಿಸುತ್ತದೆ (ರೋಮಾ 2:28, 29; 10:12; ಗಲಾತ್ಯ 3:26-29).

5ನೇ ವಚನದ ಬಳಿಕ, ಆ ಸ್ತ್ರೀಯು ಸಭೆ ಎಂಬುದು ಸ್ಪಷ್ಟವಾಗಿರುವಂತೆ ತೋರುತ್ತದೆ. ಪ್ರಕಟನೆ ಪುಸ್ತಕದುದ್ದಕ್ಕೂ, ಹಿಂಸೆಗೊಳಗಾಗುತ್ತಿರುವದು ಸಭೆಯೇ ಆಗಿದ್ದು ಆ ಸಭೆಯನ್ನೇ

ದೇವರು ಕಾಪಾಡುತ್ತಿದ್ದಾನೆ. ಹೀಗೆ "ಯೋಹಾನನ ಪ್ರಕಟನೆಯ ಪುಸ್ತಕದ ಕುರಿತಾದ ಅತ್ಯಂಥ ಪ್ರಾಚೀನ ವ್ಯಾಖ್ಯಾನಕಾರರು ಆ ಸ್ತ್ರೀಯನ್ನು ಸಭೆ ಎಂಬದಾಗಿ ಪರಿಗಣಿಸಿದ್ದರು."[11] ಹೇಗೂ, ಆ ಗುರುತು ಅಧ್ಯಾಯದ ಮೊದಲ ಐದು ವಚನಗಳಿಗೆ ವಿರುದ್ಧವಾಗಿರುವಂತೆ ತೋರುತ್ತದೆ, ಅವುಗಳು ಆ ಸ್ತ್ರೀಯು ಯೇಸುವಿಗೆ ಜನ್ಮ ನೀಡುವ ಕುರಿತು ಮಾತಾಡುತ್ತವೆ. ಸಭೆಯು ಯೇಸುವಿಗೆ ಜನ್ಮ ನೀಡಲಿಲ್ಲ; ಬದಲಾಗಿ ಯೇಸುವು ಸಭೆಗೆ ಜನ್ಮ ನೀಡಿದನು (ಮತ್ತಾಯ 16:18, 19).

ಈ ಸ್ತ್ರೀಯು ಪ್ರಕಟನೆ ಪುಸ್ತಕದಲ್ಲಿ ಅಸಹಜವೇನೂ ಅಗಿರದಂಥ ಸಂಕೇತಗಳು ಬದಲಾಗುವಿಕೆಗಳಲ್ಲೊಂದಾಗಿದ್ದಾಳೆ ಎಂದು ತೋರುತ್ತದೆ, ಮೊದಲು ಆಕೆಯು ಒಂದು ಸಂಗತಿಯನ್ನು ಪ್ರತಿನಿಧಿಸಿದರೆ, ಅನಂತರದಲ್ಲಿ ಮತ್ತೊಂದನ್ನು ಪ್ರತಿನಿಧಿಸುತ್ತಾಳೆ. ಬಹುಶಃ ತೊಂದರೆಯನ್ನು ಅಳಿಸುವದಕ್ಕೆ ಸರಳವಾದ ದಾರಿಯೆಂದರೆ ಹಳೆಯ ಒಡಂಬಡಿಕೆಯಲ್ಲಿನ ಶಾರೀರಿಕ ಇಸ್ರಾಯೇಲ್ ಹಾಗೂ ಹೊಸ ಒಡಂಬಡಿಕೆಯ ಆತ್ಮೀಕ ಇಸ್ರಾಯೇಲ್ ನಡುವಿನ ಸಂಬಂಧವನ್ನು ಜ್ಞಾಪಕದಲ್ಲಿಟ್ಟುಕೊಳ್ಳುವದೇ ಆಗಿದೆ. ಸಭೆಯು ಇಸ್ರಾಯೇಲ್ ವಿಷಯದಲ್ಲಿ ದೇವರು ಹೊಂದಿದ್ದ ಮೂಲ ಯೋಜನೆಯನ್ನು ನೆರವೇರಿಸಿತು (7:5-8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಇಸ್ರಾಯೇಲನ್ನು ಸೂಚಿಸಿ ಹೇಳಲಾಗುತ್ತಿದ್ದ ಹಳೆಯ ಒಡಂಬಡಿಕೆಯ ಪದಗಳು ಈಗ ಸಭೆಗೆ ಅನ್ವಯಿಸಲ್ಪಡುತ್ತವೆ: ಸಭೆಯು "ದೇವರು ಸಂಪಾದಿಸಿಕೊಂಡ ಜನ" (ಎಫೆಸ 1:14) ಮತ್ತು ದೇವರ "ಮೀಸಲಾದ ಜನ" (1 ಪೇತ್ರ 2:9). ಅಬ್ರಹಾಮನು ಈಗ "ನಂಬುವವರೆಲ್ಲರಿಗೆ ಪಿತೃ" ಆಗಿದ್ದಾನೆ (ರೋಮಾ 4:11); ಸಭೆಯು "ದೇವರ ಇಸ್ರಾಯೇಲ್" ಎಂದು ಕರೆಯಲ್ಪಟ್ಟಿದೆ (ಗಲಾತ್ಯ 6:16); "ನಿಜವಾದ ಸುನ್ನತಿಯವರು ಯಾರೆಂದರೆ - ದೇವರಾತ್ಮನಿಂದ ಪ್ರೇರಿತರಾಗಿ ಆರಾಧಿಸುವವರೂ ಕ್ರಿಸ್ತ ಯೇಸುವಿನಲ್ಲಿ ಹರ್ಷಗೊಳ್ಳುವವರೂ" (ಫಿಲಿಪ್ಪಿ 3:3). ಆದ್ದರಿಂದ ನಾವು ಯಾವ ಸಂಕೋಚವಿಲ್ಲದೆ ಸ್ತ್ರೀಯನ್ನು "ಇಸ್ರಾಯೇಲ್" ಎಂಬ ಜೈವಿಕ ಪದದಿಂದ ಗುರುತಿಸಬಹುದು - ಯೇಸುವಿನ ಜನನಕ್ಕೆ ಮುಂಚೆ ಆಕೆಯು ಶಾರೀರಿಕ ಇಸ್ರಾಯೇಲ್ ಆಗಿದ್ದಳು, ಮತ್ತು ಪರಲೋಕಾರೋಹಣದ ಬಳಿಕ, ಆಕೆಯು ಆತ್ಮೀಕ ಇಸ್ರಾಯೇಲ್, ಸಭೆ ಆಗಿದ್ದಾಳೆ.

Leon Morrisನು ಹೇಳಿದ್ದೇನೆಂದರೆ, "ಆದಿ ಕ್ರೈಸ್ತರ ಮಟ್ಟಿಗದಾರೋ ಹಳೆಯ ಇಸ್ರಾಯೇಲ್ ಹಾಗೂ ನಿಜವಾದ ಇಸ್ರಾಯೇಲ್ ಆಗಿರುವ ಸಭೆಯ ನಡುವೆ ಒಂದು ಪ್ರಾಮುಖ್ಯವಾದ ಮುಂದುವರಿಕೆ ಇತ್ತು."[12] Edward Myers ನು ಈ ಸ್ತ್ರೀಯನ್ನು "ಎರಡೂ ಒಡಂಬಡಿಕೆಯ ಕೆಳಗಿದ್ದ ದೇವರ ಜನರು"[13] ಎಂದು ಗುರುತಿಸಿದರೆ, Bruce Metzgerನು ಆಕೆಯನ್ನು "ದೇವರ ಜನರಿಗೆ ಒಂದು ಆದರ್ಶ ಸಮುದಾಯ, ಮೊದಲು ಯೆಹೂದಿ ರೂಪದಲ್ಲಿ ... ಮತ್ತು ನಂತರ ಅದರ ಕ್ರೈಸ್ತ ರೂದಲ್ಲಿ"[14] ಎಂದು ಕರೆಯುತ್ತಾನೆ.

ಇದು ಆ ಸ್ತ್ರೀಯು ಯಾರನ್ನು ಪ್ರತಿನಿಧಿಸುತ್ತಾಳೆಂಬುದಕ್ಕೆ ಒಂದು ತಕ್ಕದಾದ ವಿವರಣೆಯಾಗಿರುತ್ತದೆ. ನಿಖರವಾಗಿ ಗುರುತು ಹಿಡಿಯುವದಕ್ಕಿಂತ ಹೆಚ್ಚು ಪ್ರಾಮುಖ್ಯವಾದದ್ದೇನೆಂದರೆ ಆಕೆಯ ಮತ್ತು ಘಟಸರ್ಪದ ನಡುವಿನ ತದ್ವಿರುದ್ಧತೆಯೇ ಆಗಿದೆ. ಈ ಸುಂದರವಾದ ಆದರೆ ಒಳಪಡಬಹುದಾಗಿದ್ದ ಜೀವಿಯ ಮುಂದರೆ ಆ ಸ್ತ್ರೀಯು ಎಷ್ಟು ಸುಂದರಳಾಗಿದ್ದಳೋ ಅಷ್ಟೇ ಕುರೂಪವಾಗಿದ್ದ ಪೆಡಂಬೂತವು ಹೊಂಚು ಹಾಕಿ ಕುಳಿತಿತ್ತು.[15]

**ವಚನ 3. ಪರಲೋಕದಲ್ಲಿ ಮತ್ತೊಂದು ಲಕ್ಷಣವು ಕಾಣಿಸಿತು. ಅದೇನಂದರೆ ಕೆಂಪಾದ ಮಹಾ ಘಟಸರ್ಪವಿತ್ತು; ಅದಕ್ಕೆ ಏಳು ತಲೆಗಳೂ ಹತ್ತು ಕೊಂಬುಗಳೂ ಇದ್ದವು; ಅದರ ತಲೆಗಳ ಮೇಲೆ ಏಳು ಮುಕುಟಗಳಿದ್ದವು.** ಈ ಜೀವಿಯು ಮಕ್ಕಳ ಯಕ್ಷಿಣಿ-ಕಥೆ ಪುಸ್ತಕದಲ್ಲಿ ಬರುವಂಥ

ಘಟಸರ್ಪವಲ್ಲ. ಬದಲಾಗಿ, ಇದು ಏಳು ತಲೆಗಳುಳ್ಳ ಕಾಲುಗಳಿಂದ ಕೂಡಿದ ಒಂದು ರಾಕ್ಷಸಾಕಾರದ ಸರೀಸೃಪವಾಗಿತ್ತು. ಆತನನ್ನು 9ನೇ ವಚನದಲ್ಲಿ ಒಂದು *ಘಟಸರ್ಪ* ಎಂದು ಕರೆಯಲಾಗಿದೆ, ಮತ್ತು 4ನೇ ವಚನದಲ್ಲಿ ಆತನು *ನಿಂತಿದ್ದನು* ಎಂದು ಹೇಳಲಾಗಿರುತ್ತದೆ.

ಸ್ತ್ರೀಯ ಗುರುತಿನ ವಿಷಯದಲ್ಲಿ ಒಂದು ಶಿಕ್ಷಿತವಾದ ಊಹೆಯನ್ನು ಮಾಡತಕ್ಕದ್ದು, ಆದರೆ ಘಟಸರ್ಪದ ಕುರಿತಾಗಿ ಊಹಾಪೋಹಗಳ ಅವಶ್ಯಕತೆಯಿಲ್ಲ. 9ನೇ ವಚನದಲ್ಲಿ ಆತನು "ಭೂಲೋಕದವರನ್ನೆಲ್ಲಾ ಮರುಳುಗೊಳಿಸುವ ಆ ಮಹಾ ಘಟಸರ್ಪನು ಅಂದರೆ ಪಿಶಾಚನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪ" ಎಂದು ಗುರುತಿಸಲ್ಪಟ್ಟಿದ್ದಾನೆ (ನೋಡಿರಿ 20:2).

ವ್ಯಾಖ್ಯಾನಕಾರರು ಘಟಸರ್ಪದ ಬಣ್ಣನೆಗಳಲ್ಲಿರುವ ನಿಗೂಢ ಅರ್ಥಗಳನ್ನು ಕಂಡುಹಿಡಿಯುವದಕ್ಕೆ ಪ್ರಯತ್ನಿಸುತ್ತಾರೆ. ಈ ಅಭ್ಯಾಸವನ್ನು ಸಾಮಾನ್ಯವಾಗಿ ಏಳು ತಲೆಗಳು, ಹತ್ತು ಕೊಂಬುಗಳು ಹಾಗೂ ಇತರ ಗುಣಸ್ವಭಾವಗಳು ಮೊದಲ ಮೃಗಕ್ಕೆ ಸಂಬಂಧಪಟ್ಟಂತೆ ಯಾವ ಅರ್ಥವನ್ನು ಹೊಂದಿರುತ್ತವೆಂದು ತಿಳಿಸುವ ಮೂಲಕ ಮಾಡಲಾಗುತ್ತದೆ (17:9-13ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಘಟಸರ್ಪ ಹಾಗೂ ಮೊದಲ ಮೃಗವು ಅನೇಕ ಸಾಮ್ಯತೆಗಳನ್ನು ಹೊಂದಿವೆಯಾದರೂ, ನಾವು ಮೊದಲ ಮೃಗದಿಂದ ನಿರ್ಣಯಗಳನ್ನು ಮಾಡಿ ಅನಂತರ ಅವುಗಳನ್ನು ಘಟಸರ್ಪಕ್ಕೆ ಅನ್ವಯಿಸಬೇಕು ಎಂಬುದಕ್ಕೆ ಯಾವದೇ ಸೂಚನೆಯೂ ಇರುವದಿಲ್ಲ. ಮೂಲತಃ ಪ್ರತಿಯೊಂದು ಅಂಶವು ಅಪಾಯಕಾರಿ ವೈರಿಯ ಚಿತ್ರಣದ ಒಟ್ಟಾರೆ ಪ್ರಭಾವಕ್ಕೆ ಮತ್ತಷ್ಟು ಕೂಡಿಸುತ್ತದಷ್ಟೆ.

ಆತನು ಒಂದು *ಘಟಸರ್ಪ*: ಪುರಾತನ ಜಗತ್ತಿನ ಅಂತ್ಯಕಾಲಿಕ ಸಾಹಿತ್ಯದಲ್ಲಿ, ಕೆಟ್ಟತನವನ್ನು ಪ್ರತಿನಿಧಿಸುವ ಸಕಲ ಚಿತ್ರಣಗಳಲ್ಲಿ **ಘಟಸರ್ಪ**ವು ಅತ್ಯಂಥ ಸಾಮಾನ್ಯವಾಗಿ ಕಂಡು ಬರುವದಾಗಿತ್ತು. ಆತನು ದುಷ್ಟತನ, ವಿನಾಶಕಾರಿ, ಮತ್ತು ದೇವರ ವಿರುದ್ಧ ಬಂಡಾಯಕರವಾಗಿರುವ ಎಲ್ಲವನ್ನೂ ಪ್ರತಿನಿಧಿಸುತ್ತಾನೆ. ಹಳೆಯ ಒಡಂಬಡಿಕೆಯಲ್ಲಿ "ಘಟಸರ್ಪ" ಎಂಬ ಪದದ ಬಳಕೆಗೆ ಎರಡು ಉದಾಹರಣೆಗಳೆಂದರೆ ಯೆಶಾಯ 27:1 ಮತ್ತು 51:9. ಹೊಸ ಒಡಂಬಡಿಕೆಯೊಳಗೆ ಘಟಸರ್ಪ ಎಂಬ ಪದವು ಕಂಡು ಬರುವ ಏಕೈಕ ಸ್ಥಳವೆಂದರೆ ಅದು ಪ್ರಕಟನೆ ಪುಸ್ತಕವೇ.

ಆತನು *ಕೆಂಪಾದ* ಘಟಸರ್ಪ: ಆತನ ರಕ್ತ-**ಕೆಂಪಾದ** ಬಣ್ಣವು ಆತನು ಕೊಲೆಪಾತಕ ಪ್ರವೃತ್ತಿ (6:4) ಮತ್ತು ಆತನ ಪಾಪಭರಿತ ಸ್ವಭಾವ ಎರಡನ್ನೂ ಸೂಚಿಸುತ್ತದೆ (ಯೆಶಾಯ 1:18).

ಆತನು *ಏಳು-ತಲೆಗಳ* ಘಟಸರ್ಪ: **ಏಳು ತಲೆಗಳು** ಬಹುಶಃ ಆತನ ಮಹಾ ತಂತ್ರಗಾರಿಕೆ ಮತ್ತು ಕುಯುಕ್ತಿಯನ್ನು ಪ್ರತಿನಿಧಿಸುತ್ತದೆ (2 ಕೊರಿಂಥ 11:3). ಆತನ ತಲೆಗಳು ಮಾನಸಿಕ ಸಾಮರ್ಥ್ಯಕ್ಕಿಂತಲೂ ಆತನ ಅಧಿಕಾರವನ್ನು ಪ್ರತಿನಿಧಿಸುತ್ತವೆ ಎಂದು ಕೆಲವರು ಯೋಚಿಸುತ್ತಾರೆ. ಆತನಿಗಿರುವ ಅನೇಕ ತಲೆಗಳು ಆತನನ್ನು ನಾಶಗೊಳಿಸುವದು ಕಷ್ಟಕರ ಎಂಬುದನ್ನು ಸೂಚಿಸುತ್ತಿರಬಹುದಾಗಿದೆ. ಗ್ರೀಕ್ ಪುರಾಣ ಕಥೆಯಲ್ಲಿನ ಅನೇಕ ತಲೆಗಳುಳ್ಳ ಹೈದ್ರಾ ದೇವತೆಯನ್ನು ಕೊಲ್ಲುವದು ಕಠಿಣವಾಗಿತ್ತು. ಒಂದು ತಲೆಯನ್ನು ಕೊಂದು ಹಾಕಿದ ತಕ್ಷಣವೇ, ಇನ್ನೊಂದು ತಲೆಯು ಆಕ್ರಮಣ ಮಾಡುತ್ತಿತ್ತು. ಹೇಗೂ, ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದದ್ದೇನೆಂದರೆ, ಈ ಎಲ್ಲಾ ಚಿತ್ರಣಗಳು ಸಾಂಕೇತಿಕವಾಗಿವೆ. 16:13ರಲ್ಲಿ ಘಟಸರ್ಪವು ಈ *ಒಂದು ಬಾಯಿ* ಉಳ್ಳದ್ದು ಎಂದು ಪ್ರತಿನಿಧಿಸಲ್ಪಟ್ಟಿದೆ - ಆತನಿಗೆ *ಏಳು ತಲೆಗಳು* ಇದ್ದವು ಎಂಬ ವಾಸ್ತವಾಂಶದ ಹೊರತಾಗಿಯೂ ಒಂದೇ ಬಾಯಿ!

ಆತನು *ಹತ್ತು-ಕೊಂಬುಗಳು* ಉಳ್ಳ ಘಟಸರ್ಪ: ಕೊಂಬುಗಳು ಬಲದ ಸಂಕೇತವಾಗಿದ್ದವು. **ಹತ್ತು ಕೊಂಬುಗಳು** ಆತನಿಗಿರುವ ಮಹಾ ಶಕ್ತಿಯನ್ನು ಸೂಚಿಸುತ್ತವೆ (5:6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಕುರಿಯಾದಾತನ ಬಲವು ಮತ್ತು ಘಟಸರ್ಪದ ಬಲವು ವ್ಯತ್ಯಾಸವಾಗಿವೆ: ಕುರಿಯಾದಾತನ ಬಲವು ಆತನಿಗೆ ಅಂತರ್ಗತವಾಗಿರುವಂತದ್ದು ಮತ್ತು ಶಾಶ್ವತವಾದದ್ದು; ಘಟಸರ್ಪದ ಬಲವು ಆತನಿಗೆ ದೇವರು ಅನುಮತಿಸುವಷ್ಟು ಮಾತ್ರವೇ ಆಗಿದೆ ಮತ್ತು ತಾತ್ಕಾಲಿಕವಾದದ್ದು. *ಏಳು* ತಲೆಗಳೊಳಗೆ *ಹತ್ತು* ಕೊಂಬುಗಳು ಹೇಗೆ ಸರಿಹೊಂದಬಲ್ಲವು? ಅದು ಮುಖ್ಯವೇ ಅಲ್ಲ ಯಾಕೆಂದರೆ ಈ ಭಾಷೆಯು ಸಾಂಕೇತಿಕವಾದದ್ದು.

ಆತನು *ಏಳು-ಮುಕುಟಗಳುಳ್ಳ* ಘಟಸರ್ಪನು: **... ಅದರ ತಲೆಗಳ ಮೇಲೆ ಏಳು ಮುಕುಟಗಳಿದ್ದವು.** "ಮುಕುಟ" ಎಂಬುದು ಗ್ರೀಕ್ ಭಾಷೆಯ διάδημα (*diadēma*) ಎಂಬ ಪದದಿಂದ ಅನುವಾದಿಸಲ್ಪಟ್ಟಿದ್ದು, ಅದರರ್ಥವು "ಆಳ್ವಿಕೆಯ ಕಿರೀಟ" - ಜಯಮಾಲೆಯಾಗಿರುವ *stephanos* ಎಂಬುದಕ್ಕೆ ತದ್ವಿರುದ್ಧವಾದದ್ದು. "ಮುಕುಟ" ಎಂಬ ಪದವು ಹೊಸ ಒಡಂಬಡಿಕೆಯೊಳಗೆ ಕೇವಲ ಮೂರು ಸಾರಿ ಕಾಣಿಸಿಕೊಳ್ಳುವದಾಗಿದ್ದು, ಎಲ್ಲಾ ಮೂರು ಸಾರಿಯೂ ಪ್ರಕಟನೆ ಪುಸ್ತಕದಲ್ಲಿ ಕಾಣಸಿಕೊಂಡಿರುತ್ತದೆ: 12:3, 13:1, ಮತ್ತು 19:12. ಏಳು ಮುಕುಟಗಳು ಘಟಸರ್ಪಕ್ಕಿರುವ ಮಹಾ ಆಧಿಕಾರವನ್ನು ಸೂಚಿಸುತ್ತದೆ. (ಮತ್ತಾಯ 12:24; ಯೋಹಾನ 12:31; 14:30; 16:11; ಎಫೆಸ 2:2ರಲ್ಲಿ ಸೈತಾನನನ್ನು ಬಣ್ಣಿಸುವದಕ್ಕೆ ಬಳಸಿರುವ ಪದಗಳನ್ನ ನೋಡಿರಿ.)

**ವಚನ 4. ಅದರ ಬಾಲವು ಆಕಾಶದಲ್ಲಿರುವ ನಕ್ಷತ್ರಗಳೊಳಗೆ ಮೂರಲ್ಲೊಂದು ಭಾಗವನ್ನು ಎಳೆದು ಭೂಮಿಗೆ ಹಾಕಿತು** (8:7-10ರ ಮೇಲಿನ ವ್ಯಾಖ್ಯೆಗಳನ್ನ ನೋಡಿರಿ). ಆತನು *ಮಹಾ* ಘಟಸರ್ಪ: "ಆತನ ಬೃಹತ್ ಗಾತ್ರವು ಈ ಹೇಳಿಕೆಯಿಂದ ಸೂಚಿಸಲ್ಪಟ್ಟಿರುತ್ತದೆ, ಏನೆಂದರೆ ಆತನು ಆಕಾಶದಲ್ಲಿ ಹೊಂಚು ಹಾಕಿ ನಿಂತಿದ್ದ ವೇಳೆ, ಆತನ ಬಾಲದ ಒಂದೇ ಒಂದು ಅಲ್ಲಾಡುವಿಕೆಯಿಂದ ಆಕಾಶದಲ್ಲಿರುವ ನಕ್ಷತ್ರಗಳೊಳಗೆ ಮೂರಲ್ಲೊಂದು ಭಾಗವನ್ನು ಕಿತ್ತು ಭೂಮಿಗೆ ಬೀಳುವಂತೆ ಮಾಡುತ್ತಾನೆ."[16] ಅನೇಕರು ಈ ಕೃತ್ಯದಲ್ಲಿ ಒಂದು ಸಾಂಕೇತಿಕ ಮಹತ್ವಪೂರ್ಣತೆಯನ್ನು ಕಾಣುತ್ತಾರೆ. ಕೆಲವರು ಇದನ್ನು ಪ್ರಭಾವಶಾಲಿ ವ್ಯಕ್ತಿಗಳ ಮೇಲೆ ಸೈತಾನನಿಗಿರುವ ಶಕ್ತಿಗೆ ಸೂಚನೆಯೆಂಬಂತೆ ಕಾಣುತ್ತಾರೆ. ಇನ್ನು ಕೆಲವರು ಸೈತಾನನು ದೇವರಿಗೆ ವಿರುದ್ಧ ಬಂಡಾಯವೆದ್ದ ವೇಳೆ ಬೇರೆ ದೇವದೂತರನ್ನು ದಾರಿತಪ್ಪಿಸಿ ನಡಿಸುವದನ್ನು ಸೂಚಿಸುತ್ತದೆಂದು ಯೋಚಿಸುತ್ತಾರೆ. ಹೇಗೂ, ಇದು ಬಹುಶಃ "ಆತನ ಶಕ್ತಿಯನ್ನು ತೋರ್ಪಡಿಸುವಿಕೆ ಅಲ್ಲದೆ ಮತ್ತೇನೂ ಅಲ್ಲ"[17] ಎಂಬುದೆ, ನಿಜಕ್ಕೂ ಅಲ್ಲೊಬ್ಬ ದಿಗಿಲು ಹುಟ್ಟಿಸುವ ವೈರಿಯೇ ಇರುತ್ತಾನೆ ಎಂಬ ಭಾವನೆಯನ್ನು ಭದ್ರಗೊಳಿಸುವದಕ್ಕೆ ರಚಿತವಾಗಿರುತ್ತದೆ.

ನಾವು ಅದರ ವಿವರಗಳಲ್ಲಿ ಮುಳುಗಿ ಹೋಗುವ ಅಗತ್ಯವಿಲ್ಲ, ಆದರೆ ವಿರುದ್ಧ ಹೋಲಿಕೆಯ ಮೇಲೆ ಮುಖ್ಯ ಗಮನವನ್ನು ಕೊಡತಕ್ಕದ್ದು. ಒಂದು ಕಡೆಯಲ್ಲಿ ಅಸಹಾಯಕಳಂತೆ ತೋರುವ ಒಬ್ಬ ಸ್ತ್ರೀಯು ಇದ್ದಾಳೆ. ಇನ್ನೊಂದು ಕಡೆಯಲ್ಲಿ ಮುಗಿಲೆತ್ತರದ, ಬಹು-ತಲೆಗಳ, ಬೆಂಕಿಯಂಥ-ಕೆಂಪಾದ ಘಟಸರ್ಪ ಇರುತ್ತಾನೆ, ಆತನ ಮಣಿಗಣ್ಣುಗಳನ್ನು ಪ್ರಸವವೇದನೆಯಿಂದ ಕೂಗುತ್ತಾ ಇದ್ದ ಸ್ತ್ರೀಯ ಮೇಲೆಯೇ ನೆಟ್ಟವನಾಗಿ ಆಕೆಯ ಕೂಸು ಹುಟ್ಟಿದ ಕೂಡಲೆ ಅದರ ಮೇಲೆ ಏಕಾಏಕಿ ಮೇಲೆರಗಿ ಹಿಡಿದುಕೊಳ್ಳಲು ಸಿದ್ಧವಾಗಿದ್ದನು. ಸಹಾಯಕತೆ ಹಾಗೂ ಮೇಲುಗೈ ಸಾಧಿಸುವ ಶಕ್ತಿ ನಡುವೆ ಎಂದಾದರೂ ತದ್ವಿರುದ್ಧ ಹೋಲಿಕೆಯಿದ್ದದ್ದಾದರೆ, ಅದು ಇದುವೇ ಆಗಿದೆ! ಈ ದೃಶ್ಯವನ್ನು ನೋಡುವ ಸರಾಸರಿ

ಮನುಷ್ಯನು ಸ್ತ್ರೀ ಹಾಗೂ ಆಕೆಯ ಕೂಸು ಬದುಕುಳಿಯುವ ಅವಕಾಶವೇ ಇಲ್ಲ ಎಂದು ಹೇಳುವನು. ಫಲಿತಾಂಶವು ಈಗಾಗಲೇ ಏನೆಂಬುದು ಮುಂಚೆಯೇ ನಿರ್ಧರಿತವಾಗಿತ್ತು. ಕೆಲವರು ಈ ಘಟಸರ್ಪವು ಕೂಸು ಹುಟ್ಟುವದಕ್ಕೆ ಮುಂಚೆಯೇ ಸ್ತ್ರೀಯನ್ನು ಏಕೆ ನುಂಗಿ ಬಿಡಲಿಲ್ಲ, ಅದು ಸಹ ಅದೇ ಉದ್ದೇಶವನ್ನು ಸಾಧಿಸಿದಂತಾಗಿರುತ್ತಿತ್ತು ಎಂದು ಕೇಳುತ್ತಾರೆ. ಆ ಪ್ರಶ್ನೆಯು 12ನೇ ಅಧ್ಯಾಯದಲ್ಲಿನ ಸಾಂಕೇತಿಕತೆ ವ್ಯಾಪ್ತಿಯಿಂದ ಹೊರಗಿರುವದಾಗಿದೆ, ಆದರೆ ವಾಸ್ತವಿಕವಾಗಿ ನೋಡುವದಾದರೆ ಸೈತಾನನು ಸ್ತ್ರೀಯನ್ನು (ಇಸ್ರಾಯೇಲ್ ಜನಾಂಗ) ಮೆಸ್ಸೀಯನಿಗೆ ಜನ್ಮ ನೀಡದಂತೆ ತಡೆಯುವದಕ್ಕೆ ಪ್ರಯತ್ನವನ್ನಂತೂ *ಮಾಡಿರುತ್ತಾನೆ* (ನೋಡಿರಿ 1 ಸಮುವೇಲ 19:1; 2 ಅರಸು 11:1, 2; ಎಸ್ತೇರಳು 3:13). ಕಾರ್ಯತಂತ್ರವು ವಿಫಲವಾಗಿತ್ತಾದ್ದರಿಂದ, ಸೈತಾನನ "ಪರ್ಯಾಯ ಯೋಜನೆಯು" ಸ್ವತಃ ಮೆಸ್ಸೀಯನನ್ನೇ ನಾಶಗೊಳಿಸುವದಾಗಿತ್ತು.

4ನೇ ವಚನದ ಮುಕ್ತಾಯದಲ್ಲಿ, **ಹೆರುತ್ತಿದ್ದ ಆ ಸ್ತ್ರೀಯು ಹೆತ್ತ ಕೂಡಲೆ ಆಕೆಯ ಮಗುವನ್ನು ನುಂಗಿಬಿಡಬೇಕೆಂದು ಆ ಘಟಸರ್ಪವು ಅಲ್ಲೇ ಕಾದುಕೊಂಡಿತ್ತು.** ಸೈತಾನನು ಏಕೆ ತನ್ನ ಉದ್ದೇಶವನ್ನು ಸಾಧಿಸಲಿಲ್ಲ ಎಂಬುದಕ್ಕೆ ಕಾರಣವೇ ಇಲ್ಲದಂತೆ ತೋರುತ್ತಿತ್ತು. ಜನನದ ಕ್ಷಣದಲ್ಲಿ, ಸ್ತ್ರೀ ಹಾಗೂ ಆಕೆಯ ನವಜಾತ ಕೂಸು ಅಸಹಾಯಕವಾಗಿರುತ್ತಿದ್ದರು ಮತ್ತು ಆತನ ಕರುಣೆಗೆ ಒಳಪಟ್ಟವರಾಗಿದ್ದರು. ಕಥೆಯು ಮುಂದುವರೆಯುವಾಗ, ದೇವರ ಮಧ್ಯಪ್ರವೇಶಿಸುವಿಕೆಯ ಕುರಿತು ಅತ್ಯಾಶ್ಚರ್ಯಗೊಳ್ಳುವದಕ್ಕೆ ವಾಚಕನು ಸಿದ್ಧವಾಗಿರಬೇಕು.

**ವಚನ 5.** 5ನೇ ವಚನದ ಮೊದಲ ಭಾಗವು ನಮಗೆ ಮಗುವಿನ ಜನನದ ಕುರಿತು ತಿಳಿಸುತ್ತದೆ ಮತ್ತು ಆ ಮಗುವಿನ ಗುರುತನ್ನು ಹೇಳುತ್ತದೆ: **ಆಕೆ ಜನಾಂಗಗಳನ್ನು ಕಬ್ಬಿಣದ ಕೋಲಿನಿಂದ ಆಳಬೇಕಾದ ಒಂದು ಗಂಡು ಮಗುವನ್ನು ಹೆತ್ತಳು.** ಜನಾಂಗಗಳನ್ನು **ಕಬ್ಬಿಣದ ಕೋಲಿನಿಂದ** ಆಳುವದರ ಕುರಿತ ಉಲ್ಲೇಖವು ಕೀರ್ತನೆ 2ರಿಂದ ತೆಗೆದುಕೊಳ್ಳಲ್ಪಟ್ಟದ್ದಾಗಿದೆ, ಅದೊಂದು ಮೆಸ್ಸೀಯನಿಗೆ ಸಂಬಂಧಿಸಿದ ಕೀರ್ತನೆಯಾಗಿದ್ದು ಹೊಸ ಒಡಂಬಡಿಕೆಯ ಲೇಖಕರಿಂದ ಯೇಸುವಿಗೆ ಅನ್ವಯಗೊಳಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 13:33; ಇಬ್ರಿಯ 1:5; 5:5; ಪ್ರಕಟನೆ 2:26, 27). 19ನೇ ಅಧ್ಯಾಯದಲ್ಲಿ ಯೇಸುವಿನ ವಿಷಯವಾಗಿ ಹೀಗೆ ಬರೆದದೆ, "ಜನಾಂಗಗಳನ್ನು ಹೊಡೆಯುವದಕ್ಕಾಗಿ ಹದವಾದ ಕತ್ತಿಯು ಆತನ ಬಾಯಿಂದ ಬರುತ್ತದೆ. ಆತನು ಅವರನ್ನು ಕಬ್ಬಿಣದ ಕೋಲಿನಿಂದ ಆಳುವನು ..." (19:15; 11:18ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). 12:5ರಲ್ಲಿನ ಗಂಡು ಮಗುವು ಯೇಸುವೇ ಎಂಬುದರಲ್ಲಿ ಯಾವ ಸಂಶಯವೂ ಇರುವದಿಲ್ಲ.

**ಆಳಬೇಕಾದ** ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ποιμαίνω (*poimainō*) ಎಂಬುದರಿಂದ ತೆಗೆದುಕೊಳ್ಳಲ್ಪಟ್ಟಿದ್ದು, ಅದರರ್ಥವು "ಕುರುಬನಾಗಿರುವದು" ಎಂದಾಗಿದೆ. ಬಹುಶಃ ಕೀರ್ತನೆ 23 ಈ ಭಾವನೆಯ ಮೇಲಿನ ಒಂದು ಉತ್ತಮ ವ್ಯಾಖ್ಯಾನವಾಗಿರುವದು: ಕುರುಬರು ತಮ್ಮ ಆರೈಕೆಯಲ್ಲಿರುವವರ ಕಡೆಗೆ ಕೋಮಲತೆಯಿಂದ ನಡೆದುಕೊಳ್ಳುತ್ತಿದ್ದರು, ಆದರೆ ತಮ್ಮ ಮಂದೆಗೆ ಕೇಡು ಮಾಡುವವರ ಕಡೆಗೆ ನಿರ್ದಾಕ್ಷಿಣ್ಯವಾಗಿರುತ್ತಿದ್ದರು. ಕಬ್ಬಿಣ ಕೋಲಿನ ಉದ್ದೇಶವು ಬಹುಶಃ ಕುರಿ ಮಂದೆಯ ವೈರಿಗಳನ್ನು ದಂಡಿಸುವದಾಗಿತ್ತು.

"ಮಗನನ್ನು, ಗಂಡು ಮಗುವನ್ನು" ಎಂಬ ಪದಗುಚ್ಛದ ಅಸಹಜವಾದ ವಿನ್ಯಾಸವನ್ನು ಗಮನಿಸಿರಿ. ಗ್ರೀಕ್ ಹಾಗೂ ಆಂಗ್ಲ ಎರಡೂ ಭಾಷೆಯಲ್ಲಿ, **ಮಗ** ಎಂಬ ಪದದ ಅರ್ಥವು "ಗಂಡು ಮಗು" ಎಂದಾಗಿರುತ್ತದೆ. **ಗಂಡು** ಎಂಬ ಪದವು ಅವಶ್ಯಕ್ಕಿಂತ ಅಧಿಕವೆಂದೆಣಿಸುತ್ತದೆ, ಆದರೆ ಹುಟ್ಟಿರುವವನ ಗಂಡುತನವನ್ನು ಒತ್ತಿ ಹೇಳುವ ಇಬ್ರಿಯ ವಿಧಾನ ಅದಾಗಿರುತ್ತದೆ. ಈ

ಪದಗುಚ್ಛದ ವಿಷಯವಾಗಿ, Albertus Pietersನು ಹೀಗೆ ಬರೆದನು, "ಬಹುಶಃ ನಾವು ಒಂದು ಅಶಿಷ್ಟ ಭಾಷೆಯನ್ನು ಬಳಕೆ ಮಾಡಿಕೊಂಡು ಹೀಗೆ ಅನುವಾದಿಸಿದರೆ ಆ ಪದಗುಚ್ಛದ ಆತ್ಮದೊಳಗೆ ಇನ್ನಷ್ಟು ಉತ್ತಮವಾಗಿ ಸಾಗಬಹುದು, ಅದೇನೆಂದರೆ: 'ಒಬ್ಬ ಮಗ, ಒಬ್ಬ ಹಿ-ಮ್ಯಾನ್'! ಇದು ಕ್ರಿಸ್ತನ ಪೌರುಷದ ಒಂದು ಉತ್ಕಟವಾದ, ಹೆಚ್ಚುಕಡಿಮೆ ಒಂದು ತೀಕ್ಷ್ಣವಾದ ಸಮರ್ಥನೆ ಆಗಿರುತ್ತದೆ ..."[18]

ಶತಮಾನಗಳ ಮುಂಚೆ, ಪ್ರವಾದಿಯಾದ ಯೆಶಾಯನು ಹೀಗೆ ಬರೆದಿದ್ದನು, "ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು; ಆಡಳಿತವು ಅವನ ಬಾಹುವಿನ ಮೇಲಿರುವದು; ಅದ್ಭುತಸ್ವರೂಪನು, ಆಲೋಚನಾಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ ಹೆಸರು" (ಯೆಶಾಯ 9:6; ನೋಡಿರಿ 7:14). ಪ್ರಕಟನೆ 12:5ರ ವಾಕ್ಯಭಾಗವು ಯೆಶಾಯನ ಪ್ರವಾದನೆಯ ನೆರವೇರಿಕೆಗೆ ಒಂದು ಜ್ಞಾಪಕದ ಮಿಂಚನ್ನು ಒದಗಿಸುತ್ತದೆ. ಅದು ನಮಗೆ ಯೇಸುವಿನ ಜನನವನ್ನು ಜ್ಞಾಲಿಸುತ್ತದೆ, ಅಂತರಿಕ್ಷದಲ್ಲಿ ಸೂಚನೆಗಳನ್ನು ಉಂಟು ಮಾಡಿದ್ದ ಆ ಗಮನಾರ್ಹವಾದ ಜನನವನ್ನು ನೆನಪಿಸುತ್ತದೆ. ಹೇಗೂ, ಇಲ್ಲಿ ಹೇಳಲೇ ಬೇಕಾದದ್ದೇನೆಂದರೆ ಪ್ರಕಟನೆ 12ರಲ್ಲಿನ ಜನನವು ಅದು ಯೇಸುವಿನ ಶಾರೀರಿಕ ಜನನವಲ್ಲ, ಆದರೆ ಆತನ ಪಟ್ಟಾಭಿಷೇಕವಾಗಿದೆ ಎಂದು ಕೆಲವರು ಮನವರಿಕೆ ಹೊಂದಿದ್ದಾರೆ. ಈ ವ್ಯಾಖ್ಯಾನವು ಕೀರ್ತನೆ 2, ರೋಮಾ 1:4, ಹಾಗೂ ಅದಕ್ಕೆ ಸಂಬಂಧಿಸಿದ ವಾಕ್ಯಭಾಗಗಳಲ್ಲಿನ ಭಾಷೆಯ ಮೇಲೆ ಆಧಾರವಾಗಿರುತ್ತದೆ. ಈ ವ್ಯಾಖ್ಯಾನವು ವಾಕ್ಯಭಾಗಕ್ಕೆ ಯಾವದೆ ಹಾನಿಯನ್ನು ಮಾಡುವದಿಲ್ಲ ಮತ್ತು ಸರಿಯಾಗಿಯೂ ಇರಬಹುದು, ಆದರೆ ಯೇಸುವಿನ ಶಾರೀರಿಕ ಜನನವು ಹೆಚ್ಚು ಸ್ವಾಭಾವಿಕ ವ್ಯಾಖ್ಯಾನವೆಂದು ತೋರುತ್ತದೆ.

ಕೂಸು ಹುಟ್ಟಿದ ಕೂಡಲೆ ಅದನ್ನು ನುಂಗುವದಕ್ಕೆ ಘಟಸರ್ಪವು ಸಿದ್ಧವಾಗಿ ನಿಂತಿರುವದು ಹೆರೋದನು ಬೇತ್ಲೆಹೆಮಿನಲ್ಲಿ ಮಕ್ಕಳನ್ನು ಹತ್ಯೆ ಮಾಡಿದ್ದನ್ನು ಜ್ಞಾಪಿಸುವದಾಗಿದೆ (ಮತ್ತಾಯ 2:16). ಆ ದುಷ್ಕೃತ್ಯದ ಹಿಂದೆ ಘಟಸರ್ಪ/ಸೈತಾನನು ಇದ್ದನೆಂಬುದನ್ನು ಯಾರು ಸಂಶಯಿಸುವದಕ್ಕೆ ಸಾಧ್ಯ? ಹೇಗೂ ಗಂಡು ಮಗುವನ್ನು ನಾಶಗೊಳಿಸುವ ಸೈತಾನನ ಪ್ರಯತ್ನಗಳು ಆ ಒಂದು ವಿಫಲಗೊಳಿಸುವದಕ್ಕೆ ಮಾತ್ರವೇ ಸೀಮಿತವಾಗಿರಲಿಲ್ಲ. ಸೈತಾನನು ಯೇಸುವಿನ ಭೂಲೋಕದ ಸೇವೆಯುದ್ದಕ್ಕೂ ಆತನನ್ನು ನಾಶಗೊಳಿಸುವ ತನ್ನ ಪ್ರಯತ್ನವನ್ನು ಮುಂದುವರೆಸಿದ್ದನು (ಮತ್ತಾಯ 4:1; 16:23; ಲೂಕ 22:3, 31). ಸೈತಾನನ ಪ್ರಯತ್ನಗಳು ಕೊನೆಗೆ ಯೇಸುವಿನ ಮರಣದಲ್ಲಿ ಸಮಾಪ್ತಿಗೊಂಡಿದ್ದವು (ಲೂಕ 22:53).

ಸೈತಾನನು ಯಶಸ್ಸುಗೊಂಡಿದ್ದನೋ? ಆತನ ಪ್ರಯತ್ನದ ವ್ಯರ್ಥತೆಯು ಒಂದು ಮಿತವ್ಯಯವಾದ ಪದಗಳಲ್ಲಿ ಚಿತ್ರಿಸಲ್ಪಟ್ಟಿರುತ್ತದೆ: **ಆ ಕೂಸು ಫಕ್ಕನೆ ದೇವರ ಬಳಿಗೂ ಸಿಂಹಾಸನದ ಬಳಿಗೂ ಎತ್ತಲ್ಪಟ್ಟಿತು. ಎತ್ತಲ್ಪಟ್ಟಿತು** ಎಂಬುದು ἁρπάζω (*harpazō*) ಎಂಬ ಪದದಿಂದ ತೆಗೆದುಕೊಳ್ಳಲಾಗಿರುವ ಗ್ರೀಕ್ ಪದವೊಂದರ ಅನುವಾದವಾಗಿದ್ದು, ಅದರರ್ಥವು "ಕಸಿದುಕೊಳ್ಳಲ್ಪಟ್ಟಿತು" ಎಂದಾಗಿದೆ, ಒಂದು ಫಕ್ಕನೆ ಹಾಗೂ ಅನಿರೀಕ್ಷಿತವಾದ ಕ್ರಿಯೆಯೊಂದನ್ನು ಸೂಚಿಸುತ್ತದೆ. Eugene Petersonನು ಆ ದೃಶ್ಯವನ್ನು ಹೀಗೆ ಬಣ್ಣಿಸುತ್ತಾನೆ: "ಕೂಸು ಕಾಣಿಸಿಕೊಂಡ ಕ್ಷಣವೇ, ಘಟಸರ್ಪವು ಅದರ ಕಡೆಗೆ ಜಿಗಿಯುತ್ತದೆ. ನಾವು ನಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತೇವೆ, ಆ ಘಾತಕತನದ ದೃಶ್ಯವನ್ನು ನೋಡದಷ್ಟು ಭಯಭೀತರಾಗಿರುತ್ತೇವೆ. ಆಗ, ಅಲ್ಲಿ ಕಡೇ ಸಂಭಾವ್ಯ ಕ್ಷಣದಲ್ಲಿ ಒಂದು ಕಾಪಾಡುವಿಕೆ ಸಂಭವಿಸುತ್ತದೆ. ನವಜಾತ ಶಿಸುವನ್ನು ಗಟ್ಟಿಯಾಗಿ ಹಿಡಿದುಕೊಳ್ಳಲಾಗುತ್ತದೆ ಮತ್ತು ದೇವರ

ಸಿಂಹಾಸನದ ಬಳಿಗೆ ಎತ್ತಿಕೊಳ್ಳಲಾಗುತ್ತದೆ."[19]

ಆ ಕಥನವು ಹೀಗೆ ವೇಗವಾಗಿ ಯೇಸುವಿನ ಜನನದಿಂದ ಆತನ ಪರಲೋಕಾರೋಹಣದ ಕಡೆಗೆ ಜಿಗಿಯುತ್ತದೆ. ಕೆಲವು ಪದಗಳನ್ನು ಬರೆಯುವದರೊಳಗೆ, ಯೋಹಾನನು ವಾಕ್ಯವು ಶರೀರಧಾರಿಯಾದಂಥ ನರಾವತಾರದಿಂದ (ನೋಡಿರಿ ಯೋಹಾನ 1:14; ಫಿಲಿಪ್ಪಿ 2:5-8) ಪರಲೋಕದಲ್ಲಿ ತಂದೆಯ ಬಲಗಡೆಯಲ್ಲಿ ಪರಲೋಕಾರೋಹಣಗೊಂಡು ಉನ್ನತಕ್ಕೇರಿಸಲ್ಪಡುವದರ ವಿಷಯಕ್ಕೆ ಸಾಗುತ್ತಾನೆ (ನೋಡಿರಿ ಅಪೊಸ್ತಲರ ಕೃತ್ಯಗಲು 1:9-11; 2:33; ಫಿಲಿಪ್ಪಿ 2:9-11; ಇಬ್ರಿಯ 4:14). ಪ್ರಕಟನೆ ಪುಸ್ತಕದ ಈ ಸ್ಥಳದಲ್ಲಿ ಯೇಸುವಿನ ಜೀವನ ಹಾಗೂ ಸೇವೆಯ ಕುರಿತಾಗಿ ವಿವರವಾದ ಕಥನವನ್ನು ನೀಡುವದು ಯೋಹಾನನ ಉದ್ದೇಶವಾಗಿರಲಿಲ್ಲ; ಆ ಮಾಹಿತಿಯನ್ನು ಆತನ ಸುವಾರ್ತೆಯಲ್ಲಿ ಕಾಣಬಹುದಾಗಿದೆ. Warren Wiersbeನು KJVಯೊಳಗೆ 5ನೇ ವಚನದಲ್ಲಿರುವ ವಿರಾಮ ಚಿಹ್ನೆಗಳ ಆಧಾರದಲ್ಲಿ ಈ ಆಸಕ್ತಿಕರವಾದ ಅಭಿಪ್ರಾಯವನ್ನು ತಿಳಿಸುತ್ತಾನೆ: "ವಚನದ ಮಧ್ಯಭಾಗದಲ್ಲಿರುವ ವಿವರಣ ಚಿಹ್ನೆಯು ಮೂವತ್ತಮೂರು ವರ್ಷಗಳ ಇತಿಹಾಸವನ್ನು ಪ್ರತಿನಿಧಿಸುತ್ತದೆ!"[20]

**ವಚನ 6.** ಅದು ಅಸಾಧ್ಯವೆಂದು ತೋರಬಹುದಾದರೂ, ಮಗುವು ಘಟಸರ್ಪದ ಹಿಡಿತದಿಂದ ತಪ್ಪಿಸಿಕೊಂಡಿತ್ತು. ಹತಾಶೆಗೊಂಡವನಾಗಿ, ಈ ರಾಕ್ಷಸನು ತನ್ನ ಗಮನವನ್ನು ಸ್ತ್ರೀಯ ಕಡೆಗೆ ತಿರುಗಿಸುತ್ತಾನೆ (12:13). ಆಕೆಯು ರಾಕ್ಷಸನ ಬಲಕ್ಕೆ ಹೋಲಿಸಿದರೆ ಅತಿ ದುರ್ಬಲಳಂತೆ ಕಂಡಳು. ಆದಾಗ್ಯೂ, ಪುನಃ ಘಟಸರ್ಪನು ವಿಫಲಗೊಳಿಸಲ್ಪಟ್ಟಿದ್ದನು: **ಆ ಸ್ತ್ರೀಯು ಅರಣ್ಯಕ್ಕೆ ಓಡಿಹೋದಳು; ಅಲ್ಲಿ ಆಕೆಗೆ ಸಾವಿರದ ಇನ್ನೂರ ಅರುವತ್ತು ದಿನಗಳವರೆಗೆ ಪೋಷಣೆಯಾಗಬೇಕೆಂದು ದೇವರು ಸ್ಥಳವನ್ನು ಸಿದ್ಧಮಾಡಿದ್ದನು** (ವ. 14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ದೇವರು ತನ್ನ ಮಗನನ್ನು ಕಾಪಾಡಿದ ಹಾಗೆಯೇ, ಆತನು ಸಭೆಯನ್ನು ಕಾಪಾಡುವನು.

ಗ್ರೀಕ್ ವಾಕ್ಯವು ಅಕ್ಷರಶಃ ಹೀಗೆ ಇರುತ್ತದೆ "*ಅವರು* ಆಕೆಯನ್ನು ಅಲ್ಲಿ ಪೋಷಿಸುವಂತಾಗಲು" (ಒತ್ತಿ ಹೇಳಿದ್ದು ನನ್ನದು; ನೋಡಿರಿ KJV). Τρέφωσιν (*trephōsin,* ಇದು τρέφω, *trephō* ಎಂಬುದರಿಂದ ಬಂದದ್ದು) ಎಂಬ ಪದವು ಪ್ರಥಮ ಪುರುಷ ಬಹುವಚನದಲ್ಲಿರುತ್ತದೆ ("ಅವರು"). ಈ "ಅವರು" ಎಂಬವರು ಯಾರೆಂಬುದು ಹೇಳಲ್ಪಟ್ಟಿಲ್ಲ, ಆದರೆ "ಅವರು" ಎಂಬವರು ಆ ಸ್ತ್ರೀಯನ್ನು ಪೋಷಣೆ ಮಾಡಬೇಕೆಂದು ದೇವರಿಂದ ಆದೇಶಿಸಲ್ಪಟ್ಟವರು ಆಗಿರಬಹುದು.

ದೇವರು ತನ್ನ ಜನರನ್ನು **ಸಾವಿರದ ಇನ್ನೂರ ಅರುವತ್ತು ದಿನಗಳವರೆಗೆ ಒಂದು ವಿಶೇಷ** "ಸ್ಥಳ"ದಲ್ಲಿ ಪೋಷಣೆ ಮಾಡಿದನು ಮತ್ತು ಕಾಪಾಡಿದನು. ಈ ಸಂಖ್ಯೆಯು 3½ ರಂತೆಯೇ ಆಗಿದೆ, ಪರಿಶೋಧನೆ, ಸಂಕಷ್ಟ, ಮತ್ತು ಪರೀಕ್ಷೆಯೊಂದಿಗೆ ಸಂಬಂಧ ಹೊಂದಿರುವ ಸಾಂಕೇತಿಕ ಸಂಖ್ಯೆ - ನಾಳೆಗಾಗಿ ಒಂದು ನಿರೀಕ್ಷೆಯಿರುತ್ತದೆಂಬ ಸೂಚ್ಯಾರ್ಥವನ್ನು ಹೊಂದಿದೆ (11:2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

1ರಿಂದ 6 ವಚನಗಳನ್ನು ಸರಳವಾದ ಮಾತುಗಳಲ್ಲಿ ಹೇಳುವದಾದರೆ, ಘಟಸರ್ಪನು ತಾನು ಮಾಡಲು ಪ್ರಯತ್ನಿಸಿದ ಎಲ್ಲದರಲ್ಲಿಯೂ ಹತಾಶೆಗೊಂಡನು. ಆತನು ಯೋಜನೆ ಮಾಡಿದ ಪ್ರಕಾರವಾಗಿ ಏನೂ ಯಶಸ್ಸು ಸಿಕ್ಕಲಿಲ್ಲ. ಆತನ ಹತಾಶೆಯು ಅಧಿಕಗೊಂಡ ಹಾಗೆ, ಆತನ ಕೋಪವು ಹೆಚ್ಚುತ್ತಲೇ ಹೋಯಿತು.

# ಸೈತಾನನು ಪರಲೋಕದಿಂದ ದೊಬ್ಬಲ್ಪಟ್ಟದ್ದು (12:7-9)

**[7]ಪರಲೋಕದಲ್ಲಿ ಯುದ್ಧ ನಡೆಯಿತು. ಮೀಕಾಯೇಲನೂ ಅವನ ದೂತರೂ ಘಟಸರ್ಪನ ಮೇಲೆ ಯುದ್ಧಮಾಡುವದಕ್ಕೆ ಹೊರಟರು. ಘಟಸರ್ಪನೂ ಅವನ ದೂತರೂ ಯುದ್ಧಮಾಡಿ ಸೋತುಹೋದರು, [8]ಮತ್ತು ಪರಲೋಕದೊಳಗೆ ಅವರಿಗೆ ಸ್ಥಾನವು ತಪ್ಪಿಹೋಯಿತು.**
**[9]ಭೂಲೋಕದವರನ್ನೆಲ್ಲಾ ಮರುಳುಗೊಳಿಸುವ ಆ ಮಹಾ ಘಟಸರ್ಪನು ಅಂದರೆ ಪಿಶಾಚನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪವು ದೊಬ್ಬಲ್ಪಟ್ಟು ಭೂಮಿಗೆ ಬಿದ್ದನು.**

ಈ ವಾಕ್ಯಭಾಗದಲ್ಲಿ, ಸೈತಾನನ ಅಪಜಯವು ಮೊದಲು ಸಂಕೇತಗಳಲ್ಲಿ ಕಾಣಿಸಲ್ಪಡುತ್ತದೆ (ವಚನಗಳು 7-9); ಮುಂದಿನ ವಿಭಾಗದಲ್ಲಿ ಅದು ಒಂದು ಹಾಡಿನಲ್ಲಿ ಕೊಂಡಾಡಲ್ಪಡುತ್ತದೆ (ವಚನಗಳು 10-12). 7ರಿಂದ 9 ವಚನಗಳು ಏನು ಕಲಿಸುತ್ತವೆಂಬುದನ್ನು ಚರ್ಚಿಸುವದಕ್ಕೆ ಮುನ್ನ, ಅವುಗಳು ಕಲಿಸುವದಿಲ್ಲ ಎಂಬುದನ್ನು ಗಮನಕ್ಕೆ ತಂದುಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ. ಈ ವಾಕ್ಯಭಾಗದ ಉದ್ದೇಶವು ಬಿದ್ದುಹೋಗಿರುವ ದೇವದೂತರ ಕುರಿತಾದ ದೈವಶಾಸ್ತ್ರವೊಂದನ್ನು ಕಲಿಸುವದಾಗಿರುವದಿಲ್ಲ.[21] "ಒಂದು ಜನಪ್ರಿಯವಾದ ಕ್ರೈಸ್ತ ಕಲ್ಪನೆಯು ... ಒಂದು ಯುದ್ಧದ ಚಿತ್ರಣವನ್ನು ಮಾಡಿಕೊಂಡಿದ್ದು ಅದರಲ್ಲಿ ಮಿಕಾಯೇಲನ ನಾಯಕತ್ವದಲ್ಲಿ ದೇವರ ದೂತರು ಸೈತಾನನನ್ನು ಮತ್ತು ಆತನ ದೂತರನ್ನು ಮನುಷ್ಯನು ಸೃಷ್ಟಿಸಲ್ಪಡುವದಕ್ಕೆ ಬಹಳ ಕಾಲದ ಹಿಂದೆಯೇ ಪರಲೋಕದಿಂದ ದೊಬ್ಬಿದರು ಎಂಬದೆ."[22] ಈ ವ್ಯಾಪಕವಾಗಿ ಅಂಗೀಕರಿಸಲ್ಪಟ್ಟಿರುವ ನಿರಾಧಾರ ಕಲ್ಪನೆಯು Miltonನ *Paradise Lost* ಎಂಬ ಪುಸ್ತಕದಲ್ಲಿ ಜನಪ್ರಿಯಗೊಳಿಸಲ್ಪಟ್ಟಿದ್ದು, ಅದು ಪ್ರಕಟನೆ 12ನೇ ಅಧ್ಯಾಯದಿಂದ ವಿಚಾರಗಳನ್ನು ತೆಗೆದುಕೊಂಡಿತ್ತು. H. L. Ellisonನು ಹೇಳಿದ್ದೇನೆಂದರೆ, "ಇದಕ್ಕೆ ಯಾವದೇ ಶಾಸ್ತ್ರಧಾರಿತ ಅಧಿಕಾರವಿರುವದಿಲ್ಲ, ಈ ವಾಕ್ಯಭಾಗದಲ್ಲಂತೂ ಅದು ಇಲ್ಲವೇ ಇಲ್ಲ. ಇಲ್ಲಿ ಬಣ್ಣಿಸಲ್ಪಟ್ಟಿರುವದು *ಪ್ರಕಟನೆ* ಪುಸ್ತಕದಲ್ಲಿ ಬಣ್ಣಿಸಲ್ಪಟ್ಟಿರುವ ಘಟನೆಗಳ ವ್ಯಾಪ್ತಿಯಲ್ಲಿರುತ್ತದೆ ಮತ್ತು ಅದರ ವಾಚಕರಿಗೆ ಪರಿಣಾಮವನ್ನು ಹೊಂದಿರುತ್ತದೆ."[23] Ray Summersನು ಹೀಗೆ ವ್ಯಾಖ್ಯಾನಿಸಿದನು,

> ಈ ಪರಿಚ್ಛೇಧವನ್ನು ಅಸ್ಪಷ್ಟವಾದ ಹಳೆಯ ಒಡಂಬಡಿಕೆಯ ವಾಕ್ಯಭಾಗಗಳು ಅಥವಾ Miltonನ *Paradise Lost* ಸಂಬಂಧಪಟ್ಟಂತೆ ಅಲ್ಲ, ಬದಲಾಗಿ ಪ್ರಕಟನೆ ಪುಸ್ತಕದ ಸನ್ನಿವೇಶದೊಳಗೆ ವ್ಯಾಖ್ಯಾನಿಸತಕ್ಕದ್ದು. ಇದು ಸೈತಾನನ ಮೂಲ ಸ್ಥಿತಿ ಮತ್ತು ಆತನ ಬಿದ್ದು ಹೋದ ಸ್ಥಿತಿಯ ಐತಿಹಾಸಿಕ ಕಥನವಲ್ಲ; ಇದು ಕ್ರಿಸ್ತನು ಹಾಗೂ ಆತನ ಜನರನ್ನು ನಾಶಗೊಳಿಸುವದಕ್ಕೆ ಸೈತಾನನು ಮಾಡುವ ಪ್ರಯತ್ನಗಳನ್ನು ಮುಂದಿಡುವಂತ ಅಂತ್ಯಕಾಲಿಕ ಚಿತ್ರಣವಾಗಿರುತ್ತದೆ.[24]

ನಾವು ಸೈತಾನನ ಮೂಲದ ಕುರಿತು ಚಕಿತಗೊಳ್ಳಬಹುದು, ಆದರೆ ವಿವರಗಳು "ರಹಸ್ಯವಾದವುಗಳೊಳಗೆ" (ಧರ್ಮೋಪದೇಶಕಾಂಡ 29:29) ಇದ್ದು ದೇವರು ಅವುಗಳನ್ನು ಬಯಲುಗೊಳಿಸುವದನ್ನು ತಕ್ಕದ್ದೆಂದು ಕಾಣಲಿಲ್ಲ. ಬಹುಶಃ ಜನರು ಅದನ್ನು ಅರ್ಥಮಾಡಿಕೊಳ್ಳಲು ಅಶಕ್ತರಾಗಬಹುದು. ಖಂಡಿತವಾಗಿಯೂ, ರಕ್ಷಣೆ ಹೊಂದುವದಕ್ಕೆ ಅಂಥ ತಿಳುವಳಿಕೆಯು ಅವಶ್ಯಕವೇನೂ ಆಗಿರುವದಿಲ್ಲ.

ಈ ವಿಷಯದ ಕುರಿತು ಬೈಬಲ್ ನೀಡುವ ಕೆಲವು ಸುಳಿವುಗಳು ಇಲ್ಲಿವೆ. ಸೈತಾನನು

ದೇವರಿಂದ ಸೃಷ್ಟಿಸಲ್ಪಟ್ಟಿರಬೇಕು, ಯಾಕೆಂದರೆ "ಸಮಸ್ತವನ್ನು ಸೃಷ್ಟಿಸಿದ"ವನು (ಎಫೆಸ 3:9) ದೇವರೇ. ಆತನು ಸೃಷ್ಟಿಸಲ್ಪಟ್ಟ ಒಂದು ಆತ್ಮೀಕ ಜೀವಿಯಾಗಿದ್ದನು (ಎಫೆಸ 6:11, 12), ಬಹುಶಃ ಒಬ್ಬ ದೇವದೂತನು (2 ಕೊರಿಂಥ 11:14). ಮೊದಲೆಯ ತಿಮೊಥೆ 3:6 ಸೂಚಿಸುವದೇನೆಂದರೆ ಆತನು ಉಬ್ಬಿಕೊಂಡಿದ್ದರಿಂದ "... ಶಿಕ್ಷಾವಿಧಿಗೆ [ಒಳಗಾದನು]," ಆದರೆ ಯಾವ ವಿವರಗಳು ಕೊಡಲ್ಪಟ್ಟಿಲ್ಲ. ಯೋಹಾನ 8:44 ಕೂಡಿಸಿ ಹೇಳುವದೇನೆಂದರೆ, ಆತನು "ಅವನು ಆದಿಯಿಂದಲೂ ಕೊಲೆಗಾರನಾಗಿದ್ದು," ಮತ್ತು 1 ಯೋಹಾನ 3:8 ಇದಕ್ಕೆ ಪೂರಕವಾಗಿ ಆತನು "ಆದಿಯಿಂದಲೂ ಪಾಪಮಾಡುವವನಾಗಿದ್ದಾನಲ್ಲಾ" ಎಂದು ಹೇಳುತ್ತದೆ. ದುರಾದೃಷ್ಟಕರವಾಗಿ, "ಆದಿಯಿಂದಲೂ" ಎಂಬುದರ ಅರ್ಥವು ಆತನು "ಸೃಷ್ಟಿಸಲ್ಪಟ್ಟ ತಕ್ಷಣವೆ" ಎಂದಾಗಲಿ, "ಆತನು ಯಾವಾಗ ಪಾಪ ಮಾಡಲಾರಂಭಿಸಿದನು," ಅಥವಾ "ಮನುಷ್ಯನ ಅಸ್ತಿತ್ವದ ಆರಂಭ" ಇವುಗಳ ಕುರಿತಾಗಲಿ ತಿಳಿದು ಬಂದಿರುವದಿಲ್ಲ. ಅಂತಿಮವಾಗಿ, ಬೈಬಲ್ ಬಿದ್ದುಹೋದ ದೇವದೂತರ ಕುರಿತು ಹೇಳುತ್ತದೆ (2 ಪೇತ್ರ 2:4; ಯೂದನು 6); ಹೇಗೂ, ಅವರು ಯಾವದಾದರೂ ಸಂಬಂಧವನ್ನು ಹೊಂದಿದ್ದಾದಲ್ಲಿ, ಸೈತಾನನೊಂದಿಗೆ ಯಾವ ಸಂಬಂಧವನ್ನು ಹೊಂದಿದ್ದರೆಂಬುದನ್ನು ತಿಳಿಸುವದಿಲ್ಲ. ಅನೇಕ ಲೇಖಕರು ಸೈತಾನನ ಮೂಲದ ವಿಷಯದಲ್ಲಿ ಲೂಸಿಪರನ ಕುರಿತಾದ ವಾಕ್ಯಭಾಗಗಳನ್ನು ಕೂಡಿಸುತ್ತಾರೆ (ಯೆಶಾಯ 14:12; KJV), ಹಾಗಿದ್ದರೂ ಈ ವಾಕ್ಯಭಾಗವು ಬಾಬೆಲಿನ ಅರಸನ ಕುರಿತಾಗಿ ಮಾತಾಡುತ್ತಿದೆ ಎಂಬುದನ್ನು ವಾಕ್ಯಭಾಗವೇ ಸ್ಪಷ್ಟಗೊಳಿಸುತ್ತದೆ (ನೋಡಿರಿ ಯೆಶಾಯ 14:14; KJV). ಈ ವಾಕ್ಯಭಾಗವು ಅತ್ಯಾಡಂಬರದಿಂದ ಕೂಡಿದ್ದು ಬಾಬೆಲಿನ ಅರಸನ ಕುರಿತಾಗಿ ಇರಲಾರದು ಮತ್ತು "ಅರಸನನ್ನು ಸೈತಾನನಿಗೆ ಒಂದು ನಮೂನೆ ಎಂಬಂತೆ ಮಾತಾಡುತ್ತಿರಬೇಕು" ಎಂದು ಕೆಲವರು ಆಕ್ಷೇಪಣೆ ವ್ಯಕ್ತಪಡಿಸುತ್ತಾರೆ. ಅವರು ಪದ್ಯ ಭಾಷೆಯ ಸ್ವಭಾವವನ್ನ ನಿರ್ಲಕ್ಷ್ಯಿಸಿ ಈ ಪ್ರತಿಮಾದರಿಯು ಸೈತಾನನೇ ಎಂಬುದಾಗಿ ತಮ್ಮ ಸ್ವೇಚ್ಛಾನುಸಾರವಾಗಿ ನಿರ್ಧರಿಸಿ ಬಿಡುತ್ತಾರೆ. ಪವಿತ್ರಾತ್ಮನು ಮನಸ್ಸಿನಲ್ಲಿ ಸೈತಾನನನ್ನಿಟ್ಟುಕೊಂಡು ಬರೆಸಿದನೆಂಬುದನ್ನು ಸನ್ನಿವೇಶದಲ್ಲಿರುವ ಯಾವದೂ ಸೂಚಿಸುವದಿಲ್ಲ. ಅನೇಕ ಸಾರಿ ಈ ಪಟ್ಟಿಗೆ ಸೇರ್ಪಡೆಗೊಳಿಸಲಾಗುವ ವಾಕ್ಯಭಾಗವೆಂದರೆ ಲೂಕ 10:18 (20:1-3ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಸೈತಾನನ ಕುರಿತು ಬೈಬಲ್ ಸಾಕಷ್ಟು ಮಾಹಿತಿಯನ್ನೊಳಗೊಂಡಿರುತ್ತದೆ, ಆದರೆ ಜನರ ಕುತೂಹಲವನ್ನು ತೃಪ್ತಿಗೊಳಿಸುವದಕ್ಕೆ ಸಾಕಾಗುಷ್ಟು ಮಾಹಿತಿಯನ್ನು ಒಳಗೊಂಡಿಲ್ಲ. ಆ ಖಾಲಿ ಸ್ಥಳಗಳನ್ನು ಭರ್ತಿ ಮಾಡುವದಕ್ಕಾಗಿ ಮನುಷ್ಯರು ತಮ್ಮ ಕಲ್ಪನೆಗಳನ್ನು ಬಳಸಿಕೊಂಡಿರುತ್ತಾರೆಂಬುದರಲ್ಲಿ ಆಶ್ಚರ್ಯವೇನಿಲ್ಲ. ಹಾಗಿದ್ದರೂ, ಪ್ರಕಟನೆ 12ನೇ ಅಧ್ಯಾಯಕ್ಕೂ "ಸೈತಾನ ಹಾಗೂ ಆತನ ದೂತರು ಪರಲೋಕದಿಂದ ಸೃಷ್ಟಿಯ-ಮುನ್ನ ವಾಸ್ತವಿಕವಾಗಿ ಆಗಲಿ ಅಥವಾ ಕಾಲ್ಪನಿಕವಾಗಿ ಆಗಲಿ ದೊಬ್ಬಲ್ಪಟ್ಟಿರುವದಕ್ಕೂ ಸಂಬಂಧವೇ ಇಲ್ಲ."[25] ಇಲ್ಲಿ ಉದ್ದೇಶವು ಹಿಂಸೆಗೊಳಗಾಗುತ್ತಿದ್ದ ಆದಿ ಕ್ರೈಸ್ತರನ್ನು ಪ್ರೋತ್ಸಾಹಿಸುವದಾಗಿತ್ತು.

ವಾಕ್ಯಭಾಗವನ್ನು ಇನ್ನಷ್ಟು ಸೂಕ್ಷ್ಮವಾಗಿ ಅವಲೋಕಿಸುವದಕ್ಕೆ ಮುನ್ನ ತೊಲಗಿಸಿಕೊಳ್ಳಬೇಕಾದ ಇನ್ನೊಂದು ನಕಾರಾತ್ಮಕ ಸಂಗತಿಯು ಇರುತ್ತದೆ. ಯುದ್ಧದ ದೃಶ್ಯಕ್ಕೆ ಸ್ವಲ್ಪ ಮುಂಚೆ, ಗಂಡು ಮಗುವು "ದೇವರ ಬಳಿಗೂ ಆತನ ಸಿಂಹಾಸನದ ಬಳಿಗೂ ಎತ್ತಲ್ಪಟ್ಟಿತು" (12:5). ಕೆಲವು ವ್ಯಾಖ್ಯಾನಕಾರರು ಘಟಸರ್ಪವನ್ನು ಸೋಲನ್ನು ಅಂಗೀಕರಿಸಿಕೊಳ್ಳಲು ಮನಸ್ಸಿಲ್ಲದ್ದೆಂದು, ಮಗುವನ್ನು ಪರಲೋಕದ ದ್ವಾರಗಳ ವರೆಗೂ ಅಟ್ಟಿಸಿಕೊಂಡು ಹೋಯಿತೆಂದು ಚಿತ್ರಿಸಿಕೊಳ್ಳುತ್ತಾರೆ. ಅವರು ಹೇಳುವದೇನೆಂದರೆ, ಅಲ್ಲಿ

ಮಿಕಾಯೇಲನು ಆತನ ದಾರಿಗೆ ಅಡ್ಡವಾಗಿ ನಿಂತನು, ಅದರ ಫಲಿತವಾಗಿ ಅಲ್ಲಿ ಯುದ್ಧವು ಸಂಭವಿಸಿತು ಎಂಬದೆ. ಘಟಸರ್ಪವು ಸೋಲಿಸಲ್ಪಟ್ಟು ಭೂಮಿಗೆ ಮರಳಿ ಓಡಿಸಲ್ಪಟ್ಟಿತು. ಈ ದೃಶ್ಯಾವಳಿಯು 12ನೇ ಅಧ್ಯಾಯದ ವಿಭಾಗಗಳನ್ನು ಒಂದಾಗಿ ಜೋಡಿಸುತ್ತದೆ, ನಾಟಕಕ್ಕೆ ಇನ್ನಷ್ಟು ಕೂಡಿಸುತ್ತದೆ, ಮತ್ತು ಅಧ್ಯಾಯದ ಒಟ್ಟಾರೆಯಾದ ಉಪದೇಶಕ್ಕೆ ಯಾವದೇ ದೊಡ್ಡ ಕೆಡುಕನ್ನೇನೂ ಮಾಡುವದಿಲ್ಲ. ಹೇಗೂ, ಸನ್ನಿವೇಶದಲ್ಲಿರುವ ಹಲವಾರು ಅಂಶಗಳು ಈ ಅರ್ಥೈಸುವ ದಾರಿಗೆ ವಿರುದ್ಧ ಸೆಣಸಾಡುತ್ತವೆ:

12:11ರ ಪ್ರಕಾರವಾಗಿ ಮೊದಲನೆಯದು ಹಾಗೂ ಅತ್ಯಂತ ಪ್ರಾಮುಖ್ಯವಾದದ್ದು ಎಂದರೆ ಜಯವನ್ನು "ಕುರಿಯಾದಾತನ ರಕ್ತದ" ಮೂಲಕವಾಗಿ ಗಳಿಸಲಾಯಿತು ಎಂಬದೆ. G. R. Beasley-Murrayನು ಹೇಳಿದ್ದೇನೆಂದರೆ ರಕ್ತದ ಕುರಿತಾದ ಹೇಳಿಕೆಯು "ಈ ಅಧ್ಯಾಯದಲ್ಲಿ ಅತ್ಯಂಥ ಮಹತ್ವಪೂರ್ಣವಾದ ಹೇಳಿಕೆ"[26] ಆಗಿರುತ್ತದೆ. ಇದು ಇಡೀ ವಾಕ್ಯಭಾಗದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಜಯವನ್ನು ರಕ್ತದ ಮೂಲಕವಾಗಿ ಪಡೆಯಲಾಯಿತಾದ್ದರಿಂದ, ಮತ್ತು ರಕ್ತವು ಶಿಲುಬೆಯ ಮೇಲೆ ಸುರಿಸಲ್ಪಟ್ಟಿತಾದ್ದರಿಂದ, ಘಟಸರ್ಪವು ಪರಲೋಕಾರೋಹಣದ *ಮುಂಚೆಯೇ* ಸೋಲಿಸಲ್ಪಟ್ಟಿರಬೇಕೇ ಹೊರತು ಅನಂತರದಲ್ಲಿ ಅಲ್ಲ. ಕಾಲಾನುಕ್ರಮದ ಪ್ರಕಾರ, ಮಗುವು "ಎತ್ತಲ್ಪಟ್ಟ" ಮುಂಚೆಯೇ ಘಟಸರ್ಪವು "ದೊಬ್ಬಲ್ಪಟ್ಟಿತು."

ಅಲ್ಲದೆ ಘಟಸರ್ಪದ ಮತ್ತು ಆತನ ದೂತರ ಸೋಲಿನಿಂದಾದ ಒಂದು ಪರಿಣಾಮವೆಂದರೆ "ಪರಲೋಕದೊಳಗೆ ಅವರಿಗೆ ಸ್ಥಾನವು ತಪ್ಪಿ ಹೋಯಿತು" ಎಂಬುದನ್ನು ಸಹ ಗಮನಿಸಿರಿ (ವ. 8). ಈ ಹೇಳಿಕೆಯು ಸೈತಾನನಿಗೆ ಪರಲೋಕವನ್ನು "ನುಗ್ಗುವ" ಅವಶ್ಯಕತೆಯು ಇದ್ದಿರಲಿಕ್ಕಿಲ್ಲ ಎಂಬ ಸೂಚ್ಯಾರ್ಥವನ್ನು ನೀಡುತ್ತದೆ; ಬದಲಾಗಿ, 8ನೇ ವಚನದ ತನಕವೂ, ಆತನಿಗೆ ಅಲ್ಲೊಂದು "ಸ್ಥಾನ" ಇತ್ತು. ಈ ಅಂಶವು ಎತ್ತಲ್ಪಡುತ್ತಿರುವ ಮಗುವನ್ನು ಘಟಸರ್ಪನು ಬೆನ್ನಟ್ಟುವ ದೃಶ್ಯಕ್ಕೆ ಸರಿಹೊಂದುವದಿಲ್ಲ.

ಸನ್ನಿವೇಶವು ತೋರಿಸಿ ಕೊಡುವ ಮುಕ್ತಾಯವು ಏನೆಂದರೆ 7ರಿಂದ 9 ವಚನಗಳಲ್ಲಿನ ಯುದ್ಧವು ಶಿಲುಬೆಯ ಮೇಲೆ ಕ್ರಿಸ್ತನು ಅನುಭವಿಸಿದ ಆರು ತಾಸುಗಳ ಸಂಕಷ್ಟದ ವೇಳೆ ನಡೆದಂಥ ಪರದೆಯ ಹಿಂದಿನ ಆತ್ಮೀಕ ಹೋರಾಟವಾಗಿತ್ತು ಎಂಬುದೆ. ಯೇಸುವು ಶಿಲುಬೆಗೇರಿಸಲ್ಪಡುವದು ತನ್ನ ಅತ್ಯಂಥ ದೊಡ್ಡ ಜಯವಾಗಲಿದೆ ಎಂಬುದಾಗಿ ಸೈತಾನನು ಯೋಚಿಸಿಕೊಂಡಿದ್ದನು, ಆದರೆ ಅದು ಆತನ ಅತ್ಯಂಥ ದೊಡ್ಡ ಸೋಲು ಆಗಿ ಮಾರ್ಪಟ್ಟಿತು.

**ವಚನ 7. ಪರಲೋಕದಲ್ಲಿ ಯುದ್ಧ ನಡೆಯಿತು.** 1 ಮತ್ತು 3 ವಚನಗಳಲ್ಲಿ, "ಪರಲೋಕ" ಎಂಬುದು ಬಹು ಸಂಭಾವ್ಯವಾಗಿ ಆಕಾಶವನ್ನು ಸೂಚಿಸುತ್ತದೆ. 7ರಿಂದ 9 ವಚನಗಳಲ್ಲಿ, "ಪರಲೋಕ" ಎಂಬುದು ಬಹುಶಃ ದೇವರ ನಿವಾಸವನ್ನು ಸೂಚಿಸಬಹುದಾಗಿದೆ. ಹೇಗೂ, ಈ ಭಾಷೆಯು ಸಾಂಕೇತಿಕವಾದದ್ದೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ಯುದ್ಧವು *ಯಾವಾಗ* ಸಂಭವಿಸಿತು ಎಂಬುದನ್ನು ವಾಕ್ಯಭಾಗವು ಹೇಳುವದಿಲ್ಲ. ಅದು ಯೇಸುವು ಶಿಲುಬೆಯ ಮೇಲಿರುವ ವೇಳೆ ಸಂಭವಿಸಿತು ಎಂಬ ಸಾಧ್ಯತೆಯನ್ನು ಯಾವದೂ ತಡೆಯದು.

**ಮೀಕಾಯೇಲನೂ ಅವನ ದೂತರೂ ಘಟಸರ್ಪನ ಮೇಲೆ ಯುದ್ಧಮಾಡು**ತ್ತಿದ್ದರು. ಒಬ್ಬ ಮೀಕಾಯೇಲನು ಒಬ್ಬ ಪ್ರಧಾನ ದೇವದೂತನು. ವಾಸ್ತವಿಕದಲ್ಲಿ, ಆತನು ಹೊಸ ಒಡಂಬಡಿಕೆಯಲ್ಲಿ ಆತನೊಬ್ಬನೇ ಪ್ರಧಾನ ದೂತನು ಎಂದು ಕರೆಯಲ್ಪಟ್ಟಿದ್ದಾನೆ (ಯೂದನು 9). ಒಬ್ಬ ಪ್ರಧಾನ ದೂತನು ಎಂಬ ಉಲ್ಲೇಖವು 1 ಥೆಸಲೋನಿಕ 4:16ರಲ್ಲಿ ಮಾಡಲ್ಪಟ್ಟಿದೆ, ಆದರೆ ಅಲ್ಲಿ ಪ್ರಧಾನ ದೂತನ ಹೆಸರು ಹೇಳಲ್ಪಟ್ಟಿಲ್ಲ. ಅಲ್ಲಿ ಉಲ್ಲೇಖವು ಮೀಕಾಯೇಲ ಕುರಿತಾಗಿತ್ತೆಂದು ಕೆಲವರು ಯೋಚಿಸುತ್ತಾರೆ. "ದೇವದೂತ" ಎಂಬುದಕ್ಕೆ ಮುಂಚಿನ "ಪ್ರಧಾನ"

ಎಂಬುದು "ಮುಖ್ಯಸ್ಥನು" ಅಥವಾ "ಪ್ರಭು" ಎಂಬುದನ್ನು ಸೂಚಿಸುತ್ತದೆ (4:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಇಲ್ಲಿ ಸೂಚ್ಯಾರ್ಥವೇನೆಂದರೆ ಆತನು ಉನ್ನತ ಶ್ರೇಣಿ ಹೊಂದಿರುವ ಒಬ್ಬ ದೇವದೂತನು ಮತ್ತು ತನ್ನ ಅಧಿಕಾರದಡಿಯಲ್ಲಿ ದೇವದೂತರನ್ನು ಹೊಂದಿದ್ದಾನೆ ಎಂಬುದೆ. ಹೀಗಿರುವದರಿಂದ 7ನೇ ವಚನವು **ಅವನ ದೂತರು** ಎಂದು ಹೇಳುತ್ತದೆ - ಅಂದರೆ, ಆತನ ಅಧಿಕಾರದಡಿಯಲ್ಲಿದ್ದ ದೇವದೂತರು.

ಮೀಕಾಯೇಲ ಎಂಬ ಹೆಸರಿನ ಅರ್ಥವು "ದೇವರಂತೆ ಯಾರಿದ್ದಾರೆ?" ದಾನಿಯೇಲನ ಪುಸ್ತಕದಲ್ಲಿ, ಮೀಕಾಯೇಲನು ದೇವರ ಜನರನ್ನು ಕಾಪಾಡುವವನು ಎಂಬದಾಗಿ ಚಿತ್ರಿಸಲ್ಪಟ್ಟಿದ್ದಾನೆ (ದಾನಿಯೇಲ 10:13, 21; 12:1). ಯೂದನು 9ನೇ ವಚನವು ಮೋಶೆಯ ಶವದ ವಿಷಯದಲ್ಲಿ ನಡೆದ ವ್ಯಾಜ್ಯದ ಕುರಿತಾಗಿ ಒಂದು ಗೂಢಾತ್ಮಕ ಉಲ್ಲೇಖವನ್ನು ಮಾಡುತ್ತದೆ. ಸೈತಾನನೊಂದಿಗೆ ವ್ಯಾಜ್ಯವು ಮೀಕಾಯೇಲನಿಗೆ ಹೊಸದೇನೂ ಆಗಿರಲಿಲ್ಲ ಎಂಬುದನ್ನು ಈ ವಾಕ್ಯಭಾಗವು ತೋರಿಸುತ್ತದೆ. ಘಟಸರ್ಪದೊಂದಿಗಿನ ಯುದ್ಧದ ವಿಷಯವಾಗಿ, ಕೆಲವರು ಹೀಗೆ ಕೇಳುತ್ತಾರೆ, "ಮೀಕಾಯೇಲನೇ ಏಕೆ ಮತ್ತು ಬೇರೆ ಇನ್ನೊಬ್ಬರು ಯಾಕಾಗಬಾರದು. ಬಹುಶಃ ಯೇಸುವು ಸಹ ಏಕೆ ಆಗಿರಬಾರದು?" ಅಂಥ ವಿವರಗಳು ತೊಂದರೆದಾಯಕವಾಗಿರಲಾರವು. ಈ ಭಾಷೆಯು *ಸಾಂಕೇತಿಕತೆ* ಆಗಿದ್ದು, ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ಯುದ್ಧವನ್ನು ಬಣ್ಣಿಸುವದಾಗಿದೆ.

**ಘಟಸರ್ಪನೂ ಅವನ ದೂತರೂ ಯುದ್ಧಮಾಡಿ**ದರು. ಸೈತಾನನ ಬಳಿಯಲ್ಲಿ **ದೂತರು** ಇದ್ದಾರೆ, ಆತನ ಅಧೀನದಲ್ಲಿರುವ ಆತ್ಮೀಕ ಜೀವಿಗಳಾಗಿದ್ದಾರೆ (ನೋಡಿರಿ ಮತ್ತಾಯ 25:41). ಇದೊಂದು ಗಂಭೀರವಾದ ಯುದ್ಧವಾಗಿತ್ತು. ಘಟಸರ್ಪನು ಹೋರಾಟವನ್ನು ನೀಡದೆ ಶರಣಾಗಲಿಲ್ಲ ಮತ್ತು ಶರಣಾಗುವದೂ ಇಲ್ಲ. ಆತನಿಗೂ ಆತನ ಮಿತ್ರಪಡೆಗಳಿಗೂ ಅವರ ನಿತ್ಯತ್ವದ ಅಂತ್ಯಾವಸ್ಥೆಯು ಪಣಕ್ಕೀಡಲ್ಪಟ್ಟಿದೆ ಎಂಬುದು ಗೊತ್ತಿದೆ.

**ವಚನ 8.** ಹೇಗೂ, ಅವರು **ಸೋತು ಹೋದರು**. Earl Palmerನು ಹೀಗೆ ವ್ಯಾಖ್ಯಾನಿಸುತ್ತಾನೆ,

> ಬ್ರಹ್ಮಾಂಡ ದುಷ್ಟನಾದ ಸೈತಾನನ ಶಕ್ತಿಯನ್ನು ಅತಿಯಾಗಿ ಎಣಿಸದಿರುವದು ಪ್ರಾಮುಖ್ಯವಾಗಿರುತ್ತದೆ. ದುಷ್ಟತ್ವವು ಯಾವಾಗಲೂ ಅದು ಕಾಣುವದಕ್ಕಿಂತಲೂ ಕಡಿಮೆ ಭಾರವುಳ್ಳದ್ದಾಗಿರುತ್ತದೆ. ಅದು ಯಾವಾಗಲೂ ಬೆದರಿಕೆಗಳ ಹಾಗೂ ಕಾಪಾಡಿಕೊಳ್ಳಲು ಸಾಧ್ಯವಿಲ್ಲದ ವಾಗ್ದಾನಗಳ ಮುಖವಾಡವನ್ನು ಹಾಕಿಕೊಂಡಿರುತ್ತದೆ. ಸೈತಾನನಿಂದ ಬರುವ ಶೋಧನೆಗಳ ತಿರುಳೇ ಇದಾಗಿರುತ್ತದೆ. ನಮ್ಮನ್ನು ಹಾನಿಮಾಡಿಕೊಳ್ಳಲು ಸೈತಾನನ ಶಕ್ತಿಗೆ ಅತಿಯಾದ ಬೆಲೆ ಕಟ್ಟುವಾಗ, ನಮಗೆ ಸಹಾಯ ಮಾಡುತ್ತೇನೆಂದು ಆತನು ಮಾಡುವ ವೈಭೋಗದ ವಾಗ್ದಾನಗಳನ್ನು ವಿಶ್ವಾಸಿಸುವಾಗ ಸಂಭವಿಸುವ ರೀತಿಯಲ್ಲಿಯೇ ಈಗಲೂ ಆತನ ಶೋಧನೆಗೆ ಬಲಿಯಾಗಿ ಬಿಡುತ್ತೇವೆ ..."[27]

ಕೆಲವರು ಸೈತಾನನನ್ನು ಎದುರಿಸುವದಕ್ಕೆ ಪ್ರಯತ್ನ ಮಾಡುವದು ನಿಷ್ಪ್ರಯೋಜಕವಾದದ್ದೆಂದು ಯೋಚಿಸುವಂತೆ ಕಾಣಿಸುತ್ತದೆ. "ಸೈತಾನನು ಇದನ್ನು ಮಾಡುವಂತೆ ನನ್ನನ್ನು ನಡಿಸಿದನು" ಎಂಬ ನಾಲಿಗೆಯ ತುದಿಯಲ್ಲಿಯೇ ಇರುವಂಥ ಆಗಾಗ ಕೇಳಿಸಿಕೊಳ್ಳುವ ನೆಪವು ಪ್ರಲೋಭನೆಗಳನ್ನು ಎದುರಿಸುವದು ಅಸಾಧ್ಯವೇನೋ ಎಂಬ ಭಾವನೆಯನ್ನು ಮೂಡಿಸುತ್ತದೆ. ಸೈತಾನನು ಶಕ್ತಿಶಾಲಿಯಾಗಿದ್ದಾನಾದರೂ, ಆತನು ಸರ್ವಶಕ್ತಿಯುಳ್ಳವನಲ್ಲ - ಮತ್ತು ಆತನು ಎದುರಿಸಲಾಗದಂಥವನೇನೂ ಅಲ್ಲ ಎಂಬುದನ್ನು ಈ ವಾಕ್ಯಭಾಗವು ಸ್ಪಷ್ಟಗೊಳಿಸುತ್ತದೆ. ಶಾಸ್ತ್ರವು ಪಾರಸಿದ ದ್ವಿತ್ವದಂತಹ ಯಾವ ಸಂಗತಿಯನ್ನು

ನಮ್ಮ ಮುಂದಿಡುವದಿಲ್ಲ, ಪಾರಸಿದ ದ್ವಿತ್ವದಲ್ಲಿ ಒಳ್ಳೇದು ಮತ್ತು ಕೆಟ್ಟದ್ದು ಸರಿಸಮಾನವಾದ ಶಕ್ತಿಗಳಂತೆ ತೋರ್ಪಡಿಸಲ್ಪಟ್ಟಿರುತ್ತದೆ. ನಾವು ಸೇವಿಸುವ ದೇವರಿಗೆ ಸೈತಾನನು ಅಪರಿಮಿತವಾಗಿ ಕಡಿಮೆಯಾದವನಾಗಿದ್ದಾನೆ:

ಅವನಿಗೆ ಏಳು ತಲೆಗಳಿರಬಹುದು ಮತ್ತು ಬಹಳ ಚತುರನಾಗಿರಬಹುದು, ಆದರೆ ಆತನಿಗೆ ದೇವರ ಯೋಜನೆಗಳನ್ನು ವಿರೋಧಿಸುವದು ವ್ಯರ್ಥವೆಂಬದು ಅರ್ಥವಾಗುವದಿಲ್ಲ ಎಂದು ತೋರುತ್ತದೆ (12:4, 5, 7-10). ಆತನು ಸರ್ವವ್ಯಾಪಿಯಲ್ಲ.

ಆತನಿಗೆ ಹತ್ತು ಕೊಂಬುಗಳಿರಬಹುದು ಮತ್ತು ನಕ್ಷತ್ರಗಳೊಳಗೆ ಮೂರಲ್ಲೊಂದು ಭಾಗವನ್ನು ಕೆಳಗೆ ಉರುಳಿಸಲು ಶಕ್ತನಾಗಬಹುದು, ಆದರೆ ದೇವರಿಗೆ ಸಾಧ್ಯವಿರುವಂತೆ ಆತನು *ಎಲ್ಲಾ* ನಕ್ಷತ್ರಗಳನ್ನು ಕೆಳಕ್ಕೆ ಬೀಳಿಸಲಾರನು (6:13). ಆತನು ಸರ್ವಶಕ್ತನು ಅಲ್ಲ.

ಆತನಿಗೆ ಏಳು ಮುಕುಟಗಳಿರಬಹುದು, ಆದರೆ ಆತನ ಅಧಿಕಾರವು ಕೇವಲ ಕ್ಷಣಿಕವಾದದ್ದು. ಅಂತ್ಯದಲ್ಲಿ, "ಅನೇಕ ಮುಕುಟಗಳು" (19:12) ಉಳ್ಳವನಾಗಿ ನಿಲ್ಲುವ ಏಕೈಕ ವ್ಯಕ್ತಿ ಯೇಸುವೇ, ಆತನೊಬ್ಬನೇ "ರಾಜಾಧಿರಾಜಬೂ ಕರ್ತರ ಕರ್ತನೂ" ಆಗಿರುವನು (19:16).

ಸೈತಾನನ್ನು ಎಂದಿಗೂ ಸರ್ವವ್ಯಾಪಿಯಾಗಿ ಚಿತ್ರಿಸಲಾಗಿರುವದಿಲ್ಲ (ನೋಡಿರಿ ಯೋಬ 2:2). ಆತನು ಮಾನವರ ಚಟುವಟಿಕೆಗಳ ಮೇಲೆ ನಿಗಾ ಇಡಬೇಕಾದರೆ ತನ್ನ ಸಹಾಯಕರನ್ನೇ ಅವಲಂಭಿಸಬೇಕಾಗಿರುತ್ತದೆ (ಪ್ರಕಟನೆ 12:7, 9).

ಸೈತಾನನು ಹೋರಾಟ ನೀಡಬಲ್ಲವನು ಮತ್ತು ಭೀತಿಯುಂಟು ಮಾಡುವವನು ಸಹ ಆಗಿದ್ದಾನೆ, ಆದರೆ ದೇವರ ಸಹಾಯದೊಂದಿಗೆ ಆತನನ್ನು ಸೋಲಿಸುವದು ಸಾಧ್ಯವಿರುತ್ತದೆ. ಯಾಕೋಬನು ಹೀಗೆ ಹೇಳಿದನು, "ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿ ಹೋಗುವನು" (ಯಾಕೋಬ 4:7). ಸೈತಾನನ ಶಕ್ತಿಯು ಶಿಲುಬೆಯ ಶಕ್ತಿಗೆ ಸರಿಸಾಟಿಯಾಗಲಾರದು: "ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು ಜಯಿಸಿದರು" (ಪ್ರಕಟನೆ 12:11).

ಸೈತಾನನ ಸೋಲನ್ನು ಕುರಿತು ಚರ್ಚಿಸುವ ವೇಳೆ, ಅನೇಕ ಲೇಖಕರು ಆದಿಕಾಂಡ 3:15ನ್ನು ಮಧ್ಯದಲ್ಲಿ ತರುತ್ತಾರೆ, "ಎಲ್ಲಾ ವಾಗ್ದಾನಗಳ ತಾಯಿ." William Hendriksenನು ದೃಢವಾಗಿ ಒತ್ತಿ ಹೇಳಿದ್ದೇನೆಂದರೆ ಪ್ರಕಟನೆ 12ನೇ ಅಧ್ಯಾಯವು "ಬಹಳ ಸ್ಪಷ್ಟವಾಗಿ [ಆದಿಕಾಂಡ] 3:15ರ ಮೇಲೆ ಆಧಾರವಾಗಿದೆ: ಎರಡರಲ್ಲಿಯೂ ಅದೇ ವ್ಯಕ್ತಿಗಳು ಕಾಣಿಸಿಕೊಳ್ಳುತ್ತಾರೆ; ಎರಡರಲ್ಲಿಯೂ ಪ್ರಚುರಪಡಿಸಲ್ಪಟ್ಟಿರುವ ಸತ್ಯವು ಒಂದೇ ಆಗಿದೆ."[28] ಆದಿಕಾಂಡ 3:15ರಲ್ಲಿ, ದೇವರು ಸರ್ಪವನ್ನು ಶಪಿಸಿದ ವೇಳೆ, ಆತನು ಹೀಗೆ ನುಡಿದನು, "ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ." "ಆಕೆಯ ಸಂತಾನ" ಎಂಬುದು ಕ್ರಿಸ್ತನಿಗೆ ಉಲ್ಲೇಖವಾಗಿತ್ತು (ನೋಡಿರಿ ಗಲಾತ್ಯ 4:4), ಅದೇ ವೇಳೆಯಲ್ಲಿ ಸರ್ಪವು ಸೈತಾನನನ್ನು ಪ್ರತಿನಿಧಿಸುವದಾಗಿತ್ತು (ನೋಡಿರಿ ಪ್ರಕಟನೆ 12:9). "ಆಕೆಯ ಸಂತಾನ" ಎಂಬುದು ಹವ್ವಳ ಸಂತತಿಯನ್ನು ಸೂಚಿಸಬಹುದಾಗಿದೆ, ಆದರೆ ಅದು ವಾಕ್ಯಭಾಗದಲ್ಲಿ ನಂತರ ಬರುವ ಏಕವಚನದಿಂದ ಅರ್ಹಗೊಳಿಸಲ್ಪಡುತ್ತದೆ: "ಅವನ." ಹೀಗೆ "ಆಕೆಯ ಸಂತಾನ" ಎಂಬ ಪದಗುಚ್ಛವು ಆಕೆಯ ಸಂತತಿಯವರಲ್ಲಿ ಒಬ್ಬನೇ *ಒಬ್ಬನನ್ನು* ಸೂಚಿಸುವದಾಗಿದೆ. ನಿರ್ದಿಷ್ಟವಾಗಿ, ಅದು ಯೇಸುವನ್ನು ಸೂಚಿಸುತ್ತದೆ. ಕ್ರಿಸ್ತನು ಸೈತಾನನ "ತಲೆಗೆ" ಒಂದು ಹೊಡೆತವನ್ನು (ಮರಣಾಂತಿಕ ಗಾಯ) ಕೊಡುವನು, ಅಲ್ಲದೆ ಕ್ರಿಸ್ತನು ಸಹ ಸ್ವತಃ ಒಂದು "ಹಿಮ್ಮಡಿ" ಗಾಯವನ್ನು ಶಿಲುಬೆಯ ಮೇಲೆ

ಅನುಭವಿಸಿದನು ಎಂಬುದನ್ನು ಈ ವಾಕ್ಯಭಾಗವು ಕಲಿಸುತ್ತದೆ, ಯೇಸುವು ಮರಣಿಸಿದಾಗ (ಹಿಮ್ಮಡಿಗೆ ಕಚ್ಚಲ್ಪಡುವದು), ಆತನು ಸೈತಾನನ ಶಕ್ತಿ ಹಾಗೂ ಅಧಿಕಾರವನ್ನು (ತಲೆಯು ಜಜ್ಜಲ್ಪಡುವದು) ನಾಶಗೊಳಿಸುವನು ಎಂಬುದನ್ನು ಈ ವಾಕ್ಯಭಾಗವು ಕಲಿಸುತ್ತದೆಂಬುದನ್ನು ನಾವು ಕಾಣಬಹುದು. ಯೇಸುವು ಶಿಲುಬೆಯ ಮೇಲೆ ಮರಣಿಸಿದ್ದು ಕೇವಲ ಒಂದು "ಹಿಮ್ಮಡಿ" ಗಾಯ (ಒಂದು ಕೃತಕ ಗಾಯ) ಮಾತ್ರವೇ ಆಗಿತ್ತದೆಂಬುದನ್ನು *ಪುನರುತ್ಥಾನ* ಸಾಭಿತುಪಡಿಸಿತು. ಹೀಗಿರುವದರಿಂದ John Stottನು ಸೈತಾನನ ಪತನದ ಕುರಿತು ಹೀಗೆ ಬರೆದನು,

> ಆತನ *ಪದಚ್ಯುತಿ*ಯು ದೇವಕುಮಾರನ ಬರೋಣದಿಂದ ಆರಂಭಗೊಂಡಿತ್ತು, ಆತನಲ್ಲಿ ಸೈತಾನನಿಗೆ "ಸಂಬಂಧಪಟ್ಟದ್ದು ಯಾವದೂ ಇರಲಿಲ್ಲ" (ಯೋಹಾನ 14:30) ಕ್ರಿಸ್ತನು ಪ್ರತ್ಯಕ್ಷನಾಗಿದ್ದರ ವೇಗದ ಉದ್ದೇಶವು "ಸೈತಾನನ ಕ್ರಿಯೆಗಳನ್ನು ಲಯಮಾಡುವದೇ" ಆಗಿತ್ತು (1 ಯೋಹಾನ 3:8). ಇದು ಸರ್ವೋಚ್ಚವಾಗಿ ಆತನ ಮರಣ ಹಾಗೂ ಪುನರುತ್ಥಾನಗಳಿಂದ ಸಾಧಿಸಲ್ಪಟ್ಟಿತು.[29]

Stottನು ತನ್ನ ಹೇಳಿಕೆಗೆ ಬೆಂಬಲವಾಗಿ ಯೋಹಾನ 12:23, 27, 31, 32; 16:11 ವಾಕ್ಯಗಳನ್ನು ಬಳಸುತ್ತಾನೆ. ಯೇಸುವಿನ ಸೇವೆಯ ಮೂಲಕವಾಗಿ ಸೈತಾನನನ್ನು ಅಧಿಕಾರದಿಂದ ಕಿತ್ತೊಗೆಯುವದನ್ನು ಉಲ್ಲೇಖಿಸುವ ಇನ್ನೊಂದು ವಾಕ್ಯಭಾಗವೆಂದರೆ ಲೂಕ 10:18, ಅದು ಸೈತಾನನು "ಆಕಾಶದಿಂದ ಬೀಳುವ" ಕುರಿತು ಹೇಳುತ್ತದೆ. ಲೂಕ 10:18 ಅನೇಕ ಸಾರಿ ಪ್ರಕಟನೆ 12:7-10ಕ್ಕೆ ಜೋಡಿಸಲ್ಪಡುತ್ತದೆ, ಯಾಕೆಂದರೆ ಅದು ಅದೇ ರೀತಿಯ ಭಾಷೆಯನ್ನು ಬಳಸುತ್ತದೆ; ಆದರೆ ಸನ್ನಿವೇಶದಲ್ಲಿ, ಅದು ಶಿಷ್ಯರು ದೆವ್ವಗಳನ್ನು ಓಡಿಸುವದಕ್ಕೆ ಶಕ್ತರಾದಾಗ ಮನುಷ್ಯರ ಮೇಲಿರುವ ಸೈತಾನನ ಶಕ್ತಿಯನ್ನು ಅದು ಕಡಿಮೆಗೊಳಿಸಲ್ಪಡುವದನ್ನು ಸೂಚಿಸುತ್ತದೆ.

ಇಬ್ರಿಯ ಪುಸ್ತಕದ ಲೇಖಕನು ಹೇಳಿದ್ದೇನೆಂದರೆ ಯೇಸುವು "*ತನ್ನ ಮರಣದಿಂದಲೇ* ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿಬಿಡುವದಕ್ಕೂ" ಶರೀರಧಾರಿಯಾದನು ಎಂಬದೆ (ಇಬ್ರಿಯ 2:14; ಒತ್ತಿ ಹೇಳಿದ್ದು ನನ್ನದು). ಪೌಲನು ಒತ್ತಿ ಹೇಳಿದ್ದೇನೆಂದರೆ, ಯೇಸುವು ಮರಣಿಸಿದ ವೇಳೆ "ಆತನು ದೊರೆತನಗಳನ್ನೂ ಅಧಿಕಾರಗಳನ್ನೂ ನಿರಾಯುಧರನ್ನಾಗಿ" ಮಾಡಿದನು ಎಂಬದೆ (ಕೊಲೊಸ್ಸೆ 2:15; ನೋಡಿರಿ ಕೊಲೊಸ್ಸೆ 2:14). ಪೇತ್ರನು ಬರೆದದ್ದೇನೆಂದರೆ ಯೇಸುವು ಈಗ "ಪರಲೋಕಕ್ಕೆ ಹೋಗಿ ದೇವರ ಬಲಗಡೆಯಲ್ಲಿದ್ದಾನೆ; ದೇವದೂತರೂ ಅಧಿಕಾರಿಗಳೂ ಮಹತ್ವಗಳೂ ಆತನ ಸ್ವಾಧೀನ*ವಾಗಿವೆ*" ಎಂಬದೆ (1 ಪೇತ್ರ 3:22; ಒತ್ತಿ ಹೇಳಿದ್ದು ನನ್ನದು).

ಸೈತಾನನ ಅಂತಿಮವಾದ ತೀವ್ರ ದಾಳಿಯು ಯೇಸುವಿನ ಶ್ರಮೆಮರಣಗಳ[30] ಸಂದರ್ಭದಲ್ಲಿ ಆಗಿದೆ, ಆತನು ಯೇಸುವನ್ನು ಕೊಲ್ಲುವಂತೆ ಕೈಚಳಕದಿಂದ ಯೆಹೂದ್ಯರು ಹಾಗೂ ರೋಮನ್ ಅಧಿಕಾರಿಗಳಲ್ಲಿ ಕಾರ್ಯಮಾಡಿದನು. ಸೈತಾನನು ಕ್ರಿಸ್ತನನ್ನು ಶಿಲುಬೆಯ ಮೇಲೆ ನೋಡುವಾಗ, ತಾನು ಗೆದ್ದು ಬಿಟ್ಟೆನು ಎಂಬದಾಗಿ ತನ್ನನ್ನು ಭಾವಿಸಿಕೊಂಡಿರಬೇಕು - ಆದರೆ ಸೈತಾನನಿಗೆ ಮಾಡಲು ಸಾಧ್ಯವಿದ್ದ ಅತ್ಯಂಥ ಘೋರವಾದ ಕೃತ್ಯವು, ವಾಸ್ತವಿಕದಲ್ಲಿ ಅವನ ಕೆಲಸವನ್ನೆಲ್ಲಾ ಕೆಡಿಸಿತ್ತು.[31] ಸೈತಾನನು ಪಿಲಾತನ ನ್ಯಾಯಾಲಯದಲ್ಲಿ ತೀರ್ಪನ್ನು ಗೆದ್ದುಕೊಂಡಿರಬಹುದು, ಆದರೆ ದೇವರ ನ್ಯಾಯಾಲಯವು ಆ ತೀರ್ಪನ್ನು ಪುನರುತ್ಥಾನದಲ್ಲಿ ರದ್ದುಗೊಳಿಸಿ ಬಿಟ್ಟಿತ್ತು![32]

ಯೇಸುವಿನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳ ಫಲಿತವಾಗಿ, ಸೈತಾನನಿಗೂ ಆತನ ದೂತರಿಗೂ **ಪರಲೋಕದೊಳಗೆ ಸ್ಥಾನ ತಪ್ಪಿ ಹೋಯಿತು**. ಈ ಭಾಷೆಯು ಮಾನವನ ಸೃಷ್ಟಿಗೆ ಮುನ್ನ ಸೈತಾನನು ಅನಿರ್ದಿಷ್ಟವಾದ ಕಾಲಗಳಲ್ಲಿ ತನ್ನ ಒಂದು ಉನ್ನತವಾದ ಸ್ಥಾನವನ್ನು ಕಳೆದುಕೊಂಡನು ಎಂಬ ಅರ್ಥವನ್ನು ಕೊಡುವದಿಲ್ಲ. ಬದಲಾಗಿ, ಇದು ದುಷ್ಟಶಕ್ತಿಗಳು ಸೋಲಿಸಲ್ಪಡುವದನ್ನು ಮತ್ತು ಮಾನವರ ಮೇಲೆ ಸೈತಾನನಿಗಿರುವ ಅಧಿಕಾರವು ಕ್ಷೀಣಿಸಲ್ಪಡುವದನ್ನು ಸೂಚಿಸುವ ಸಾಂಕೇತಿಕ ರೀತಿಯಾಗಿರುತ್ತದೆ. Homer Haileyನು ಹೀಗೆ ಬರೆದನು, "ಹೋರಾಟದಲ್ಲಿ ಸೈತಾನನು ಸೋಲಿಸಲ್ಪಡುತ್ತಾನೆ ಮತ್ತು ಮನುಷ್ಯರ ಮೇಲೆ ಆತನಿಗಿದ್ದ ದರ್ಪದ ನಿಯಂತ್ರಣದಿಂದ ಕೆಳಕ್ಕೆ ದೊಬ್ಬಲ್ಪಡುತ್ತಾನೆ."[33]

**ವಚನ 9. ಭೂಲೋಕದವರನ್ನೆಲ್ಲಾ ಮರುಳುಗೊಳಿಸುವ ಆ ಮಹಾ ಘಟಸರ್ಪನು ಅಂದರೆ ಪಿಶಾಚನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪವು ದೊಬ್ಬಲ್ಪಟ್ಟು ಭೂಮಿಗೆ ಬಿದ್ದನು.**

9 ಮತ್ತು 10 ವಚನಗಳು ವೈರಿಗಾಗಿ ಹಲವಾರು ನಾಮಧೇಯಗಳನ್ನು ಒದಗಿಸುತ್ತದೆ. ಮೊದಲನೆಯದಾಗಿ ಆತನು **ಪುರಾತನ ಸರ್ಪ** ಎಂದು ಕರೆಯಲ್ಪಟ್ಟಿದ್ದಾನೆ. ಈ ಬಿರುದು ನಮಗೆ ಆದಿಕಾಂಡ 3ನ್ನು ಜ್ಞಾಪಿಸುತ್ತದೆ ಮತ್ತು ಹವ್ವಳು ಅವಿಧೇಯತ್ವಕ್ಕೆ ನಡಿಸಲ್ಪಟ್ಟಿದ್ದು ಒಂದು ಸಾಧಾರಣವಾದ ಸರ್ಪದ ಮೂಲಕವಲ್ಲ, ಆದರೆ ಸೈತಾನನ ಮೂಲಕವೇ ಎಂಬುದು ಗೊತ್ತಾಗುತ್ತದೆ. ಆದಿಕಾಂಡ 3ರಲ್ಲಿನ ಸರ್ಪವು ಸೈತಾನನಿಂದ ಬಳಸಲ್ಪಟ್ಟ ಸರ್ಪವಾಗಿತ್ತು ಅಥವಾ ಸರ್ಪದ ರೂಪದಲ್ಲಿ ಮಾರ್ಪಡಿಸಿಕೊಂಡಿದ್ದ ಸ್ವತಃ ಸೈತಾನನೇ ಆಗಿದ್ದನು. ಪಾಪವು ಲೋಕದೊಳಗೆ ತಂದಿರುವಂಥ ಸಕಲ ನೋವು ಹಾಗೂ ಹೃದಯವೇದನೆಯನ್ನು ಕುರಿತು ಆಲೋಚಿಸಿರಿ. ಅದಕ್ಕೆ ಕಾರಣಕರ್ತನು ಸೈತಾನನೇ.

ಘಟಸರ್ಪನು **ಪಿಶಾಚನೆಂತಲೂ** ಕರೆಯಲ್ಪಟ್ಟಿದ್ದಾನೆ. ಬಹುಪಾಲು ತರ್ಜುಮೆಗಳಲ್ಲಿ, "ಪಿಶಾಚಿ" ("devil") ಎಂಬುದನ್ನು ಒಂದು ಸಾಮಾನ್ಯ ನಾಮಪದ ಎಂಬಂತೆ ಬಿಂಬಿಸಲಾಗಿರುತ್ತದೆ (ಚಿಕ್ಕ "d" ಯಿಂದ ಆರಂಭಗೊಳ್ಳುತ್ತದೆ), ಅದೇ ವೇಳೆಯಲ್ಲಿ "ಸೈತಾನ" ("Satan") ಎಂಬುದನ್ನು ಒಂದು ಅಂಕಿತನಾಮ ಎಂಬಂತೆ ಬಿಂಬಿಸಲಾಗಿರುತ್ತದೆ ("S" ನಿಂದ ಆರಂಭಗೊಳ್ಳುತ್ತದೆ). ಈ ರೀತಿಯಾಗಿ ವ್ಯತ್ಯಾಸದಿಂದ ಕಾಣುವುದು ಇಲ್ಲಿ ಮಹತ್ವವಿಲ್ಲದ್ದಾಗಿದೆ. "ಪಿಶಾಚ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು διάβολος (*diabolos*) ಎಂದಾಗಿದ್ದು, ಅದರರ್ಥವು "ದೂಷಕನು" ಅಥವಾ "ಅಪನಿಂದಕ" ಎಂದಾಗಿರುತ್ತದೆ.

ನಂತರ, ಘಟಸರ್ಪನು **ಸೈತಾನನೆಂತಲೂ** ಕರೆಯಲ್ಪಟ್ಟಿದ್ದಾನೆ. ಈ ಪದವು ಗ್ರೀಕ್ ಭಾಷೆಯ Σατανᾶς (*Satanas*) ಎಂಬ ಪದದ ಲಿಪ್ಯಂತರಣವಾಗಿರುತ್ತದೆ, ಪ್ರತಿಯಾಗಿ ಈ ಪದವು ಇಬ್ರಿಯ ಭಾಷೆಯ שָׂטָן (*sātān*) ಎಂಬುದರ ಲಿಪ್ಯಂತರಣವಾಗಿದೆ. *Sātān* ಎಂಬುದರ ಅರ್ಥವು "ವಿರೋಧಿ" ಎಂದಾಗಿದೆ. ಇದು ಯಾವದೇ ವಿರೋಧಿಯನ್ನು ಸೂಚಿಸುವದಕ್ಕೆ ಒಂದು ಸಾಮಾನ್ಯ ವಿಧದಲ್ಲಿ ಬಳಸಲ್ಪಡುತ್ತಿತ್ತು (ನೋಡಿರಿ ಅರಣ್ಯಕಾಂಡ 22:22; 1 ಸಮುವೇಲ 29:4; 1 ಅರಸು 5:4; 11:14, 23). ಕ್ರಮೇಣದಲ್ಲಿ, ಈ ಪದವು ಒಂದು ಮಿತಿಯುಳ್ಳ ಅರ್ಥವನ್ನು ಪಡೆದುಕೊಂಡು ಮಾನವ ಜನಾಂಗದ ಒಬ್ಬ ಮಹಾ ವಿರೋಧಿಯೆಂಬ ಎಂಬುದನ್ನು ಸೂಚಿಸುವದಾಯಿತು ಹಾಗೂ ಒಂದು ಅಂಕಿತನಾಮವಾಯಿತು. ಸೈತಾನನು ಸಕಲ ಕ್ರೈಸ್ತರಿಗೆ ವೈರಿ, ವಿರೋಧಿ, ಖಳನಾಯಕ ಆಗಿರುತ್ತಾನೆ.

ಘಟಸರ್ಪನ ಕೆಲಸದ ವಿಷಯವಾಗಿ, ಆತನು **ಭೂಲೋಕದವರನ್ನೆಲ್ಲಾ ಮರುಳುಗೊಳಿಸುವ**ವನು ಎಂದು ಸಹ ಹೇಳಲ್ಪಟ್ಟಿರುತ್ತದೆ. ಆತನ ಕೆಲಸವು ವಂಚಕನ

ಕೆಲಸವಾಗಿರುತ್ತದೆ (ಯೋಹಾನ 8:44; 2 ಕೊರಿಂಥ 4:4; 11:14). ಆತನು ಯೂದನನ್ನು ವಂಚಿಸಿದನು (ಲೂಕ 22:3; ಯೋಹಾನ 13:2, 27), ಮತ್ತು ಪೇತ್ರನನ್ನು ವಂಚಿಸುವದಕ್ಕೆ ಪ್ರಯತ್ನಿಸಿದನು (ಲೂಕ 22:31). ಆತನು ಅನನೀಯ ಮತ್ತು ಸಪ್ಫೈರಳನ್ನು ವಂಚಿಸಿದನು (ಅಪೊಸ್ತಲರ ಕೃತ್ಯಗಳು 5:3), ಮತ್ತು ಆತನು ಎಲ್ಲಾ ಕ್ರೈಸ್ತರನ್ನು ವಂಚಿಸುವದಕ್ಕೆ ಪ್ರಯತ್ನಿಸಿದನು (ನೋಡಿರಿ ಮತ್ತಾಯ 13:39; ಲೂಕ 8:12; 2 ಕೊರಿಂಥ 2:11; ಎಫೆಸ 6:11).

ಅತ್ಯಂಥ ಯಶಸ್ವಿಕರವಾದ ವಂಚನೆಗಳಲ್ಲೊಂದೆಂದರೆ ಆತನು ಕೇವಲ ಒಂದು ಕಟ್ಟುಕಥೆಯಷ್ಟೆ, ಮೂಢನಂಬಿಕೆಯುಳ್ಳವರ ವಂಚಕ ಕಲ್ಪನೆ ಮಾತ್ರವೇ ಆಗಿದ್ದಾನೆಂಬುದಾಗಿ "ಸುಸಂಸ್ಕೃತರಲ್ಲಿ" ಮನವರಿಕೆಯುಂಟು ಮಾಡಿರುವದೇ. ಅದು ಸತ್ಯವಾಗಿದ್ದರೆ ಚೆಂದವಿತ್ತದೆಂದು ಜನರು ಹಾರೈಸಬಹುದಾದರೂ, ಅದು ಸತ್ಯವಲ್ಲ. ಬೈಬಲ್ ಈಗಲೂ ಎಚ್ಚರಿಸುವದೇನೆಂದರೆ, "ಸ್ವಸ್ಥಚಿತ್ತರಾಗಿರಿ, ಎಚ್ಚರವಾಗಿರಿ; ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ" (1 ಪೇತ್ರ 5:8). ಕ್ರೈಸ್ತರು ವೈರಿಯನ್ನು ಅಸಡ್ಡೆಮಾಡುವ ಅಥವಾ ಕಮ್ಮಿಯಾಗಿ ಎಣಿಸುವ ಹುಚ್ಚು ಸಾಹಸವನ್ನು ಮಾಡದಿರಲಿ.

ವಂಚಿಸುವದಕ್ಕೆ ಸೈತಾನನಿಗಿರುವ ಸಾಮರ್ಥ್ಯದ ವಿಷಯವಾಗಿ, ಈ ಕ್ಷೇತ್ರದಲ್ಲಿಯೇ ಆತನ ಶಕ್ತಿಯು ಕುಗ್ಗಿಸಲ್ಪಟ್ಟಿರುತ್ತದೆ: ಇಡೀ ಲೋಕವನ್ನು ತಲುಪುವ ಪ್ರಭಾವ ಹೊಂದಿರುವ ಸೈತಾನನು, **ದೊಬ್ಬಲ್ಪಟ್ಟನು.** ಅಂಧಕಾರದಲ್ಲಿ ವಂಚಿಸುವದು ಸುಲಭವಾಗಿರುತ್ತದೆ - ಆದರೆ ಸುವಾರ್ತೆಯು ಎಲ್ಲೆಲ್ಲಿ ಹೋಗಿರುತ್ತದೋ, ಅಲ್ಲಿ ಅನೇಕರ ಹೃದಯಗಳೊಳಗಿಂದ ಅಂಧಕಾರವು ಓಡಿಸಲ್ಪಟ್ಟಿರುತ್ತದೆ. ಸುವಾರ್ತೆಯು ಪ್ರಜ್ವಲಿಸುವಂಥ ಬೆಳಕು ಸೈತಾನನ ಉದ್ದೇಶಗಳಿಗೆ ವಿನಾಶಕಾರಿಯಾಗಿರುತ್ತದೆ.

ಸೈತಾನನು ಸೋಲಿಸಲ್ಪಟ್ಟಿದ್ದಾನೆ. ಆತನು ಇನ್ನು ಮೇಲೆ ಸಕ್ರಿಯನಾಗಿರುವದಿಲ್ಲ ಎಂದು ಇದರರ್ಥವಲ್ಲ; ಹೋರಾಡಬೇಕಾಗಿರುವ ಯಾವ ಯುದ್ಧಗಳು ಇನ್ನು ಮೇಲೆ ಇರುವದಿಲ್ಲ ಎಂದರ್ಥವಲ್ಲ. ಇದರರ್ಥವು ಸಭೆಯು ಒಬ್ಬ ಸೋಲಿಸಲ್ಪಟ್ಟಿರುವ ವೈರಿಯ ವಿರುದ್ಧ ಹೋರಾಡುವದಾಗಿದೆ ಎಂಬುದೆ. "ಕ್ರೈಸ್ತರು ... ಜಯದ ಕಡೆಗೆ ಹೋರಾಟವನ್ನು ನಡಿಸುತ್ತಿಲ್ಲ, ಆದರೆ ಈಗಾಗಲೇ ಸಾಧಿಸಲ್ಪಟ್ಟಿರುವ ಜಯದಿಂದ ಆರಂಭಿಸಿ ಹೋರಾಡುವವರಾಗಿದ್ದಾರೆ."[34]

## ಪರಲೋಕದಲ್ಲಿ ಒಂದು ಶಬ್ದ (12:10-12)

**10ಅವನ ದೂತರೂ ಅವನೊಂದಿಗೆ ದೊಬ್ಬಲ್ಪಟ್ಟರು. ಆಗ ಪರಲೋಕದಲ್ಲಿ ಮಹಾ ಶಬ್ದವನ್ನು ಕೇಳಿದೆನು, ಅದು - ಈಗ ಜಯವೂ ಶಕ್ತಿಯೂ ರಾಜ್ಯವೂ ನಮ್ಮ ದೇವರಿಗೆ ಉಂಟಾಯಿತು; ಆತನು ಅಭಿಷೇಕಿಸಿದವನ ಅಧಿಕಾರವು ಈಗ ಸ್ಥಾಪಿತವಾಯಿತು; ಹಗಲಿರುಳು ನಮ್ಮ ಸಹೋದರರ ಮೇಲೆ ನಮ್ಮ ದೇವರ ಮುಂದೆ ದೂರು ಹೇಳಿದ ದೂರುಗಾರನು ದೊಬ್ಬಲ್ಪಟ್ಟಿದ್ದಾನೆ. 11ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದೆ ಯಜ್ಞದ ಕುರಿಯಾದಾತನ ರಕ್ತದ ಬಲ ದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು ಜಯಿಸಿದರು. 12ಪರಲೋಕವೇ, ಅದರಲ್ಲಿ ವಾಸಮಾಡು ವವರೇ, ಹರ್ಷಗೊಳ್ಳಿರಿ. ಭೂಮಿಯೇ, ಸಮುದ್ರವೇ, ನಿಮ್ಮ ದುರ್ಗತಿ ಯನ್ನು ಏನು ಹೇಳಲಿ; ಸೈತಾನನು ತನಗಿರುವ ಕಾಲವು ಸ್ವಲ್ಪವೆಂದು ತಿಳಿದು ಮಹಾ ರೌದ್ರವುಳ್ಳವನಾಗಿ ನಿಮ್ಮ ಕಡೆಗೆ ಇಳಿದುಬಂದಿದ್ದಾನೆ ಎಂಬದಾಗಿ ಹೇಳಿತು.**

**ವಚನ 10.** 10ರಿಂದ 12 ವಚನಗಳು ಸೈತಾನನ ಸೋತಕ್ಕಾಗಿ ಕೊಂಡಾಟವನ್ನು ಆಚರಿಸುತ್ತವೆ. ಯೋಹಾನನು ಹೀಗೆ ಬರೆದನು, **ಆಗ ಪರಲೋಕದಲ್ಲಿ ಒಂದು ಮಹಾ ಶಬ್ದವನ್ನು ಕೇಳಿದೆನು.** ಈ **ಮಹಾ ಶಬ್ದ**ವು ಪರಲೋಕದ ಗಾಯಕ ವೃಂದದಿಂದ ಬಂದಿರಬಹುದಾಗಿದೆ: 10ನೇ ವಚನದಲ್ಲಿ **ನಮ್ಮ** ಎಂಬ ಪದವು ಬಳಸಲ್ಪಟ್ಟಿದೆ.

ಆ ಶಬ್ದವು ಮೊದಲು ಜಯದ ಫಲಗಳನ್ನು ಸಾರಿದವು: **ಈಗ ಜಯವೂ ಶಕ್ತಿಯೂ ರಾಜ್ಯವೂ ನಮ್ಮ ದೇವರಿಗೆ ಉಂಟಾಯಿತು; ಆತನು ಅಭಿಷೇಕಿಸಿದವನ ಅಧಿಕಾರವು ಈಗ ಸ್ಥಾಪಿತವಾಯಿತು.** "ಜಯ [ರಕ್ಷಣೆ]," "ಶಕ್ತಿ," ಮತ್ತು "ರಾಜ್ಯ," ಮತ್ತು "ಅಧಿಕಾರ" ಎಂಬ ಪದಗಳು ಯಾವದೋ ಭವಿಷ್ಯದಲ್ಲಿ ಸಂಭವಿಸುವ ಕ್ರಿಸ್ತನ ಕಲ್ಪನಾತ್ಮಕ ಆಳ್ವಿಕೆಯನ್ನು ಸೂಚಿಸುವದಿಲ್ಲ, ಆದರೆ ಯೇಸುವಿನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳ ತಕ್ಷಣದ ಫಲಿತಗಳನ್ನು ಸೂಚಿಸುವದಾಗಿದೆ: ಆತನ ಮರಣವು **ರಕ್ಷಣೆ**ಯನ್ನು ಸಾಧ್ಯವಾಗಿಸಿತು (ರೋಮಾ 5:9; ನೋಡಿರಿ ಮಾರ್ಕ 16:15, 16). ಯೇಸುವಿನ ಪುನರುತ್ಥಾನದ ಬಳಿಕ, ಆತನು "ಪರಲೋಕದಲ್ಲಿಯೂ ಭೂಲೋಕದಲ್ಲಿ ಎಲ್ಲಾ **ಅಧಿಕಾರವು** ನನಗೆ ಕೊಡಲ್ಪಟ್ಟಿದೆ" ಎಂದು ಹೇಳಿದನು (ಮತ್ತಾಯ 28:18). ಪುನರುತ್ಥಾನ ನಂತರದ ಮೊದಲ ಪಂಚಾಶತ್ತಮದಂದು, ಕ್ರಿಸ್ತನ **ರಾಜ್ಯವು ಶಕ್ತಿ**ಯೊಂದಿಗೆ ಇಳಿದು ಬಂದಿತು (ಮಾರ್ಕ 9:1; ಅಪೊಸ್ತಲರ ಕೃತ್ಯಗಳು 1:8; 2:1, 4); ಆತನ ಸಭೆಯು ಸ್ಥಾಪಿಸಲ್ಪಟ್ಟಿತು. ಈ ಸತ್ಯಗಳನ್ನು ಕೆಲವೊಮ್ಮೆ ಅಸಡ್ಡೆ ಮಾಡಲಾಗುತ್ತದೆ, ಆದರೆ ಅವುಗಳು ನಿರಂತರವಾದ ಸಂಭ್ರಮಕ್ಕೆ ಕಾರಣವಾಗಿರುತ್ತವೆ.

ಬಳಿಕ ಆ ಪರಲೋಕದ ಸ್ವರವು ಹೀಗೆ ಘೋಷಿಸಿತು, **ಹಗಲಿರುಳು ನಮ್ಮ ಸಹೋದರರ ಮೇಲೆ ನಮ್ಮ ದೇವರ ಮುಂದೆ ದೂರು ಹೇಳಿದ ದೂರುಗಾರನು ದೊಬ್ಬಲ್ಪಟ್ಟಿದ್ದಾನೆ. ದೂರುಗಾರನು** (κατήγωρ, *katēgōr*) ಎಂಬ ಪದವು ಹೊಸ ಒಡಂಬಡಿಕೆಯ ಕಾಲದಲ್ಲಿ ನ್ಯಾಯಾಲಯದಲ್ಲಿ ಬೇರೆಯವರ ಮೇಲೆ ದೂರು ಹೇಳುವವರನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 23:30, 35; 24:8; 25:16, 18), ಅದು ಒಂದು ರೂಢಿಯಲ್ಲಿದ್ದ ಅಭ್ಯಾಸವಾಗಿತ್ತು.[35] G. B. Cairdನು ಹೀಗೆ ಬರೆದನು, "ಯೋಹಾನನು ಮೀಕಾಯೇಲ ಹಾಗೂ ಸೈತಾನನ ನಡುವಿನ ಹೋರಾಟವನ್ನು ಮಿಲಿಟರಿ ಪದಗಳಲ್ಲಿ ಚಿತ್ರಿಸುತ್ತಾನಾದರೂ, ಸಾರಭೂತವಾಗಿ ಅದು ಪ್ರತಿವಾದಿಯ ವಿರುದ್ಧದ ಒಂದು ಕಾನೂನಾತ್ಮಕ ಯುದ್ಧವಾಗಿತ್ತು ..." ಬಳಿಕ ಆತನು ಆ ಕಾನೂನಾತ್ಮಕ ಯುದ್ಧವು "ಅವರಲ್ಲೊಬ್ಬನು ವಜಾಮಾಡಲ್ಪಡುವದರೊಂದಿಗೆ ಅಂತ್ಯಗೊಳ್ಳುವದನ್ನು"[36] ಆತನು ಕಾಣುತ್ತಾನೆ. J. W. Robertsನು ಫಲಿತಾಂಶವನ್ನು ಅದೇ ರೀತಿಯ ಪದಗಳಲ್ಲಿ ಸಾರಾಂಶಗೊಳಿಸುತ್ತಾನೆ: "ಫಿರ್ಯಾದಿ ವಕೀಲನು ಪರಲೊಕದ ನ್ಯಾಯಾಲಯದಲ್ಲಿ ತನ್ನ ವಕೀಲ ವೃತ್ತಿ ಮಾಡುವ ಹಕ್ಕನ್ನು [ಕಳೆದುಕೊಂಡನು]."[37]

ಸೈತಾನನು "ದೂರುಗಾರನು" ಎಂಬದರ ಕುರಿತಾದ ಬಹುಶಃ ಅತ್ಯುತ್ತಮ ವ್ಯಾಖ್ಯಾನವೆಂದರೆ ಯೋಬನ ಪುಸ್ತಕದ ಮೊದಲ ಎರಡು ಅಧ್ಯಾಯಗಳೆಂದು ಹೇಳಬಹುದು, ಅವುಗಳು ಯೋಬನು ಸ್ವಾರ್ಥ ಉದ್ದೇಶಗಳಿಗೋಸ್ಕರ ದೇವರಿಗೆ ವಿಧೇಯನಾಗುತ್ತಿದ್ದಾನೆಂದು ಸೈತಾನನು ಆತನ ಮೇಲೆ ದೂರು ಹೊರಿಸುತ್ತಾನೆ (ನೋಡಿರಿ ಜೆಕರ್ಯ 3:1). Merrill Tenneyನು ಅಭಿಪ್ರಾಯ ಪಡುವದೇನೆಂದರೆ ಸೈತಾನನು "ಕ್ರೈಸ್ತನ ಗುಣಸ್ವಭಾವಗಳಲ್ಲಿ ದೋಷಗಳನ್ನು ಕಂಡು ಹಿಡಿಯುವದಕ್ಕೆ ತವಕ ಪಡುವ ಉದ್ದೇಶವು ಅವುಗಳನ್ನು ಸರಿಪಡಿಸುವದಕ್ಕೆ ಅಲ್ಲ, ಆದರೆ ವಿಶ್ವಾಸಿಗಳೆಂದು ಅರಿಕೆ ಮಾಡಿರುವವರನ್ನು ಅಪಕೀರ್ತಿಗೂ ಅವಮಾನಕ್ಕೂ ಗುರಿಪಡಿಸುವದೇ ಆಗಿರುತ್ತದೆ."[38] ಪ್ರತಿಯೊಬ್ಬ ವ್ಯಕ್ತಿಯಲ್ಲಿ ಕಳಂಕ ಮತ್ತು

ಸುಕ್ಕುಗಳಿರುತ್ತವೆ (ಎಫೆಸ 5:27; ನೋಡಿರಿ ರೋಮಾ 3:23), ಪ್ರತಿಯೊಬ್ಬರನ್ನು ದೂಷಿಸುವದಕ್ಕೆ ತಪ್ಪುಗಳನ್ನು ಕಂಡು ಹಿಡಿಯುವದು ಸೈತಾನನಿಗೆ ಕಷ್ಟಕರವೇನೂ ಆಗಿರುವದಿಲ್ಲ. ಸೈತಾನನು ನಿರಂತರವಾಗಿ ದೇವರ ಜನರ ಮೇಲೆ **ಹಗಲಿರುಳು** ದೂರು ಹೇಳುತ್ತಲೇ ಇದ್ದಾನೆ. ಆತನು ಎಂದಿಗೂ ನಿಲ್ಲಿಸುವದಿಲ್ಲ; ಆತನು ಎಂದಿಗೂ ರಜೆಯನ್ನು ತೆಗೆದುಕೊಳ್ಳುವದಿಲ್ಲ. ಆತನಿಗೆ ನೀತಿವಂತರಲ್ಲಿ ವಿಫಲತೆಗಳನ್ನು ಎತ್ತಿ ತೋರಿಸುವದು ಮಹಾ ಆನಂದವಾಗಿರುತ್ತದೆ.

ಶಿಲುಬೆಯು ನಂಬಿಗಸ್ತರ ವಿರುದ್ಧವಾಗಿರುವ ಆತನ ದೂರಗಳಿಂದ “ಕೊಂಡಿ”ಯನ್ನು ತೆಗೆದು ಹಾಕಿರುತ್ತದೆ. Robert Mounceನು ಹೇಳಿದ ಹಾಗೆ, ಸೈತಾನನು “ನೀತಿವಂತರ ವಿರುದ್ಧ ಹಗಲಿರುಳು ದೂರು ಹೇಳುವದನ್ನು ಮುಂದುವರೆಸಿರುತ್ತಾನೆ. ಆದರೆ ಕ್ರಿಸ್ತನ ಮರಣದ ಸದ್ಗುಣದ ಕಾರಣದಿಂದಾಗಿ ಆತನು ದೇವರಾದುಕೊಂಡವರ ಮೇಲೆ ಯಶಸ್ವಿಕರವಾಗಿ ಒಂದು ದೋಷಾರೋಪವನ್ನು ಸಲ್ಲಿಸುವದಕ್ಕೆ ಅಶಕ್ತನಾಗಿರುತ್ತಾನೆ (ರೋಮಾ 8:33, 34)”[39] ಸೈತಾನನು ಈಗಲೂ ನಂಬಿಗಸ್ತರ ಮೇಲೆ ಆರೋಪಗಳನ್ನು ಮಾಡುತ್ತಾನೆ, ಆದರೆ “ದೇವರು ಇನ್ನು ಮೇಲೆ ತನ್ನ ಜನರ ವಿರುದ್ಧ ಮಾಡಲ್ಪಡುವ ದೂರುಗಳಿಗೆ ಕಿವಿಗೊಡುವದಿಲ್ಲ, ಯಾಕೆಂದರೆ ಅವರು ಕ್ಷಮಿಸಲ್ಪಟ್ಟಿರುತ್ತಾರೆ.”[40] Ellisonನು ಅದನ್ನು ಸಂಕ್ಷೇಪವಾಗಿ ಹೇಳಿದ ಪ್ರಕಾರ, ಯೇಸುವಿನ ಮರಣವು “ಸೈತಾನನ ಬಾಯನ್ನು ಮುಚ್ಚಿಸುತ್ತದೆ.”[41]

ರೋಮಾ 8ನೇ ಅಧ್ಯಾಯವು ಸೈತಾನನು ಸಹೋದರರ ಮೇಲೆ ದೂರುಗಳನ್ನು ಹೇಳುವದಕ್ಕೆ ತನಗಿರುವ ಸಾಮರ್ಥ್ಯವನ್ನು ಕಳೆದುಕೊಂಡಿರುವದರ ಕುರಿತು ಒಂದು ಅತ್ಯುತ್ತಮವಾದ ವ್ಯಾಖ್ಯಾನವಾಗಿರುತ್ತದೆ:

> ಆದದರಿಂದ ಕ್ರಿಸ್ತ ಯೇಸುವಿನಲ್ಲಿ ಇರುವವರಿಗೆ ಅಪರಾಧನಿರ್ಣಯವು ಈಗ ಇಲ್ಲವೇ ಇಲ್ಲ. ... ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು? ದೇವರು ಆದುಕೊಂಡವರ ಮೇಲೆ ಯಾರು ತಪ್ಪುಹೊರಿಸಾರು? ದೇವರೇ ನಮ್ಮನ್ನು ನೀತಿವಂತರೆಂದು ನಿರ್ಣಯಿಸುವವನಾಗಿದ್ದಾನೆ. ಅಪರಾಧಿಗಳೆಂದು ನಿರ್ಣಯಿಸುವವರು ಯಾರು? ಕ್ರಿಸ್ತ ಯೇಸು ಮರಣವನ್ನು ಹೊಂದಿದ್ದಲ್ಲದೆ ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ (ರೋಮಾ 8:1, 31, 33, 34).

**ವಚನ 11.** ಈ ವಚನವು ವಾಕ್ಯಭಾಗದ ಹೃದಯವಾಗಿರುತ್ತದೆ. ಇದು ಜಯದ ಪ್ರಾಥಮಿಕ ಮೂಲವನ್ನು ಕುರಿತು ಪ್ರಸ್ತಾಪಿಸುತ್ತದೆ, ಜೊತೆಗೆ ಎರಡನೆಯ ಮೂಲವನ್ನು ಕುರಿತು ತಿಳಿಸುತ್ತದೆ: **ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದೆ ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು ಜಯಿಸಿದರು.**

**ಜಯಿಸಿದರು** ಎಂಬುದು νίκη (*nikē*) ಎಂಬ ನಾಮಪದದ ಕ್ರಿಯಾಪದರೂಪವೊಂದರಿಂದ ಅನುವಾದಿಸಲ್ಪಟ್ಟಿರುತ್ತದೆ, ಇದು “ವಿಜಯ” ಎಂಬುದಕ್ಕಿರುವ ಗ್ರೀಕ್ ಪದವಾಗಿದೆ (5:5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). “ಜಯಿಸಿದರು” ಎಂಬ ಪದದ ಅರ್ಥವು “ಅದರ ಮೇಲೆ ಅವರು ವಿಜಯಿಯಾಗಿದ್ದರು” ಎಂದಾಗಿದ್ದರೆ, **ಯಜ್ಞದ ಕುರಿಯಾದಾತನ ರಕ್ತ** ಎಂಬುದು “ದೇವರ ಕುರಿಮರಿಯ ವಿಮೋಚನಾತ್ಮಕ ಯಜ್ಞಕ್ಕಾಗಿ ಬಳಸುವ ಶೀಘ್ರಲಿಪಿಯಾಗಿರುತ್ತದೆ.”[42]

ಮೀಕಾಯೇಲನು ಒಬ್ಬ ಶ್ರೇಷ್ಠ ಯುದ್ಧವೀರನಾಗಿದ್ದ ಕಾರಣದಿಂದ ಜಯವನ್ನು

ಗಳಿಸಲಾಯಿತೆಂದು ವಾಕ್ಯಭಾಗವು ತಿಳಿಸುವದಿಲ್ಲ. ಕ್ರೈಸ್ತರು ತಮ್ಮ ಸ್ವಂತ ಶಕ್ತಿ ಹಾಗೂ ಪರಾಕ್ರಮದಿಂದ "ಜಯಿಸಿದರು" ಎಂಬುದಾಗಿ ಅದು ಕಲಿಸುವದಿಲ್ಲ.

> ಅವರ ಸಂಖ್ಯೆಯು ವೈರಿ ಪಡೆಗಿಂತ ಅತ್ಯಧಿಕವಾಗಿತ್ತೆಂಬ ಕಾರಣಕ್ಕೆ ಗೆಲ್ಲಲಿಲ್ಲ. ಅವರು ಅನೇಕರೊಳಗೆ ಕೆಲವರೇ ಆಗಿದ್ದರು ... ದೇವಜನರು ಅವರ ಸಂಪತ್ತು ಅಥವಾ ಸಾಮಾಜದಲ್ಲಿ ಅವರಿಗಿದ್ದ ಉನ್ನತ ಸ್ಥಾನದ ನಿಮಿತ್ತವಾಗಲಿ ಜಯಿಸಲಿಲ್ಲ. ಅವರಲ್ಲಿ ಈ ಯಾವ ಸಂಗತಿಗಳೂ ಇರಲಿಲ್ಲ. ಅವರು ತಮಗಿರುವ ಪ್ರಭಾವವನ್ನು ಬಳಸಿ ಗೆಲ್ಲಲಿಲ್ಲ ... ಅವರಿಗೆ ತಮ್ಮನ್ನು ಕತ್ತಲು ಕೋಣೆಗಳಿಂದ ಅಥವಾ ಸೆರೆಮನೆಗೆ ಆಗಲಿ ಹೋಗದಂತೆ ದೂರವಿಟ್ಟುಕೊಳ್ಳಲು, ತಮ್ಮನ್ನು ಹಿಂಸೆ ಹಾಗೂ ಮರಣಗಳಿಂದಾಗಲಿ ರಕ್ಷಿಸಿಕೊಳ್ಳಲು ಸಹ ಸಾಕಷ್ಟು [ಪ್ರಭಾವ] ಇರಲಿಲ್ಲ.[43]

ಬದಲಾಗಿ, ಯಜದ ಪ್ರಾಥಮಿಕ ಮೂಲವು "ಯಜ್ಞದ ಕುರಿಯಾದಾತನ ರಕ್ತ" ಆಗಿತ್ತು. ಕಲ್ವಾರಿಯು ಸೈತಾನನಿಗೆ ಮರಣದ ಹೊಡೆತವಾಗಿರಬಹುದಾಗಿದೆ, ಆದರೆ ಅದು ನಮಗೆ ಜೀವದ-ಹರಿವು ಆಗಿದೆ.[44] ಇತ್ತೀಚಿನ ವರ್ಷಗಳಲ್ಲಿ, ಕೆಲವು ಪಂಗಡಗಳು ತಮ್ಮ ಹಾಡಿನ ಪುಸ್ತಕಗಳಿಂದ "ರಕ್ತ" ಎಂಬ ಪದವನ್ನು "ಆಧುನಿಕ ಮಾನವನಿಗೆ ಹೇವರಿಕೆ ತರಿಸುವ" ಸಂಗತಿಯೆಂಬದಾಗಿರುತ್ತದೆಂದು ತೆಗೆದು ಹಾಕಿರುತ್ತವೆ. ಹಾಗಿದ್ದರೂ, ರಕ್ಷಣೆಯು ಯೇಸುವಿನ ರಕ್ತದಿಂದ ಬರುತ್ತದೆಂಬುದಾಗಿ ಈಗಲೂ ಬೈಬಲ್ ಕಲಿಸುವದಾಗಿದೆ.

> ನಿತ್ಯಾತ್ಮನಿಂದ ತನ್ನನ್ನು ತಾನೇ ನಿರ್ದೋಷಿಯನ್ನಾಗಿ ದೇವರಿಗೆ ಸಮರ್ಪಿಸಿಕೊಂಡ ಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ನಿರ್ಜೀವಕರ್ಮಗಳಿಂದ ಬಿಡಿಸಿ ನಾವು ಜೀವವುಳ್ಳ ದೇವರನ್ನು ಆರಾಧಿಸುವವರಾಗುವಂತೆ ನಮ್ಮ ಮನಸ್ಸನ್ನು ಶುದ್ಧೀಕರಿಸುವದಲ್ಲವೇ (ಇಬ್ರಿಯ 9:14).
>
> ನಿಮ್ಮ ಹಿರಿಯರು ಕಲಿಸಿಕೊಟ್ಟ ವ್ಯರ್ಥವಾದ ನಡವಳಿಕೆಯಿಂದ ನಿಮಗೆ ಬಿಡುಗಡೆಯಾದದ್ದು ಬೆಳ್ಳಿಬಂಗಾರ ಮೊದಲಾದ ನಶಿಸಿಹೋಗುವ ವಸ್ತುಗಳಿಂದಲ್ಲ, ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ ಎಂದು ಬಲ್ಲಿರಲ್ಲವೇ (1 ಪೇತ್ರ 1:18, 19).
>
> ನಮ್ಮನ್ನು ಪ್ರೀತಿಸುವವನೂ ತನ್ನ ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸಿದವನೂ ... (ಪ್ರಕಟನೆ 1:5).

ನಾವು ಕರ್ತನಲ್ಲಿ ವಿಶ್ವಾಸವಿಡುವಾಗ ಮತ್ತು ಆತನ ಹೆಸರಿನಲ್ಲಿ ದೀಕ್ಷಾಸ್ನಾನ (ಮುಳುಗಿಸಲ್ಪಟ್ಟು) ಮಾಡಿಸಿಕೊಂಡಾಗ, ಯೇಸುವಿನ ರಕ್ತವು ನಮ್ಮ ಪಾಪಗಳನ್ನು ತೊಳೆದು ನಿವಾರಿಸುತ್ತದೆ (ಅಪೊಸ್ತಲರ ಕೃತ್ಯಗಳು 22:16; ಪ್ರಕಟನೆ 7:14). ಬಳಿಕ, ನಾವು ಆತನ ವಾಕ್ಯದ ಬೆಳಕಿನಲ್ಲಿ ನಡೆಯುವದನ್ನು ಮುಂದುವರೆಸಿದ ಹಾಗೆ, ರಕ್ತವು ನಿರಂತರವಾಗಿ ನಮ್ಮನ್ನು ಶುದ್ಧಮಾಡುವದಾಗಿದೆ (1 ಯೋಹಾನ 1:7).

11ನೇ ವಚನವು ಜಯಕ್ಕೆ ಕಾರಣವಾದ ಒಂದು *ಎರಡನೆಯ* ಮೂಲವನ್ನು ಸಹ ಸೂಚ್ಯಾರ್ಥವಾಗಿ ತಿಳಿಸುತ್ತದೆ: ವಿಧೇಯತೆಯ ಮೂಲಕ ಮನುಷ್ಯನು ಶಿಲುಬೆಯನ್ನು ತನ್ನದಾಗಿಸಿಕೊಳ್ಳುವದು (ನೋಡಿರಿ 12:17). ಯೇಸುವು ಎಲ್ಲರಿಗಾಗಿಯೂ ಮರಣಿಸಿದನು (2 ಕೊರಿಂಥ 5:15; ತೀತನಿಗೆ 2:11), ಆದರೆ ಎಲ್ಲರೂ ರಕ್ಷಿಸಲ್ಪಡುವವರಲ್ಲ (ಮತ್ತಾಯ 7:13, 14). ಕರ್ತನಿಂದ ಲಭ್ಯಗೊಳಿಸಲ್ಪಟ್ಟಿರುವ ರಕ್ಷಣೆಯ ಪ್ರಯೋಜನವನ್ನು ತೆಗೆದುಕೊಳ್ಳುವದೋ

ಬೇಡವೋ ಎಂದು ನಿರ್ಧರಿಸುವದು ಆಯಾ ವ್ಯಕ್ತಿಗೆ ಬಿಟ್ಟ ವಿಚಾರವಾಗಿದೆ.

11ನೇ ವಚನದಲ್ಲಿ ನಂಬಿಗಸ್ತ ಕ್ರೈಸ್ತರ ಜೀವಿತಗಳ ಬಗ್ಗೆ ಎರಡು ಅಂಶಗಳು ಪ್ರಸ್ತಾಪಿಸಲ್ಪಟ್ಟಿರುತ್ತವೆ: ಮೊದಲನೆಯದಾಗಿ ಅವರು ಕ್ರಿಸ್ತನೆಡೆಗೆ ಹೊಂದಿದ್ದ ಸಮರ್ಪಣೆಯಲ್ಲಿ ಅವರು ನಂಬಿಗಸ್ತರಾಗಿದ್ದರು: ಅವರು ಸೈತಾನನನ್ನು **ತಮ್ಮ** [ಸಾಕ್ಷಿಯ] **ವಾಕ್ಯದ ಬಲದಿಂದಲೂ** ಜಯಿಸಿದರು. ಅವರು ಯೇಸುವನ್ನು ಸಾರುವದರಲ್ಲಿ ನಂಬಿಗಸ್ತರಾಗಿದ್ದರು. "ಸೈತಾನನು ದ್ವೇಷಿಸುವಂಥ ಸಕಲ ಕಥೆಗಳಲ್ಲಿಯೇ, ಆತನು ಸುವಾರ್ತೆಯನ್ನು [ಅತ್ಯಧಿಕವಾಗಿ] ದ್ವೇಷ ಮಾಡುತ್ತಾನೆ. ಆತನಿಗೆ ರೋಷವನ್ನೆಬ್ಬಿಸುವ ಎಲ್ಲಾ ವಿಷಯಗಳಲ್ಲಿ, ಯೇಸುವಿನ ಕುರಿತ ಸಂಭಾಷಣೆಯು ಆತನಿಗೆ ಇನ್ನೂ ಅಧಿಕವಾಗಿ ರೋಷವನ್ನೆಬ್ಬಿಸುತ್ತದೆ."[45] ಅವರು ಯೇಸುವಿಗೋಸ್ಕರ ಜೀವಿಸುವದರಲ್ಲಿ ಸಹ ನಂಬಿಗಸ್ತರಾಗಿದ್ದರು. ಅವರು "ಘಟಸರ್ಪದಿಂದ ರೂಪಿಸಲ್ಪಡುವಂಥ ಒಂದು ಲೋಕದಲ್ಲಿ ಕ್ರಿಸ್ತನ ಸಾರೂಪ್ಯದ ಮೂಲಕವಾಗಿ ರೂಪಿಸಲ್ಪಡುವ"[46] ಜೀವಿತಗಳನ್ನು ನಡಿಸುವದಕ್ಕೆ ಪ್ರಯಾಸ ಪಟ್ಟರು.

ಎರಡನೆಯದಾಗಿ, ಅವರ ಜೀವಿತಗಳಿಗೆ ಬೆದರಿಕೆಯಿದ್ದಾಗ್ಯೂ ಅವರು ನಂಬಿಗಸ್ತರಾಗಿದ್ದರು: **ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು** ಇದ್ದರು. ಯೇಸು ತನ್ನ ಶಿಷ್ಯರಿಗೆ ಹೀಗೆ ಹೇಳಿದ್ದನು, "ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿಯೂ ಸುವಾರ್ತೆಯ ನಿಮಿತ್ತವಾಗಿಯೂ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು" (ಮಾರ್ಕ 8:35; ನೋಡಿರಿ ಯೋಹಾನ 12:24, 25). ಯೋಹಾನನ ಮತ್ತು ಕ್ರಿಸ್ತನ ಮಾತುಗಳ ಭಾವನೆಗೆ ಪೌಲನು ಮಾದರಿಯಾಗಿರುತ್ತಾನೆ, ಆತನು ತನ್ನ ಮಿತ್ರರಿಗೆ ಹೀಗೆ ಹೇಳಿದನು,

> ... ಪ್ರಾಣವನ್ನು ಉಳಿಸಿಕೊಳ್ಳುವದೇ ವಿಶೇಷವೆಂದು ನಾನು ಎಣಿಸುವದಿಲ್ಲ. ದೇವರ ಕೃಪೆಯ ವಿಷಯವಾದ ಸುವಾರ್ತೆಯನ್ನು ಆಸಕ್ತಿಯಿಂದ ಪ್ರಕಟಿಸಬೇಕೆಂಬದಾಗಿ ... ನನ್ನ ಅಪೇಕ್ಷೆ (ಅಪೊಸ್ತಲರ ಕೃತ್ಯಗಳು 20:24)

> ... ನಾನು ಕರ್ತನಾದ ಯೇಸುವಿನ ಹೆಸರಿನ ನಿಮಿತ್ತವಾಗಿ ಯೆರೂಸಲೇಮಿನಲ್ಲಿ ಬೇಡೀಹಾಕಿಸಿಕೊಳ್ಳುವದಕ್ಕೆ ಮಾತ್ರವಲ್ಲದೆ ಸಾಯುವದಕ್ಕೂ ಸಿದ್ಧವಾಗಿದ್ದೇನೆ (ಅಪೊಸ್ತಲರ ಕೃತ್ಯಗಳು 21:13).

ಆದಿ ಕ್ರೈಸ್ತರ ನಂಬಿಗಸ್ತಿಕೆಯ ವಿಷಯದಲ್ಲಿ Clovis Chappellನು ಈ ಮಾತುಗಳನ್ನು ಹೇಳುತ್ತಾನೆ:

> ಅವರು ಜಯಕ್ಕಾಗಿ ಬೆಲೆಯನ್ನು ತೆತ್ತುವದಕ್ಕೆ ಮನಸ್ಸುಳ್ಳವರಾಗಿದ್ದ ಕಾರಣ ಅವರು ಜಯವನ್ನು ಗಳಿಸಿದರು. ಅವರು ಒಂದು ಚೌಕಾಶಿಯಿಂದ ಲಾಭ ಮಾಡಿಕೊಳ್ಳಲು ಪ್ರಯತ್ನಿಸದ ಕಾರಣ ಅವರು ಗೆದ್ದರು ಅವರು ಷರತ್ತುಗಳ ವಿಷಯದಲ್ಲಿ ವಾದವಿವಾದ ಮಾಡಲಿಲ್ಲ ... ಅವರು ಬೆಲೆಯ ಬಗ್ಗೆ ಕೊಸರಾಟ ನಡಿಸಲಿಲ್ಲ ...ಅವರು ಜಯವನ್ನು ಅತ್ಯಂಥ ಸರ್ವೋಚ್ಚವಾಗಿ ಎಣಿಸಿದವರಾಗಿ ಅದನ್ನು ಪಡೆದುಕೊಳ್ಳಲು ಏನೂ ಬೇಕಾದರೂ ಮತ್ತು ಎಲ್ಲವನ್ನೂ, ಅವನ ಪ್ರಾಣಗಳನ್ನು ಸಹ ಕೊಡುವದಕ್ಕೆ ಮನಸ್ಸುಳ್ಳವರಾಗಿದ್ದರಿಂದ ಜಯಿಸಿದರು.[47]

ಇಲ್ಲಿ ಆಲೋಚಿಸಬೇಕಾದದ್ದೇನೆಂದರೆ ವಾಕ್ಯಭಾಗವು "ದೇವಜನರು ರಕ್ತಸಾಕ್ಷಿಯಾಗಿ ಸಾಯುವದನ್ನು ಪ್ರೀತಿಸಿದರು ಎಂದು ಹೇಳಲಿಲ್ಲ. ಅದು ಅವರು 'ತಮ್ಮ ಪ್ರಾಣದ ಮೇಲಿನ

ಪ್ರೀತಿಯನ್ನು ತೊರೆದು' ಎಂದು ಹೇಳುತ್ತದೆ. ಅವರು ಮರಣವನ್ನು ಹೇಗೆ ಭಾವಿಸಿಕೊಂಡರು ಎಂಬುದರ ಕುರಿತ ಚರ್ಚೆಯು ಇದಲ್ಲ, ಅವರು ತಮ್ಮ ಪ್ರಾಣಗಳನ್ನು ಹೇಗೆ ಪರಿಗಣಿಸಿಕೊಂಡರು ಎಂಬುದೆ!"[48] ಕೆಲವರು ತಮ್ಮ ನಂಬಿಕೆಯ ನಿಮಿತ್ತ ಮರಣಿಸಿದರೆ, ಇನ್ನು ಕೆಲವರು ಮರಣಿಸಲಿಲ್ಲ, ಆದರೆ ಎಲ್ಲರಲ್ಲಿಯೂ "ರಕ್ತಸಾಕ್ಷಿಯ ಆತ್ಮನನ್ನು"[49] ಹೊಂದಿದ್ದರು: ಅವರು ತಾವು ಏನನ್ನು ನಂಬಿದ್ದರೋ ಅದಕ್ಕಾಗಿ ಮರಣಿಸುವದಕ್ಕೆ *ಮನಸ್ಸುಳ್ಳವರಾಗಿದ್ದರು.* ಅವರು ತಮ್ಮ ಆದ್ಯತೆಗಳನ್ನು ನಿರ್ಧರಿಸಿಕೊಂಡಿದ್ದರಾದ್ದರಿಂದ, ಸೈತಾನನು ಅವರನ್ನು ಅಡಗಿಸಿ ಮೇಲುಗೈ ಸಾಧಿಸಿ ಬಿಡುವನೆಂಬುದು ಅಧಿಕವಾಗಿ ತೋರಿ ಬರುತ್ತಿದ್ದ ಆ ಕ್ಷಣವೇ - ಆತನು ಅವರನ್ನು ಕೊಂದ ವೇಳೆ - ಆತನ ಸೋಲು ಹಾಗೂ ಅವರ ಜಯದ ಕ್ಷಣವಾಗಿತ್ತು.[50]

**ವಚನ 12.** ಶಬ್ದವು ಈ ವಿಧವಾಗಿ ಹೇಳಿತು, **ಪರಲೋಕವೇ, ಅದರಲ್ಲಿ ವಾಸಮಾಡುವವರೇ, ಹರ್ಷಗೊಳ್ಳಿರಿ.** ಈ ಮಾತುಗಳನ್ನು ಬಹುಶಃ ಈ ಭೂಮಿಯನ್ನು ತೊರೆದು ಹೋಗಿದ್ದ ಕ್ರೈಸ್ತರಿಗೆ ಹೇಳಿರಬಹುದಾಗಿದೆ. ಅವರು ಹರ್ಷಿಸಬಲ್ಲವರಾಗಿದ್ದರು ಯಾಕೆಂದರೆ ಅವರು ರಕ್ತದ ಮೂಲಕ ರಕ್ಷಿಸಲ್ಪಟ್ಟಿದ್ದರು ಮತ್ತು ಈಗ ಅವರು ಘಟಸರ್ಪದಿಂದ ದೂರವಾಗಿ ಸುರಕ್ಷಿತವಾಗಿದ್ದರು. ಪ್ರಕಟನೆ ಪುಸ್ತಕದೊಳಗೆ ಈ ಸಂದರ್ಭದಲ್ಲಿ ಮಾತ್ರವೇ **ಪರಲೋಕಗಳೇ** (οὐρανοί, *ouranoi*) ಎಂದು ಬಹುವಚನವು ಬಳಸಲ್ಪಟ್ಟಿರುತ್ತದೆ. ಯೆಹೂದ್ಯರು "ಪರಲೋಕ"ವನ್ನು ಬಹುವಚನ ರೂಪದ ಪದದಿಂದ ಕರೆಯುತ್ತಿದ್ದರು; ಇದು ಹೊಸ ಒಡಂಬಡಿಕೆಯಲ್ಲಿ ಬೇರೊಂದು ಕಡೆಯಲ್ಲಿ, ವಿಶೇಷವಾಗಿ ಮತ್ತಾಯನ ಸುವಾರ್ತೆಯಲ್ಲಿ ಬಳಸಲ್ಪಟ್ಟಿದೆ, ಮತ್ತು ಅದು ಸಾಮಾನ್ಯವಾಗಿ ಒಂದು ಏಕವಚನದ ಪದವಾಗಿ ಅನುವಾದಿಸಲ್ಪಡುತ್ತದೆ.

12ನೇ ವಚನದ ಅಂತ್ಯದಲ್ಲಿ ಜಯದ ಗೀತೆಯು ಮುಂದುವರೆಯುತ್ತದೆ, ಆದರೆ ಅದು ಸೈತಾನನ ಸೋಲಿನ ಒಂದು ನೋವುಕರವಾದ ಫಲಿತದ ಕುರಿತು ಮಾತಾಡುತ್ತದೆ. ಆತನ ಸೋಲು ಹರ್ಷಗೊಳ್ಳುವದಕ್ಕೆ ಕಾರಣವು ಮಾತ್ರವೇ ಆಗಿರಲಿಲ್ಲ; ಅದು ಶೋಕಾಚರಣೆ ಮಾಡುವದಕ್ಕೆ ಒಂದು ಉದ್ದೇಶವಾಗಿ ಸಹ ಸಾಭಿತುಪಡಿಸಲ್ಪಟ್ಟಿತು. ಘಟಸರ್ಪನು ಸೋಲಿಸಲ್ಪಟ್ಟಿದ್ದನು, ಆದರೆ ನಾಶಗೊಳಿಸಲ್ಪಟ್ಟಿರಲಿಲ್ಲ, ಮತ್ತು ಸೋಲಿಸಲ್ಪಟ್ಟಿರುವ ಒಂದು ಘಟಸರ್ಪವು ಬೇಸರದಲ್ಲಿರುವ ಘಟಸರ್ಪವಾಗಿದೆ. ಆತನ ಕೋಪವು ಅಧಿಕಗೊಳ್ಳುತ್ತಲೇ ಹೋಗಿ ಕೊನೆಗೆ ಆತನು ಸ್ಫೋಟಗೊಳ್ಳುವ ಹಂತದಲ್ಲಿದ್ದನು. ಆತನು ಯಾರಾದರ ಮೇಲೆಯಾದರೂ - ಯಾರು ಬೇಕಾದರೂ ಇರಬಹುದು - ತನ್ನ ರೌದ್ರವನ್ನು ಬರಿದು ಮಾಡುವದಕ್ಕೆ ಸಿದ್ಧನಾಗಿದ್ದನು.

ಆದದರಿಂದ ಆ ಶಬ್ದವು ಹೀಗೆ ಎಚ್ಚರಿಕೆಯನ್ನು ನೀಡುತ್ತದೆ, **ಭೂಮಿಯೇ, ಸಮುದ್ರವೇ, ನಿಮ್ಮ ದುರ್ಗತಿಯನ್ನು ಏನು ಹೇಳಲಿ; ಸೈತಾನನು ತನಗಿರುವ ಕಾಲವು ಸ್ವಲ್ಪವೆಂದು ತಿಳಿದು ಮಹಾ ರೌದ್ರವುಳ್ಳವನಾಗಿ ನಿಮ್ಮ ಕಡೆಗೆ ಇಳಿದುಬಂದಿದ್ದಾನೆ**. "ಭೂಮಿಯೇ, ಸಮುದ್ರವೇ" ಎಂಬುದು ಸೈತಾನನ ಪ್ರಭಾವದ ವ್ಯಾಪ್ತಿಯನ್ನು ಸೂಚಿಸುತ್ತದೆ. ಸನ್ನಿವೇಶದಲ್ಲಿ, ಭೂಮಿ ಎಂಬುದು ನಾವು ವಾಸಿಸುವ ಗ್ರಹವಾಗಿರುತ್ತದೆ (ನೋಡಿರಿ 12:16). "'ಭೂಮಿ, ಸಮುದ್ರ'ದಲ್ಲಿ ಜೀವಿಸುವವರಿಗೆ ಚಿಂತೆಗೀಡು ಮಾಡುವ ಕಾರಣವಿರುತ್ತದೆ ಯಾಕೆಂದರೆ ಸೈತಾನನು ಅವರನ್ನು ತನ್ನ ಉದ್ದೇಶಗನ್ನು ಸಾಧಿಸಿಕೊಳ್ಳಲು ಬಳಸುವನು ಮತ್ತು ಅವರ ಹಿತಾಸಕ್ತಿಯ ಕುರಿತು ಆತನಿಗೆ ಸ್ವಲ್ಪವೂ ಕಾಳಜಿಯಿರುವದಿಲ್ಲ."[51]

ಘಟಸರ್ಪದ **ಮಹಾ ರೌದ್ರಕ್ಕೆ** ಒಂದು ಕಾರಣವೆಂದರೆ ಆತನಿಗೆ **ತನಗಿರುವ ಕಾಲವು ಸ್ವಲ್ಪವೆಂದು ತಿಳಿದದೆ**. "ಆತನ ದಿನಗಳು ಲೆಕ್ಕಿಸಲ್ಪಟ್ಟಿವೆ."[52] "ತಮಗಿರುವ ಕಾಲವು ಸ್ವಲ್ಪ"

ಎಂಬ ಪದಗುಚ್ಛವು ಬಹುಶಃ ಕ್ರೈಸ್ತರಿಗೆ ಪ್ರೋತ್ಸಾಹವನ್ನು ನೀಡುವದಕ್ಕಾಗಿ ಬಳಸಲ್ಪಟ್ಟಿರಬಹುದು: ಸೈತಾನನು ಅವರಿಗೆ "ಸ್ವಲ್ಪ ಕಾಲ" ಮಾತ್ರವೇ ಕಿರುಕುಳ ಕೊಡುವದಕ್ಕೆ ಸಾಧ್ಯವಿತ್ತು. ಆತನಿಗೆ ಮುಂದೆ ತನಗಾಗಿ ಕಾದಿರುವ ಅಂತ್ಯಾವಸ್ಥೆಯ ಬಗ್ಗೆ ಗೊತ್ತಿತ್ತು (20:10). ಈ ನಡುವೆ, ಆತನು ತನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ಕರ್ತನ ಹಿಂಬಾಲಕರಿಗೆ ನೋವು ಹಾಗೂ ಬಾಧೆಯನ್ನುಂಟು ಮಾಡಬೇಕೆಂದು ದೃಢನಿರ್ಧಾರ ಮಾಡಿಕೊಂಡಿದ್ದನು.

ಗಾಯಗೊಂಡಿರುವ ಪ್ರಾಣಿಗಳ ಸುತ್ತಮುತ್ತ ಇರುವ ವೇಳೆ ಒಬ್ಬನು ಜಾಗರೂಕತೆಯಿಂದಿರಬೇಕು ಯಾಕೆಂದರೆ ಅವುಗಳು ಯಾವದರ ಮೇಲೆಯಾಗಲಿ ಅಥವಾ ಯಾರ ಮೇಲಾಗಲಿ ಆಕ್ರಮಣ ಮಾಡುವವು. 12ನೇ ಅಧ್ಯಾಯದ ಅಂತ್ಯದಲ್ಲಿ, ಘಟಸರ್ಪವು ಗಾಯಗೊಂಡಿರುವ ಮೃಗವಾಗಿರುತ್ತದೆ, ಮತ್ತು ಇನ್ನೂ ಅಧಿಕ ಅಪಾಯಕಾರಿಯಾಗಿ ಮಾರ್ಪಟ್ಟಿರುತ್ತದೆ. ಹೀಗಿರುವದರಿಂದ Leon Morrisನು ಹೀಗೆ ಬರೆಯುತ್ತಾನೆ, "ಹಿಂಸೆಗೊಳಗಾಗಿರುವ ನೀತಿವಂತರಿಗೆ ತೊಂದರೆಗಳು ಸೈತಾನನು ಬಹಳ ಬಲಿಷ್ಠನಾಗಿದ್ದಾನೆಂಬ ಕಾರಣಕ್ಕಾಗಿ ಅಲ್ಲ, ಆದರೆ ಆತನು ಸೋಲಿಸಲ್ಪಟ್ಟಿದ್ದಾನೆ ಎಂಬ ಕಾರಣಕ್ಕಾಗಿಯೇ ಉದ್ಭವವಾಗುತ್ತವೆ."[53] ದೇವರ ಜನರ ವಿಷಯವಾಗಿ ಆತನಿಗಿರುವ ದುರುದ್ದೇಶತನವು "ಗೆದ್ದುಕೊಳ್ಳಲ್ಪಟ್ಟ ವೈರಿಯಲ್ಲಾಗುವ ಅಂತಿಮ ತಳಮಳಗಳಾಗಿರುತ್ತವೆ."[54] ಸೈತಾನನು ಏಕೆ ಅಷ್ಟೊಂದು ಕೋಪಗೊಂಡಿದ್ದಾನೆ ಮತ್ತು ಕ್ರೈಸ್ತರನ್ನು ಹೇಗಾದರೂ ನಾಶಗೊಳಿಸಲೇ ಬೇಕೆಂದು ಹಠ ಹಿಡಿದಿದ್ದಾನೆಂಬುದನ್ನು ಈ ಎಲ್ಲಾ ಕಾರ್ಯಗಳು ಕಾರಣವಾಗಿರುತ್ತವೆ.

## ಘಟಸರ್ಪನು ಸ್ತ್ರೀಯೊಂದಿಗೆ ಯುದ್ಧ ಮಾಡುವನು (12:13-17)

**13ಘಟಸರ್ಪನು ತಾನು ದೊಬ್ಬಲ್ಪಟ್ಟು ಭೂಮಿಗೆ ಬಿದ್ದಿರುವದನ್ನು ಕಂಡು ಗಂಡು ಮಗುವನ್ನು ಹೆತ್ತ ಸ್ತ್ರೀಯನ್ನು ಹಿಂಸಿಸುವದಕ್ಕೆ ಅಟ್ಟಿಕೊಂಡು ಹೋದನು. 14ಆ ಸ್ತ್ರೀಯು ಅರಣ್ಯದಲ್ಲಿದ್ದ ತನ್ನ ಸ್ಥಳಕ್ಕೆ ಹಾರಿಹೋಗುವದಕ್ಕಾಗಿ ಆಕೆಗೆ ದೊಡ್ಡ ಗರುಡಪಕ್ಷಿಯ ಎರಡು ರೆಕ್ಕೆಗಳು ಕೊಡಲ್ಪಟ್ಟವು. ಅಲ್ಲಿ ಒಂದು ಕಾಲ, ಎರಡು ಕಾಲ, ಅರ್ಧಕಾಲ ಸರ್ಪನ ಮುಖಕ್ಕೆ ಮರೆಯಾಗಿ ಪೋಷಣೆ ಹೊಂದುತ್ತಾಳೆ. 15ಆ ಸರ್ಪನು ಸ್ತ್ರೀಯನ್ನು ಬಡಿಸಿಕೊಂಡು ಹೋಗಬೇಕೆಂದು ಆಕೆಯ ಹಿಂದೆ ತನ್ನ ಬಾಯೊಳಗಿಂದ ನೀರನ್ನು ನದಿಯಂತೆ ಬಿಟ್ಟನು. 16ಆದರೆ ಭೂಮಿಯು ಆ ಸ್ತ್ರೀಯ ಸಹಾಯಕ್ಕೆ ಬಂದು ಬಾಯಿ ತೆರೆದು ಘಟಸರ್ಪನು ತನ್ನ ಬಾಯೊಳಗಿಂದ ಬಿಟ್ಟ ನದಿಯನ್ನು ಕುಡಿದುಬಿಟ್ಟಿತು. 17ಆಗ ಘಟಸರ್ಪನು ಸ್ತ್ರೀಯ ಮೇಲೆ ಕೋಪಿಸಿಕೊಂಡು ಆಕೆಯ ಸಂತಾನದವರಲ್ಲಿ ಉಳಿದವರ ಮೇಲೆ ಅಂದರೆ ದೇವರ ಆಜ್ಞೆಗಳನ್ನು ಕೈಕೊಂಡು ನಡೆದು ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವವರ ಮೇಲೆ ಯುದ್ಧ ಮಾಡುವದಕ್ಕೆ ಹೊರಟು ...**

ಒಂದು ಯುದ್ಧವು ನಡೆಯುತ್ತಿದೆ ಎಂಬುದನ್ನು ಊಹಿಸಿಕೊಳ್ಳಿರಿ. ಗುಂಡುಗಳು ಹಾರಾಡುತ್ತಿವೆ, ಸಿಡಿಗುಂಟುಗಳು ಸ್ಫೋಟಗೊಳ್ಳುತ್ತಿವೆ, ಮತ್ತು ಗಾಳಿಯೆಲ್ಲಾ ಮರಣದ ವಾಸನೆಯಿಂದ ತುಂಬಿಕೊಂಡಿರುತ್ತದೆ. ಏಕಾಏಕಿ, ಆ ದೃಶ್ಯದೊಳಗೆ ಒಬ್ಬ ನಾಗಾರಿಕ ಉಡುಪನ್ನು ಧರಿಸಿಕೊಂಡ ವ್ಯಕ್ತಿಯು ನಡೆದು ಬಂದು ಒಂದು ಸುದ್ದಿ ಪತ್ರಿಕೆಯನ್ನು ಓದುವದರಲ್ಲಿ ತಲ್ಲೀನವಾಗುತ್ತಾನೆ. ಆತನು ತನ್ನ ಸುತ್ತಲು ಏನು ಸಂಭವಿಸುತ್ತಿದೆ ಎಂಬ ಪ್ರಜ್ಞೆಯೇ ಇಲ್ಲದವನಾಗಿ ರಣರಂಗದ ಸುತ್ತಲೆಲ್ಲಾ ಅಡ್ಡಾಡುತ್ತಿರುತ್ತಾನೆ. ಆತನು ಏನು

ನಡೆಯುತ್ತಿದೆ ಎಂಬ ಅರಿವು ಇಲ್ಲದಿದ್ದರೆ, ಆತನು ನಾಶವಾಗುವದು ನಿಶ್ಚಿತ.

ಅನೇಕ ಜನರು ಜೀವನದುದ್ದಕ್ಕೂ ರಭಸವಾಗಿ ಅತ್ತಿಂದಿತ್ತ ತಿರುಗಾಡುತ್ತಿದ್ದಾರೆ, ತಾವು ಒಂದು ಭಯಂಕರವಾದ ಕದನದ ಮಧ್ಯದಲ್ಲಿದ್ದಾರೆಂಬದನ್ನು ಅರಿಯದೆ ಇದ್ದಾರೆ - ಅದು ಕೇವಲ "ದೇಹವನ್ನು ಕೊಲ್ಲುವ" ಒಂದು ಕದನಕ್ಕಿಂತಲೂ ಎಷ್ಟೋ ದೊಡ್ಡದಾದ ಪರಿಣಾಮಗಳನ್ನು ಬೀರುವಂಥ ಒಂದು ಯುದ್ಧ (ಮತ್ತಾಯ 10:28). ಪೌಲನು ತಿಮೊಥೆಯನಿಗೆ "ಕ್ರಿಸ್ತನಂಬಿಕೆಯುಳ್ಳವರು ಮಾಡತಕ್ಕ ಶ್ರೇಷ್ಠ ಹೋರಾಟವನ್ನು ಮಾಡು" (1 ತಿಮೊಥೆ 6:12) ಮತ್ತು "ಕ್ರಿಸ್ತ ಯೇಸುವಿನ ಒಳ್ಳೇ ಸೈನಿಕನಂತೆ ... ಶ್ರಮೆಯನ್ನನುಭವಿಸು" (2 ತಿಮೊಥೆ 2:3) ಎಂದು ಬುದ್ಧಿವಾದ ಹೇಳುತ್ತಾನೆ. ಆತನು ಎಫೆಸದವರಿಗೆ ಹೀಗೆ ಹೇಳಿದನು, "ನಾವು ಹೋರಾಡುವದು ಮನುಷ್ಯ ಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಿಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ" (ಎಫೆಸ 6:12).

ಪ್ರಕಟನೆ ಪುಸ್ತಕವು ಕ್ರೈಸ್ತರು ಮಾಡುತ್ತಿರುವ ಯುದ್ಧದ ಕುರಿತಾಗಿ 12:13–17ರಲ್ಲಿ ಹೇಳುತ್ತದೆ: "ಆಗ ಘಟಸರ್ಪನು ... ಕೋಪಿಸಿಕೊಂಡು ಆಕೆಯ ಸಂತಾನದವರಲ್ಲಿ ಉಳಿದವರ ಮೇಲೆ ಅಂದರೆ ದೇವರ ಆಜ್ಞೆಗಳನ್ನು ಕೈಕೊಂಡು ನಡೆದು ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವವರ ಮೇಲೆ *ಯುದ್ಧ ಮಾಡುವದಕ್ಕೆ ಹೊರಟು"* (ವ. 17; ಒತ್ತಿ ಹೇಳಿದ್ದು ನನ್ನದು).

**ವಚನ 13.** ಈ ವಾಕ್ಯಭಾಗವು ಸೈತಾನನು ಎಂದಿಗೂ ಗೆಲ್ಲುವದಕ್ಕೆ ಸಾಧ್ಯವಿಲ್ಲದ ಯುದ್ಧದೊಂದಿಗೆ ಆರಂಭಗೊಳ್ಳುತ್ತದೆ. **ಘಟಸರ್ಪನು ತಾನು ದೊಬ್ಬಲ್ಪಟ್ಟು ಭೂಮಿಗೆ ಬಿದ್ದಿರುವದನ್ನು ಕಂಡು ಗಂಡು ಮಗುವನ್ನು ಹೆತ್ತ ಸ್ತ್ರೀಯನ್ನು ಹಿಂಸಿಸುವದಕ್ಕೆ ಅಟ್ಟಿಸಿಕೊಂಡು ಹೋದನು.** ಸ್ತ್ರೀಯು ಹಳೆಯ ಹಾಗೂ ಹೊಸ ಎರಡೂ ಒಡಂಬಡಿಕೆಗಳಲ್ಲಿನ ದೇವರ ಜನರನ್ನು ಪ್ರತಿನಿಧಿಸುತ್ತಾಳೆ - ಎರಡೂ ಒಡಂಬಡಿಕೆಗಳ ಅಡಿಯಲ್ಲಿರುವ ದೇವರ ಇಸ್ರಾಯೇಲ್ (ವ. 2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). 12ನೇ ಅಧ್ಯಾಯದ ಮೊದಲನೆಯ ಭಾಗದಲ್ಲಿ, ಸ್ತ್ರೀಯು ಶಾರೀರಿಕ ಇಸ್ರಾಯೇಲ್ ಆಗಿದ್ದಾಳೆ. ಅಧ್ಯಾಯದ ಕಡೆಯ ಭಾಗದಲ್ಲಿ, ಸ್ತ್ರೀಯು ಆತ್ಮೀಕ ಇಸ್ರಾಯೇಲ್ ಆಗಿದ್ದಾಳೆ - ಅಂದರೆ ಸಭೆ ಆಗಿದ್ದಾಳೆ. ಹೀಗಿರುವದರಿಂದ 13ನೇ ವಚನವು ಸಭೆಯನ್ನು ಸೈತಾನನು ಹಿಂಸೆಪಡಿಸುವದನ್ನು ದೃಢೀಕರಿಸುತ್ತದೆ, ಅದು ಯೋಹಾನನ ದಿನದಲ್ಲಿ ಆರಂಭಗೊಂಡಿದ್ದಂಥ ಆದರೆ ಇನ್ನಷ್ಟು ಘೋರವಾಗಿ ಮಾರ್ಪಡಲಿದ್ದ ಹಿಂಸೆಯಾಗಿತ್ತು (2:10, 13; 3:10; 6:9–11).

**ವಚನ 14.** ನಾವು ಘಟಸರ್ಪ ಹಾಗೂ ಸ್ತ್ರೀಯ ನಡುವಿನ ಗಾತ್ರ ಹಾಗೂ ಬಲದ ವಿಷಯದಲ್ಲಿ ನೆನಪಿಟ್ಟುಕೊಳ್ಳಬೇಕು (ವಚನಗಳು 1-4). ಆ ಸ್ತ್ರೀಗೆ ಆ ರಾಕ್ಷಸನ ದಾಳಿಯಿಂದ ತಪ್ಪಿಸಿಕೊಂಡು ಸ್ವಂತ ಶಕ್ತಿಯಲ್ಲಿ ಬದುಕುಳಿಯುವ ಯಾವ ನಿರೀಕ್ಷೆಯೂ ಆಗಿರಲಿಲ್ಲ. ಆಗ ದೇವರು ಮಧ್ಯಪ್ರವೇಶಿಸುತ್ತಾನೆ. 6ನೇ ವಚನವು ಹೇಳುವದೇನೆಂದರೆ, "ಆ ಸ್ತ್ರೀಯು ಅರಣ್ಯಕ್ಕೆ ಓಡಿಹೋದಳು; ಅಲ್ಲಿ ಆಕೆಗೆ ... ದೇವರು ಸ್ಥಳವನ್ನು ಸಿದ್ಧಮಾಡಿದ್ದನು." 14ನೇ ವಚನವು ಅದಕ್ಕೆ ಕೆಲವೊಂದು ವಿವರಗಳನ್ನು ಕೂಡಿಸುತ್ತದೆ: **ಆ ಸ್ತ್ರೀಯು ಅರಣ್ಯದಲ್ಲಿದ್ದ ತನ್ನ ಸ್ಥಳಕ್ಕೆ ಹಾರಿಹೋಗುವದಕ್ಕಾಗಿ ಆಕೆಗೆ ದೊಡ್ಡ ಗರುಡಪಕ್ಷಿಯ ಎರಡು ರೆಕ್ಕೆಗಳು ಕೊಡಲ್ಪಟ್ಟವು. ಅಲ್ಲಿ ಒಂದು ಕಾಲ, ಎರಡು ಕಾಲ, ಅರ್ಧಕಾಲ ಸರ್ಪನ ಮುಖಕ್ಕೆ ಮರೆಯಾಗಿ ಪೋಷಣೆ ಹೊಂದುತ್ತಾಳೆ.**

ಪ್ರಕಟನೆ ಪುಸ್ತಕದಲ್ಲಿರುವ ಬಹಳಷ್ಟು ಸಾಂಕೇತಿಕತೆಯ ರೀತಿಯಲ್ಲಿಯೇ, 14ನೇ ವಚನದ ಪರಿಭಾಷೆಯು ಇಸ್ರಾಯೇಲ್‌ವು ಐಗುಪ್ತದ ವಿಮೋಚಿಸಲ್ಪಟ್ಟು ಹೊರಗೆ ಕರೆತಂದ ಘಟನೆಯಿಂದ ಆಯ್ದುಕೊಳ್ಳಲ್ಪಟ್ಟಿದೆ. ಈ ಹೋಲಿಕೆಯನ್ನು ವಿಸ್ತರಿಸಿ ಹೇಳುವದಾದರೆ, ವಿಮೋಚನೆಯ ಯಾತ್ರೆಯ ವೇಳೆಯ ಫರೋಹನು ಅನಂತರದಲ್ಲಿ "ಘಟಸರ್ಪ"ಕ್ಕೆ ಹೋಲಿಕೆ ಮಾಡಲ್ಪಟ್ಟಿದ್ದಾನೆ (ಯೆಶಾಯ 51:9). ಆ ವಿಮೋಚನೆಯನ್ನು ಉಲ್ಲೇಖಿಸುತ್ತಾ, ದೇವರು ಇಸ್ರಾಯೇಲ್ಯರಿಗೆ ಹೀಗೆ ಹೇಳಿದನು, "ನಾನು ಐಗುಪ್ತ್ಯರಿಗೆ ಏನು ಮಾಡಿದೆನೋ, *ಹದ್ದು ತನ್ನ ಮರಿಗಳನ್ನು ರೆಕ್ಕೆಗಳ* ಮೇಲೆ ಹೊತ್ತುಕೊಳ್ಳುವಂತೆ ನಾನು ನಿಮ್ಮನ್ನು ಹೊತ್ತುಕೊಂಡು ನನ್ನ ಸ್ಥಳಕ್ಕೆ ಹೇಗೆ ಸೇರಿಸಿದೆನೋ ಇದನ್ನೆಲ್ಲಾ ನೀವು ನೋಡಿದ್ದೀರಷ್ಟೆ" (ವಿಮೋಚನಕಾಂಡ 19:4; ಒತ್ತಿ ಹೇಳಿದ್ದು ನನ್ನದು). ಹದ್ದಿನ ರೆಕ್ಕೆಗಳ ಚಿತ್ರಣವು ಯೆಶಾಯ 40:31ರಲ್ಲಿ ಒಂದು ಹೆಚ್ಚು ಸಾಮಾನ್ಯ ಅರ್ಥದಲ್ಲಿ ಬಳಸಲ್ಪಟ್ಟಿದೆ. ದೇವರು ತನ್ನ ಜನರನ್ನು "ಹದ್ದಿನಂತೆ ರೆಕ್ಕೆಗಳ ಮೇಲೆ" ಹೊತ್ತುಕೊಂಡ ವೇಳೆ, ಆತನು ಅವರನ್ನು ಅರಣ್ಯದೊಳಗೆ ಕರೆತಂದನು (ಕೀರ್ತನೆ 78:52) – ಅದೇ ರೀತಿಯಲ್ಲಯೇ ಸ್ತ್ರೀಯು ತನಗಾಗಿ ಸಿದ್ಧಪಡಿಸಿದ್ದ ಅರಣ್ಯದೊಳಗೆ ತಪ್ಪಿಸಿಕೊಂಡು ಬಂದಳು.

ಯೆಹೂದ್ಯರು ಅರಣ್ಯಗಳಲ್ಲಿ ಸುತ್ತಾಡಿದ್ದರ ಪರಿಚಯವಿರುವವರು **ಅರಣ್ಯ** ಎಂಬ ಪದವನ್ನು ಕೇಳಿದಾಗ ಅವರ ಮನಸ್ಸಗಳಲ್ಲಿ ನೆನಪುಗಳು ತುಂಬಿಕೊಂಡಿರಬಹುದಾಗಿದೆ. ವಿಮೋಚನಕಾಂಡಕ್ಕೆ ಸಂಬಂಧ ಹೊಂದಿರುವ ಅರಣ್ಯದ ಒಂದು ಪುನಾರವಲೋಕನ ಇಲ್ಲಿರುತ್ತದೆ: (1) ಅದು ವಾಸಿಸುವದಕ್ಕೆ ಒಂದು ಸುಲಭವಾದ ಸ್ಥಳವಾಗಿರಲಿಲ್ಲ. ಅದು ಒಣಗಿದ ಮೂಳೆಯಂತಿತ್ತು ಮತ್ತು ಬೊಕ್ಕೆಗಳು ಏಳುವಷ್ಟು ಸೆಕೆಯಿಂದಲೂ ವಿಷಕಾರಿ ಜಂತುಗಳು ತುಂಬಿರುವಂಥ ಸ್ಥಳವಾಗಿತ್ತು. (2) ಹೇಗೂ, ಅರಣ್ಯದಲ್ಲಿ ಜನರು *ಸ್ವತಂತ್ರರಾಗಿದ್ದರು* – ಐಗುಪ್ತದೇಶದ ದಾಸತ್ವದಿಂದ ಸ್ವತಂತ್ರರಾಗಿದ್ದರು. (3) ಆ ಸ್ಥಳದಲ್ಲಿಯೇ ದೇವರು ಅವರನ್ನು ತನ್ನ ಅಗ್ನಿಸ್ತಂಭದಿಂದ ಮಾರ್ಗದರ್ಶಿಸಿದನು ಮತ್ತು ಅವರನ್ನು ವೈರಿಗಳಿಂದ ಕಾಪಾಡಿದನು (ನೋಡಿರಿ ಹೋಶೇಯ 13:5). (4) ವಿಶೇಷ ಮಹತ್ವಪೂರ್ಣತೆಯುಳ್ಳದ್ದೆಂದರೆ ದೇವರು ಅಲ್ಲಿ ಅವರನ್ನು "ಪೋಷಣೆಮಾಡಿದನು" ಎಂಬುದೆ: ಪ್ರತಿ ದಿನವೂ ಪರಲೋಕದಿಂದ ಮನ್ನಾ ಒದಗಿಸಿದನು (ವಿಮೋಚನಕಾಂಡ 16:4) ಮತ್ತು, ಆಗಾಗ ಬೆಳವಕ್ಕಿಗಳನ್ನು ಒದಗಿಸುತ್ತಿದ್ದನು. ಅಲ್ಲದೆ ಅಗತ್ಯ ಬೀಳುವಾಗ ನೀರನ್ನು ಸಹ ಆತನು ಒದಗಿಸಿ ಕೊಟ್ಟನು. (5) ಅರಣ್ಯವು ಪ್ರಯಾಣದ ಅಂತ್ಯವಾಗಿರಬೇಕೆಂದು ಎಂದಿಗೂ ಉದ್ದೇಶಿಸಲ್ಪಟ್ಟಿರಲಿಲ್ಲ; ಅದು ವಾಗ್ದಾನ ದೇಶಕ್ಕೆ ಒಂದು ಮುನ್ನುಡಿ ಮಾತ್ರವೇ ಆಗಿತ್ತು.

ಆ ಅರಣ್ಯ ಹಾಗೂ 12ನೇ ಅಧ್ಯಾಯದ ಅರಣ್ಯದ ನಡುವೆ ಸಾಮ್ಯತೆಗಳನ್ನು ಸುಲಭವಾಗಿ ಕಾಣಬಹುದಾಗಿದೆ: (1) ಸ್ತ್ರೀಯು ಅರಣ್ಯದಲ್ಲಿದ್ದಾಳೆಂದ ಮಾತ್ರಕ್ಕೆ ಆಕೆಯ ಸಮಸ್ಯೆಗಳು ಮುಗಿದು ಹೋಗಿರಲಿಲ್ಲ. ಆಕೆಯು ಅಲ್ಲಿ **ಒಂದು ಕಾಲ, ಎರಡು ಕಾಲ, ಅರ್ಧ ಕಾಲ** ಇದ್ದಳು. ಈ ವಿಚಿತ್ರ ಪದಗುಚ್ಛವು ಈ ಮುಂಚೆ ದಾನಿಯೇಲನ ಪುಸ್ತಕದಲ್ಲಿ ಒಂದು ಕಷ್ಟದ ಸಮಯವನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುತ್ತದೆ (ದಾನಿಯೇಲ 7:25; 12:7). 6ನೇ ವಚನವು ಹೆಚ್ಚು ಪರಿಚಿತವಾಗಿರುವ ಪದಗುಚ್ಛವನ್ನು ಬಳಸುತ್ತದೆ "ಸಾವಿರದ ಇನ್ನೂರ ಅರುವತ್ತು ದಿನಗಳು." ಈ ಎರಡೂ ಅಂಕೆಗಳು 3½ ವರ್ಷಗಳನ್ನು ಸೂಚಿಸುತ್ತದೆ, ಇದು ಪರಿಶೋಧನೆ, ಸಂಕಷ್ಟ, ಮತ್ತು ಪರೀಕ್ಷೆಯ ಕಾಲದೊಂದಿಗೆ ಸಂಬಂಧ ಹೊಂದಿರುತ್ತದೆ (11:2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಸ್ತ್ರೀಯು ಅರಣ್ಯದಲ್ಲಿರುವ ವೇಳೆಯಲ್ಲಿ ಸಹ, ಘಟಸರ್ಪನು ಆಕೆಯನ್ನು ನಾಶಗೊಳಿಸಲು ಪ್ರಯತ್ನಿಸಿದನು (ವ. 15). (2) ಹೇಗೂ, ಅರಣ್ಯದಲ್ಲಿ, ಸ್ತ್ರೀಯು

ಸ್ವತಂತ್ರಳಾಗಿದ್ದಳು - ಕೊನೆಗೂ ಘಟಸರ್ಪದ ಧೊರೆತನದಿಂದ ಸ್ವತಂತ್ರಳಾಗಿದ್ದಳು (ವಚನಗಳು 9-11). 14ನೇ ವಚನವು "ಆಕೆಯು ಸರ್ಪದ ಕೈಗೆ ಸಿಗದಂತೆ ದೂರವಿದ್ದಳು" ಎಂದು ಹೇಳುತ್ತದೆ (NIV). (3) ಅರಣ್ಯದ ಸ್ಥಳವನ್ನು "ದೇವರು ಸಿದ್ಧಮಾಡಿದ್ದನು" (ವ. 6); ಅದು ಆಕೆಗೆ ದೇವರು ಸಹಾಯ ಮಾಡಬಹುದಾದ ಸ್ಥಳವಾಗಿತ್ತು. (4) ಅಲ್ಲದೆ ಅರಣ್ಯವು ಪೋಷಣೆಯ ಸ್ಥಳವಾಗಿತ್ತದೆಂಬುದನ್ನು ಒತ್ತಿ ಹೇಳುತ್ತದೆ: ಸ್ತ್ರೀಯು ಪರಿಶೋಧನೆ, ಸಂಕಷ್ಟ, ಮತ್ತು ಪರೀಕ್ಷೆಗಳ 3½ ವರ್ಷಗಳ ಕಾಲ ಪೋಷಣೆ ಮಾಡಲ್ಪಟ್ಟಳು. ದೇವರು ಕಷ್ಟಕರ ಸಮಯಗಳಲ್ಲಿ ಆಕೆಯನ್ನು ಆರೈಕೆ ಮಾಡಿದನು. (5) ಇದೆಲ್ಲವು ಆ ಪರಲೋಕದ ವಾಗ್ದನ ದೇಶವನ್ನು ತಲುಪುವದಕ್ಕೆ ಪೂರ್ವಸಿದ್ಧತೆಯಾಗಿತ್ತು, ಅಲ್ಲಿ ದೇವರು "ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು. ಇನ್ನು ಮರಣವಿರುವದಿಲ್ಲ, ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವದಿಲ್ಲ; ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು" (21:4).

ಸ್ತ್ರೀಯು ಅರಣ್ಯದಲ್ಲಿ ಓಡಿ ಹೋಗುವ ವಿಷಯವಾಗಿ, ವ್ಯಾಖ್ಯಾನಕಾರರು ಹಿಂಸೆ ಅಥವಾ ಮರಣಕ್ಕೆ ತಪ್ಪಿಸಿಕೊಂಡು ಓಡಿದ, ಅನೇಕ ಸಾರಿ ಮರೆಯಾದ ಸ್ಥಳಗಳಿಗೆ ಓಡಿ ಹೋದ ಸಂದರ್ಭಗಳನ್ನು ಉಲ್ಲೇಖಿಸುತ್ತಾರೆ. ರೋಮನ್ ಸೈನ್ಯವು ಯೆರೂಸಲೇಮನ್ನು ನಾಶಗೊಳಿಸಿದ ವೇಳೆ, ಕ್ರೈಸ್ತರು ಯೋರ್ದನ್ ನದಿಯ ಆಚೆಯಲ್ಲಿರುವ ಪ್ರಾಚೀನ ಪೆಲ್ಲಾ[55] ಎಂಬ ಸ್ಥಳಕ್ಕೆ ಓಡಿ ಹೋದದ್ದನ್ನು ಅನೇಕರು ಪ್ರಸ್ತಾಪಿಸುತ್ತಾರೆ. ಇನ್ನು ಕೆಲವರು ಸಮಾಧಿಗೂಡುಗಳು, ಗವಿಗಳು ಮತ್ತು ಗುಹೆಗಳು, ಹಾಗೂ ಗತಕಾಲದಲ್ಲಿ ಕ್ರೈಸ್ತರು ಆಶ್ರಯವನ್ನು ಪಡೆದಂಥ ಯಾರೂ ಬರಲಿಕ್ಕಾಗದ ಪ್ರಾಂತ್ಯಗಳನ್ನು ಉಲ್ಲೇಖಿಸುತ್ತಾರೆ. ಇಲ್ಲಿ ಒಂದು ಆತ್ಮೀಕ ಅನ್ವಯಿಕೆಯು ಸೂಕ್ತವಾಗಿರುತ್ತದೆ. ಭೌಗೋಳಿಕ ಸ್ಥಳವು ಯಾವದಿದ್ದರೂ ಸರಿಯೇ, ಒಬ್ಬ ಕ್ರೈಸ್ತನ "ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ" (ಕೊಲೊಸ್ಸೆ 3:3). ಆತನು "ಆತನು ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ" ಪಡೆದುಕೊಂಡಿರುತ್ತಾನೆ (ಎಫೆಸ 1:3). ದೇವರು "ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು" (ಫಿಲಿಪ್ಪಿ 4:19). ಅರಣ್ಯ ಸಾಂಕೇತಿಕತೆಯು ಈ ಸತ್ಯವನ್ನು ಪ್ರಕಟನೆ ಪುಸ್ತಕದುದ್ದಕ್ಕೂ ಪುನದೃಢೀಕರಿಸುತ್ತದೆ: ದೇವರು ತನ್ನವರಿಗಾಗಿ ವಿಶೇಷ ಏರ್ಪಾಡುಗಳನ್ನು ಮಾಡಿದನು ಮತ್ತು ಅವರನ್ನು ಪೋಷಿಸಿದನು. **ತನ್ನ ಸ್ಥಳಕ್ಕೆ** ಎಂಬ ಪದಗುಚ್ಛವು ದೇವರ ಯೋಜನೆಗಳು ಹಾಗೂ ಅನುಗ್ರಹಗಳಲ್ಲಿ ಸಭೆಗೆ ಒಂದು ವಿಶಿಷ್ಟ "ಸ್ಥಳ" ತೋರಿಸುತ್ತದೆ.

**ವಚನ 15.** ಸ್ತ್ರೀಯು ದೂರವಾಗಿ ಹಾರಿ ಹೋದಳೆಂದ ಮಾತ್ರಕ್ಕೆ ಸೈತಾನನು ಕೈ ಬಿಟ್ಟು ಬಿಡುವದಕ್ಕೆ ಸಿದ್ಧನಾಗಿದ್ದನೆಂದು ಅರ್ಥವಲ್ಲ. ಸ್ತ್ರೀಯು ದೂರವಾಗಿ ಹಾರಿ ಹೋದ ಹಾಗೆ, ಘಟಸರ್ಪನು ಆಕೆಯ ಬೆನ್ನತ್ತಿ ತ್ವರೆ ಪಟ್ಟನು, ಆಕೆಯು ಯಾವ ಸ್ಥಳದಲ್ಲಿ ಕೆಳಕ್ಕೆ ಇಳಿಯುತ್ತಾನೆಂಬುದನ್ನು ನೋಡುವ ತನಕವೂ ಆಕೆಯ ಮೇಲೆ ನಿಗಾ ಇಟ್ಟಿದ್ದನು. ಆತನು ಆ ಸ್ಥಳಕ್ಕೆ ಬಂದಾಗ, ಬಹುಶಃ ಆತನಿಗೆ ಆಕೆಯ ಸಮೀಪ ಹೋಗಲು ಆಗಲಿಲ್ಲವೆಂದು ತೋರುತ್ತದೆ, ಆದರೆ ಈ ಮಿತಿಯು ಅವನನ್ನು ಹಿಂಜರಿಯುವಂತೆ ಮಾಡಲಿಲ್ಲ. ಆತನಲ್ಲೊಂದು ಪರ್ಯಾಯ ಯೋಜನೆಯಿತ್ತು: ಪ್ರವಾಹ ಬರಮಾಡಿ ಆಕೆಯನ್ನು ಅಲ್ಲಿಂದ ಹೊರಗೆ ಓಡಿಸುವದು. **ಆ ಸರ್ಪನು ಸ್ತ್ರೀಯನ್ನು ಬಡಿಸಿಕೊಂಡು ಹೋಗಬೇಕೆಂದು ಆಕೆಯ ಹಿಂದೆ ತನ್ನ ಬಾಯೊಳಗಿಂದ ನೀರನ್ನು ನದಿಯಂತೆ ಬಿಟ್ಟನು.** ಆತನ ಬೃಹತ್ ಬಾಯಿ ತೆರೆಯಲ್ಪಟ್ಟು ಒಂದು ದೈತ್ಯಾಕಾರದ ನೀರಿನ ಅಲೆಯು ಉಗುಳಲ್ಪಡುವದನ್ನು ಊಹಿಸಿಕೊಳ್ಳಿರಿ. ನೀರು ಎಂದಿಗೂ ಹರಿಯುವದನ್ನು ನಿಲ್ಲಿಸುವದಿಲ್ಲವೇನೋ ಎಂಬಂತೆ ಅನ್ನಿಸಿರಬೇಕು. ಅದು ಉಕ್ಕಿ ಹೊರಗೆ

ಹರಿಯುತ್ತಿರುವ ನದಿಯಂತೆ ಇತ್ತು. ಸಾಂಕೇತಿಕತೆಯ ಸ್ರಾವತೆಯು - ಅಂದರೆ ಸಂಕೇತಗಳು ಬದಲಾಗುವ ರೀತಿಯು - ಇಲ್ಲಿ ತೋರ್ಪಡಿಸಲ್ಪಟ್ಟಿರುತ್ತದೆ: 12:3ರಲ್ಲಿ ಘಟಸರ್ಪನು ಏಳು ತಲೆಗಳುಳ್ಳವನಾಗಿ ಚಿತ್ರಿಸಲ್ಪಟ್ಟಿದ್ದಾನೆ, ಆದರೆ 15ನೇ ವಚನದಲ್ಲಿ ಆತನಿಗೆ ಒಂದು ಬಾಯಿ ಇರುವದಾಗಿ ಚಿತ್ರಿಸಲಾಗಿರುತ್ತದೆ.

ಪ್ರವಾಹಗಳು ಮತ್ತು ಉಕ್ಕಿ ಹರಿಯುವ ನೀರುಗಳ ಚಿತ್ರಣಗಳು ಹಳೆಯ ಒಡಂಬಡಿಕೆಯಲ್ಲಿ ಕೆಟ್ಟತವು ಅತ್ಯಧಿಕವಾಗಿರುವದನ್ನು ಸೂಚಿಸುದಕ್ಕೆ ಪದೇ ಪದೇ ಬಳಸಲ್ಪಟ್ಟಿರುತ್ತವೆ (ಯೋಬ 27:20; ಕೀರ್ತನೆ 18:4; 32:6; 69:1, 2, 15; 124:2-5; ಯೆಶಾಯ 8:5-8). ಪ್ರವಾಹವು ಕ್ರೈಸ್ತರ ಮೇಲೆ ಸೈತಾನನು ಬಂಧನ ಕಳಚಿ ಬಿಟ್ಟು ಬಿಟ್ಟಂಥ ಯಾವದೇ ಹಾಗೂ (ಕಳಚಿ ಬಿಡುವ) ಎಲ್ಲಾ ಕೆಡುಕುತನವನ್ನು ಪ್ರತಿನಿಧಿಸುವ ಸಾಧ್ಯತೆಯಿರುತ್ತದೆ. 12ನೇ ಅಧ್ಯಾಯದಲ್ಲಿನ ಪ್ರವಾಹವು ಘಟಸರ್ಪನ *ಬಾಯೊಳ*ಗಿಂದ ಬಂದಿತ್ತು, ನಾವು ಬಹುಶಃ ಆದಿ ಕ್ರೈಸ್ತರನ್ನು ನೋವು ಪಡಿಸಿ ನಾಶಗೊಳಿಸುವ *ಮಾತುಗಳ* ಬಗ್ಗೆ ನಾವು ಪ್ರಾಥಮಿಕವಾಗಿ ಯೋಚಿಸುತ್ತೇವೆ: ಅವರನ್ನು ಹಿಂಸೆಗೆ ಗುರಿಯಾಗುವಂತೆ ಮಾಡಿದ ಸುಳ್ಳುಗಳು, ಅವರನ್ನು ಒಪ್ಪಿಕೊಂಡು ನಡೆದುಕೊಳ್ಳುವಂತೆ ಮಾಡುವ ಬೆದರಿಕೆಗ ಮಾತುಗಳು, ದಾರಿತಪ್ಪುವಂತೆ ಮಾಡುವ ತಪ್ಪು ಬೋಧನೆಯ ಮಾತುಗಳು. ಸೈತಾನನು ಪ್ರಥಮ ಸಭೆಯ ವಿರುದ್ಧವಾಗಿ ಈ ವಿಧಾನಗಳನ್ನು ಬಳಸಿದನು, ಮತ್ತು ಆತನು ಈ ದಿನದಲ್ಲಿಯೂ ಅವುಗಳನ್ನು ಬಳಸುತ್ತಾನೆ. ನಿರಂತರವಾದ ಸುಳ್ಳುಗಳ ಪ್ರವಾಹಗಳು ಮುದ್ರಣಾಲಯಗಳಿಂದ, ರೇಡಿಯೋ ಮತ್ತು ಟಿವಿ ಬೋಧಕರಿಂದ, ಮತ್ತು ಭಾಷಣದ ವೇದಿಕೆಗಳಿಂದ ಹರಿದು ಬರುತ್ತವೆ - ಕರ್ತನ ಸಭೆಯನ್ನು ಮುಳುಗಿಸಿ ಬಿಡುವ ಉದ್ದೇಶದಿಂದ ಹರಿಯಬಿಟ್ಟ ಸುಳ್ಳುಗಳ ಒಂದು ಪ್ರವಾಹ.

**ವಚನ 16.** ಘಟಸರ್ಪಕ್ಕೆ ಇರುವಂತೆ ಕಾಣಿಸುವ ಶಕ್ತಿಯನ್ನು ಪರಿಗಣಿಸುವವನಾಫೆ, ವಾಚಕನು ಪುನಃ ಹೀಗೆ ಕೇಳುತ್ತಾನೆ, "ಸ್ತ್ರೀಯು ತಪ್ಪಿಸಿಕೊಳ್ಳಲಿಕ್ಕೆ ಹೇಗೆ ಸಾಧ್ಯವಾಗಿತ್ತು?" ಮತ್ತೊಂದು ಸಾರಿ, ಉತ್ತರವು ಏನೆಂದರೆ, "ಕರ್ತನ ಸಹಾಯದಿಂದ ಮಾತ್ರವೇ ಸಾಧ್ಯ." 16ನೇ ವಚನವು ಆತನು ಮಧ್ಯಪ್ರವೇಶಿಸುವ ಕುರಿತು ತಿಳಿಸುತ್ತದೆ: **ಆದರೆ ಭೂಮಿಯು ಆ ಸ್ತ್ರೀಯ ಸಹಾಯಕ್ಕೆ ಬಂದು ಬಾಯಿ ತೆರೆದು ಘಟಸರ್ಪನು ತನ್ನ ಬಾಯೊಳಗಿಂದ ಬಿಟ್ಟ ನದಿಯನ್ನು ಕುಡಿದುಬಿಟ್ಟಿತು.** ಈ ಪರಿಭಾಷೆಯು ವಿಮೋಚನೆಕಾಂಡದಲ್ಲಿ ಇನ್ನೂ ಎರಡು ಘಟನೆಗಳನ್ನು ಜ್ಞಾಪಿಸುವದಾಗಿರುತ್ತದೆ: ದೇವರು ಇಸ್ರಾಯೇಲ್ಯರನ್ನು ಕೆಂಪು ಸಮುದ್ರವನ್ನು ದಾಟಿಸಿದ ವೇಳೆ (ಕೀರ್ತನೆ 66:6; KJV) ಮತ್ತು ಭೂಮಿಯು ಬಾಯ್ದೆರೆದು ದೇವರ ವೈರಿಗಳನ್ನು ನುಂಗಿ ಬಿಟ್ಟ ಸಂದರ್ಭ (ಅರಣ್ಯಕಾಂಡ 16:31-33). ನೀರಿನ ಬೃಹತ್ ಗೋಡೆಯು ಸ್ತ್ರೀಯ ಮೇಲೆ ಬೀಳುತ್ತಿರುವದನ್ನು, ಭೂಮಿಯು ನಡುಗುತ್ತಿರುವದನನ್ನು ಅದರ ಮೇಲ್ಭಾಗದಲ್ಲಿ ಬೃಹತ್ ಬಿರುಕುಗಳು ಬಿಡಲ್ಪಡುವದನ್ನು, ಮತ್ತು ಉಕ್ಕಿ ಹರಿಯುವ ಪ್ರವಾಹವು ಯಾವ ಹಾನಿಯನ್ನು ಮಾಡದೆ ಭೂಗರ್ಭಗೊಳಗೆ ಇಳಿದು ಹೋಗುತ್ತಿರುವದನ್ನು ಊಹಿಸಿಕೊಳ್ಳಿರಿ.

ಮತ್ತೊಂದಾವರ್ತಿ, ಸ್ತ್ರೀಯು ನಿಶ್ಚಿತವಾಗಿ ಸಂಭವಿಸಬೇಕಾಗಿದ್ದ ನಾಶನದಿಂದ ತಪ್ಪಿಸಿಕೊಂಡಿದ್ದಳು. ಲೇಖಕರು **ಭೂಮಿ** ಎಂಬ ಅಂಶದ ಕುರಿತು ಮಹತ್ವಪೂರ್ಣತೆಯನ್ನು ಹುಡುಕುತ್ತಾರೆ. ಕೆಲವರು ಭೂಮಿ: ಎಂಬುದು ನೈಸರ್ಗಿಕ ಕ್ರಮವನ್ನು ಪ್ರತಿನಿಧಿಸುತ್ತದೆ, ಮತ್ತು ಈ ಸೃಷ್ಟಿಯು ತನ್ನ ಜನರಿಗೆ ಸುರಕ್ಷತೆಯನ್ನು ಒದಗಿಸುವ ವಿಧದಲ್ಲು ದೇವರು ಜಗತನ್ನು ವ್ಯವಸ್ಥೆಗೊಳಿಸಿದ್ದಾನೆಂಬುದನ್ನು ಪ್ರತಿನಿಧಿಸುತ್ತದೆ. ಎಲ್ಲೆಡೆಯೂ ಇರುವ ಸಕಲ ಸಂಗತಿಗಳು ದೇವರ ನಿಯಂತ್ರಣದಲ್ಲಿರುವವು (ನೋಡಿರಿ ಕೀರ್ತನೆ 148) ಮತ್ತು ಆತನ ಉದ್ದೇಶಗಳನ್ನು ಸಾಧಿಸುವದಕ್ಕಾಗಿ ಆತನಿಂದ ಬಳಸಿಕೊಳ್ಳಲ್ಪಡಬಲ್ಲವು ಎಂಬುದಂತೂ ನಿಜವೇ ಆಗಿದೆ.

ಅದದರಿಂದ, 16ನೇ ವಚನದಲ್ಲಿರುವ "ಭೂಮಿ" ಎಂಬ ಸಂಕೇತವು ವಿಚಾರವನ್ನು ತಿಳಿಯಪಡಿಸುವ ಉದ್ದೇಶವನ್ನು ಹೊಂದಿರುವ ಸಾಧ್ಯತೆಯಿದೆ. ಹೇಗೂ, ಪ್ರಾಕೃತ ಜಗತ್ತು ಪಾಪದಿಂದ ಭ್ರಷ್ಟಗೊಂಡಿದೆ ಎಂಬುದನ್ನು ಪರಿಗಣಿಸುವಾಗ - ಜೊತೆಗೆ ಸ್ವಾಭಾವಿಕ ಜಗತ್ತಿನಿಂದ ಜನರ ದೇಹಗಳು ಆಗಾಗ ಚುಚ್ಚಲ್ಪಡುತ್ತವೆ, ಜಜ್ಜಲ್ಪಡುತ್ತವೆ, ಮತ್ತು ಮುರಿಯಲ್ಪಡುವವೆಂಬ ವಾಸ್ತವಾಂಶವನ್ನು ನೋಡುವಾಗ - ಆ ಅಭಿಪ್ರಾಯವಿರುವದದು ಸಂಭವನೀಯವೆಂದು ತೋರುತ್ತದೆ. ಇನ್ನು ಕೆಲವರು "ಭೂಮಿ" ಎಂಬುದು "ಭೂನಿವಾಸಿಗಳನ್ನು" ಪ್ರತಿನಿಧಿಸುತ್ತದೆಂದು ಯೋಚಿಸುತ್ತಾರೆ. ಭೂನಿವಾಸಿಗಳು ಸೈತಾನನ ಸುಳ್ಳುಗಳನ್ನು "ಕುಡಿದು ಬಿಡುತ್ತಾರೆ" - ಅಂದರೆ ಸಂಕೋಚವಿಲ್ಲದೆ ಅಂಗೀಕರಿಸಿಕೊಳ್ಳುವರು - ಎಂಬುದು ನಿಜವೇ, ಆದರೆ ಇದು ಕ್ರೈಸ್ತರಿಗೆ ಹೇಗೆ ಪ್ರಯೋಜನವನ್ನುಂಟು ಮಾಡುತ್ತದೆಂಬುದನ್ನು ಕಾಣುವದು ಕಷ್ಟಕರವಾಗಿರುತ್ತದೆ. ಸೈತಾನನ ಸುಳ್ಳುಗಳನ್ನು ಲೋಕವು ಎಷ್ಟು ಅಧಿಕವಾಗಿ ಅಂಗೀಕರಿಸಿಕೊಳ್ಳುತ್ತದೋ, ಅಷ್ಟೇ ಆಧಿಕವಾಗಿ ಅವಿಶ್ವಾಸಿಗಳನ್ನು ದೇವರ ಜನರನ್ನು ಹಿಂಸಿಸುವರು.

ಬಹುಶಃ ಒಂದು ಹೆಚ್ಚು ಸಾಮಾನ್ಯವಾದ ಅನ್ವಯಿಕೆಯನ್ನು ಮಾಡತಕ್ಕದ್ದು: 16ನೇ ವಚನವು ತನ್ನ ಜನರ ಪರವಾಗಿ ದೇವರು ಅನಿರೀಕ್ಷಿತವಾಗಿ ಮಧ್ಯಪ್ರವೇಶ ಮಾಡುವಂತಹ ಆ ನಾಟಕೀಯ ಕ್ಷಣಗಳನ್ನು ದೃಷ್ಟಾಂತ ಪಡಿಸುತ್ತದೆ. ಅಂತಹ ಒಂದು ಸಂದರ್ಭವೆಂದರೆ ಸೌಲನೆಂಬ ಒಬ್ಬ ಕ್ರೈಸ್ತ-ದ್ವೇಷಕನು ದಮಸ್ಕಕ್ಕೆ ಹೊರಟಿರುವದು ಆಗಿತ್ತು. ಸೌಲನು ಈಗಾಗಲೇ ಸಭೆಯ ಮೇಲೆ ಹಿಂಸೆಯ ಪ್ರವಾಹವನ್ನು ತೆರೆದು ಬಿಟ್ಟಿದ್ದನು, ಆಕೆಯ ಅಸ್ತಿತ್ವಕ್ಕೇ ಗಂಡಾಂತರವನ್ನುಂಟು ಮಾಡಿದ್ದಂಥ ಒಂದು ಪ್ರವಾಹ ಅದಾಗಿತ್ತು. ಆಕೆಯು ಹೇಗೆ ಬದುಕುಳಿಯುವ ಸಾಧ್ಯತೆಯಿತ್ತು? ಉತ್ತರವು "ದೇವರು ಹಸ್ತಕ್ಷೇಪ ಮಾಡುವದರಿಂದಲೇ" ಎಂದಾಗಿತ್ತು. ಕ್ರಿಸ್ತನು ದಾರಿಯಲ್ಲಿ ಸೌಲನಿಗೆ ಕಾಣಿಸಿಕೊಂಡ ವೇಳೆ, ಅದೊಂದು ರೀತಿಯಲ್ಲಿ ಭೂಮಿಯು ಬಾಯ್ದೆರೆದು ಸಭೆಯ ಕಡೆಗೆ ಆತನಿಗಿದ್ದ ಹಗೆತನವನ್ನು ನುಂಗಿ ಬಿಟ್ಟಿತೋ ಎಂಬಂತಾಗಿತ್ತು.

ದೇವರ ಅನುಗ್ರಹದ ಪೋಷಣೆಯ ದೃಷ್ಟಾಂತಗಳು ಎಷ್ಟೋ ಅಧಿಕಗೊಳ್ಳಬಹುದಾಗಿದೆ. Henry Sweteನು ರೋಮನ್ ಸಾಮ್ರಾಜ್ಯವು ಸಭೆಯನ್ನು ಹಿಂಸಿಸುತ್ತಿದ್ದ ವೇಳೆ ದೇವರ ಅನುಗ್ರಹದ ಉದಾಹರಣೆಗಳನ್ನು ನೀಡುತ್ತಾನೆ:

> ಸಹಾಯವು ಅನಿರೀಕ್ಷಿತವಾದ ಕಡೆಗಳಿಂದ ಬರುವದಾಗಿತ್ತು; ಹಿಂಸಿಸುವ ಚಕ್ರವರ್ತಿಯ ಮರಣ, ಅದಾದ ಬಳಿಕ ಆತನ ಉತ್ತರಾಧಿಕಾರಿಯಿಂದ ರಾಜನೀತಿಗಳನ್ನು ಬದಲಾಯಿಸುವದು, ಏಕಾಏಕಿ ಸಾರ್ವಜನಿಕರ ಭಾವಗಳು ಬದಲಾಗಿ ಬಿಡುವಿಕೆ, ಅಥವಾ ಸಾರ್ವಜನಿಕರ ಗಮನವನ್ನು ಸಭೆಯಿಂದ ಕಿತ್ತು ಬೇರೆ ಕಡೆಗೆ ತಿರುಗಿಸುವಂತೆ ಮಾಡುವ ಘಟನಾವಳಿಗಳು ನಡೆಯುವಿಕೆ ಇತ್ಯಾದಿಗಳು ಕಾಲ ಕಾಲಕ್ಕೆ ಸೈತಾನನ ಯೋಜನೆಗಳನ್ನು ನಿಗ್ರಹಿಸುತ್ತಿದ್ದವು ಅಥವಾ ಭಂಗ ಪಡಿಸುತ್ತಿದ್ದವು.[56]

13ರಿಂದ 16 ವಚನಗಳು ಕಲಿಸುವದೇನೆಂದರೆ, ಸೈತಾನನು ಎಷ್ಟೇ ಕಠಿಣವಾಗಿ ಪ್ರಯತ್ನಿಸಿದರೂ ಸರಿಯೇ, ಆತನು ಎಂದಿಗೂ ಸಭೆಯನ್ನು ನಾಶಗೊಳಿಸುವದಕ್ಕೆ ಸಾಧ್ಯವೇ ಇಲ್ಲ. ದಾನಿಯೇಲನು ರಾಜ್ಯದ/ಸಭೆಯ ಸ್ಥಾಪನೆಯ ಕುರಿತು ಪ್ರವಾದನೆಯನ್ನು ನುಡಿದ ವೇಳೆ, ಆತನು "ಅದು ಎಂದಿಗೂ ಅಳಿಯದು," ಅದು "ಶಾಶ್ವತವಾಗಿ ನಿಲ್ಲುವದು" ಎಂದು ಹೇಳಿದನು (ದಾನಿಯೇಲ 2:44). ಯೇಸುವು ತನ್ನ ಸಭೆಯನ್ನು ಕಟ್ಟುವೆನೆಂದು ವಾಗ್ದಾನ

ಮಾಡಿದ ವೇಳೆ, ಆತನು "ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು" ಎಂದು ಹೇಳಿದನು (ಮತ್ತಾಯ 16:18).

ಸಭೆಯ ನಿಧನವಾರ್ತೆಯು ವಿಶ್ವಾಸಿಗಳ ಪೈಲುಗಳಲ್ಲಿ ಅತ್ಯಂಥ ದೀರ್ಘಕಾಲದಿಂದ ಸಿದ್ಧಗೊಳಿಸಲ್ಪಟ್ಟದ್ದಾಗಿ ಕಾಯುತ್ತಿದೆ. ಸಭೆಯು ಅವಸಾನವು ಸಮೀಪವಾಗಿದೆ ಎಂದು ಪದೇ ಪದೇ ಪ್ರಕಟಿಸಲ್ಪಟ್ಟಿರುತ್ತದೆ. "ಸಭೆಯು ಎರವಲು ಕಾಲದಲ್ಲಿ ಜೀವಿಸುತ್ತಿದೆ" ಎಂಬದನ್ನು ಒತ್ತಿ ಹೇಳಲಾಗಿರುತ್ತದೆ. ಹೇಗೂ, ನಮ್ಮ ವಾಕ್ಯಭಾಗವು ಘೋಷಿಸುವದೇನೆಂದರೆ, ಎರವಲು ಕಾಲದಲ್ಲಿ ಜೀವಿಸುತ್ತಿರುವವರು ಸೈತಾನ ಹಾಗೂ ಆತನ ಹಿಂಬಾಲಕರೇ ಎಂಬದೆ. ದೇವರ ಸಭೆಯು ನಾಶನಕ್ಕೊಳಗಾಗಲು ಸಾಧ್ಯವಿಲ್ಲದ್ದು! ಸೈತಾನನು ಸಭೆಯ ವಿರುದ್ಧ ನಡಿಸುತ್ತಿರುವ ಯುದ್ಧವು ಆತನು ಎಂದಿಗೂ ಗೆಲ್ಲುವದಕ್ಕೆ ಸಾಧ್ಯವಿಲ್ಲದ ಯುದ್ಧವಾಗಿದೆ.

**ವಚನ 17.** ದುರಾದೃಷ್ಟಕರವಾಗಿ, ಕೆಲವು ಸಾರಿ ಸೈತಾನನು ಒಂದು ಯುದ್ಧವನ್ನು ಗೆಲ್ಲುತ್ತಾನೆಂಬುದು *ನಿಜವೇ* - ಅದು ಸಭೆಯ ವ್ಯಕ್ತಿಗತ ಸದಸ್ಯನ ವಿರುದ್ಧ ಯುದ್ದವೇ. ಸಭೆಯು ಅವಿನಾಶಿಯಾಗಿದೆಯಾದರೂ, ಸಭೆಯ ಸದಸ್ಯರು ಹಾಗಿರುವದಿಲ್ಲ. ವ್ಯಕ್ತಿಪರ ಕ್ರೈಸ್ತರು ಕೇಡಿಗೆ ಒಳಗಾಗಬಲ್ಲರು. ಒಟ್ಟಾರೆ ಸಭೆ ಹಾಗೂ ವ್ಯಕ್ತಿಪರ ಸದಸ್ಯರ ನಡುವಿನ ವ್ಯತ್ಯಾಸವು 17ನೇ ವಚನದಲ್ಲಿ ಕಂಡು ಬರುತ್ತದೆ: **ಆಗ ಘಟಸರ್ಪನು ಸ್ತ್ರೀಯ ಮೇಲೆ ಕೋಪಿಸಿಕೊಂಡು ಆಕೆಯ ಸಂತಾನದವರಲ್ಲಿ ಉಳಿದವರ ಮೇಲೆ ಅಂದರೆ ದೇವರ ಆಜ್ಞೆಗಳನ್ನು ಕೈಕೊಂಡು ನಡೆದು ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವವರ ಮೇಲೆ ಯುದ್ಧ ಮಾಡುವದಕ್ಕೆ ಹೊರಟನು**. ಈ ವಾಕ್ಯಭಾಗದಲ್ಲಿ, ಸ್ತ್ರೀಯು ಸಭೆಯನ್ನು ಪ್ರತಿನಿಧಿಸಿದರೆ, **ಆಕೆಯ ಸಂತಾನದವರು** ಎಂದರೆ ಕ್ರೈಸ್ತರು, ಸಭೆಯ ಸದಸ್ಯರು.

ಘಟಸರ್ಪನು ಏಕೆ ಅಷ್ಟೊಂದು ಬೇಸರಗೊಂಡಿದ್ದನು ಎಂಬುದರ ವಿವರಣೆಯನ್ನು ಸಂಪೂರ್ಣಗೊಳಿಸುತ್ತದೆ. ಗಂಡು ಮಗುವು ತಪ್ಪಿಸಿಕೊಳ್ಳುವಾಗ, ಆತನು ನಿಶ್ಚಿತವಾಗಿಯೂ ಹತಾಶೆಗೊಂಡಿದ್ದನು. ಆತನು ಭೂಮಿಗೆ ದೊಬ್ಬಲ್ಪಟ್ಟ ವೇಳೆ, ಆತನು "ಮಹಾ ರೌದ್ರ"ದಿಂದ ತುಂಬಿದ್ದನು (ವ. 12). ಸ್ತ್ರೀಗೆ ರೆಕ್ಕೆಗಳು ಕೊಡಲ್ಪಟ್ಟು ಹಾರಿ ಹೋದ ವೇಳೆ, ಆತನ ಹತಾಶೆಯು ಮತ್ತಷ್ಟು ಅಧಿಕೊಳ್ಳಲೇ ಬೇಕಿತ್ತು. ಆತನ ಕಾರ್ಯನೆಲೆಯಾಗಿರುವಂಥ ಭೂಮಿಯು ಸಹ, ಆತನಿಗೆ ವಿರುದ್ಧವಾಗಿ ಸಂಚು ಮಾಡಿದಾಗ ಮತ್ತು ಸ್ತ್ರೀಯನ್ನು ಮುಳುಗಿಸಬೇಕೆಂಬ ಆತನ ಪ್ರಯತ್ನವನ್ನು ಭಂಗಪಡಿಸಿದಾಗ, ಇನ್ನು ಮೇಲೆ ಸಹಿಸಿಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ. ಆತನು **ಕೋಪಿಸಿಕೊಂಡನು** ಎಂದು ಬಣ್ಣಿಸಲ್ಪಟ್ಟಿರುವದರಲ್ಲಿ ಆಶ್ಚರ್ಯವೇನೂ ಇಲ್ಲ; ಸೈತಾನನು ಯಾರನ್ನಾದರೂ ಕೊಂಬಿನಿಂದ ತಿವಿದು ಬಿಡಬೇಕೆಂದು ನೋಡುತ್ತಿರುವ ಒಂದು ರೊಚ್ಚಿಗೆದ್ದಿರುವ ಗೂಳಿಯಂತೆ ಇದ್ದಾನೆ.

ಸೈತಾನನು ಒಟ್ಟಾರೆ ಸಭೆಯನ್ನು ನಾಶಗೊಳಿಸಲು ಸಾಧ್ಯವಿಲ್ಲವಾದ್ದರಿಂದ, ಆತನು ಕೊನೆಗೆ ಸಭೆಯ ಸದಸ್ಯರನ್ನು ಒಬ್ಬೊಬ್ಬರಾಗಿ ಆರಿಸಿಕೊಳ್ಳುವ ಮಟ್ಟಕ್ಕೆ ತರಲ್ಪಟ್ಟಿದ್ದಾನೆ: "... ಆಕೆಯ ಸಂತಾನದವರಲ್ಲಿ ಉಳಿದವರ ಮೇಲೆ ಅಂದರೆ ದೇವರ ಆಜ್ಞೆಗಳನ್ನು ಕೈಕೊಂಡು ನಡೆದು ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವವರ ಮೇಲೆ ಯುದ್ಧ ಮಾಡುವದಕ್ಕೆ ಹೊರಟನು." ಆತನು ಕ್ರೈಸ್ತೇತರರನ್ನು ನಿರ್ಲಕ್ಷ್ಯಿಸುವದಿಲ್ಲ (2 ಕೊರಿಂಥ 4:3, 4; ಎಫೆಸ 2:1, 2), ಆದರೆ ಆತನಿಗೆ ಅವರೊಂದಿಗೆ ಯುದ್ಧಮಾಡುವದು ಅನಾವಶ್ಯಕವಾಗಿರುತ್ತದೆ; ಅವರಿಗೆ ಗ್ರಹಿಕೆಗೆ ಬಂದರೂ ಸರಿಯೇ ಬರದಿದ್ದರೂ ಸರಿಯೇ, ಅವರು ಈಗಾಗಲೇ ಆತನ ಪಕ್ಷದಲ್ಲಿರುತ್ತಾರೆ. ಸೈತಾನನು ಯೇಸುವಿನ ಹಿಂಬಾಲಕರನ್ನು ನಾಶಮಾಡುವದರ ಕಡೆಗೆ ಮುಖ್ಯ ಗಮನವನ್ನು ಹರಿಸುತ್ತಾನೆ. ಈ ಅಧ್ಯಾಯದಲ್ಲಿ, ಕ್ರಿಸ್ತನು ಮೂಲ ಸಂತಾನ, ಮತ್ತು

ಕ್ರೈಸ್ತರು "ಆಕೆಯ ಸಂತಾನದವರಲ್ಲಿ ಉಳಿದವರು." "ಮಕ್ಕಳು" ಎಂಬ ಪದವು σπέρμα (*sperma*) ಎಂಬುದರಿಂದ ಅನುವಾದಿಸಲ್ಪಟ್ಟಿದ್ದು, ಅದರ ಅರ್ಥವು "ಸಂತಾನ" (KJV) ಅಥವಾ "ಸಂತತಿ" (RSV) ಎಂದು ಸಹ ಆಗಬಲ್ಲದು. ಕ್ರಿಸ್ತನ ಹಿಂಬಾಲಕರನ್ನು ಶಾಸ್ತ್ರಗಳಲ್ಲಿ ಆತನ ಸಹೋದರರು ಹಾಗೂ ಸಹೋದರಿಯರು ಎಂದು ಕರೆಯಲಾಗಿರುತ್ತದೆ (ಲೂಕ 8:21; ರೋಮಾ 8:29; ಇಬ್ರಿಯ 2:11). ಕೆಲವು ವ್ಯಾಖ್ಯಾನಕಾರರು "ಆಕೆಯ ಸಂತಾನದವರಲ್ಲಿ ಉಳಿದವರು" ಎಂಬುದಕ್ಕೆ ಕ್ರೈಸ್ತರಲ್ಲಿ ಒಂದು ಆಯ್ದುಕೊಂಡ ಗುಂಪನ್ನು ಸೂಚಿಸುವಂತೆ ಮಾಡುವದಕ್ಕಾಗಿ ಸಾಕಷ್ಟು ಪ್ರಮಾಣದಲ್ಲಿ ಪ್ರಯಾಸ ಪಡುತ್ತಾರೆ. ಉದಾಹರಣೆಗೆ, ಯೆಹೂದ್ಯರು ಈಗಲೂ ದೇವರ ವಿಶೇಷ ಜನಾಂಗವಾಗಿದ್ದಾರೆಂದು ನಂಬುವವರು ವಾದಿಸುವದೇನೆಂದರೆ "ಆಕೆಯ ಸಂತಾನದವರಲ್ಲಿ ಉಳಿದವರು" ಎಂಬುದು ಅನ್ಯಜನಾಂಗದ ಕ್ರೈಸ್ತರನ್ನು ಸೂಚಿಸುತ್ತದೆ ಎಂಬದೆ. ಹೇಗೂ, ಸನ್ನಿವೇಶದಲ್ಲಿ, "ಆಕೆಯ ಸಂತಾನದವರಲ್ಲಿ ಉಳಿದವರು" ಎಂಬುದು "ದೇವರ ಆಜ್ಞೆಗಳನ್ನು ಕೈಕೊಂಡು ನಡೆದು ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವ" *ಎಲ್ಲರನ್ನೂ* ಸೂಚಿಸುತ್ತದೆ.

**ಯುದ್ಧ ಮಾಡುವದಕ್ಕೆ** ಎಂಬ ಪದಗುಚ್ಛವು ಪ್ರಾಮುಖ್ಯವಾದದ್ದು. ಈ ಕಾದಾಟವು ಒಂದು ತಳ್ಳಾಟದ ಪಂದ್ಯ ಅಥವಾ ಸಣ್ಣ ಚಕಮಕಿ ಆರಲಿಲ್ಲ, ಆದರೆ ಒಂದು ಪೂರ್ಣಪ್ರಮಾಣದ ಯುದ್ಧವಾಗಿತ್ತು. ಸೈತಾನನು ಸಭೆಯ ಸದಸ್ಯರನ್ನು ನಾಶಗೊಳಿಸಲು ತನ್ನ ಶಕ್ತಿಯಲ್ಲಿ ಸಾಧ್ಯವಿರುವದನ್ನೆಲ್ಲಾ ಮಾಡುವನು. ಯೋಹಾನನ ದಿನದಲ್ಲಿ, ಸೈತಾನನ ಕಾರ್ಯತಂತ್ರವು ಶಾರೀರಿಕವಾಗಿ ಹಿಂಸಿಸುವದಕ್ಕೆ ಮುಖ್ಯ ಗಮನವನ್ನು ಹೊಂದಿತ್ತು, ಅದರಲ್ಲಿ ಕ್ರೈಸ್ತರನ್ನು ಮರಣಕ್ಕೊಳಪಡಿಸುವದು ಸಹ ಸೇರಿತ್ತು. ಹೇಗೂ, ಆ ಯುದ್ಧ ಯೋಜನೆಯಲ್ಲಿ, ಕ್ರೈಸ್ತರನ್ನು ಕೊಲ್ಲುವದು ಸ್ವತಃ ಒಂದು ಅಂತ್ಯವಾಗಿರಲಿಲ್ಲ. ಆತನು ಪ್ರತಿ ಸಾರಿ ದೇವರ ಒಬ್ಬ ನಂಬಿಗಸ್ತ ಮಗುವನ್ನು ಕೊಂದಾಗಲೆಲ್ಲಾ, ಆ ವ್ಯಕ್ತಿಯ ಆತ್ಮವು ದೇವರ ಬಳಿಗೆ ಹಿಂದಿರುಗಿ ಹೋಗಿ ಶಾಶ್ವತವಾಗಿ ಸೈತಾನನ ಕೈಗೆ ಸಿಕ್ಕದಂತೆ ದೂರವಾಗಿರುತ್ತಿತ್ತು. ಇಲ್ಲ, ಸೈತಾನನ ಆಯುಧವು "ಮರಣ*ಭಯ*"ವೇ ಆಗಿತ್ತು (ಇಬ್ರಿಯ 2:15; ಒತ್ತಿ ಹೇಳಿದ್ದು ನನ್ನದು). ಆತನು ಕ್ರೈಸ್ತರನ್ನು ಭಯಪಡಿಸಿ ಕರ್ತನನ್ನು ನಿರಾಕರಿಸುವಂತೆ ಅವರನ್ನು ಒತ್ತಾಯಿಸುವದಕ್ಕೆ ಮರಣದ *ಬೆದರಿಕೆ*ಯನ್ನು ಬಳಸಿದನು.

ಈ ಒಟ್ಟಾರೆಯಾದ ಕಾರ್ಯತಂತ್ರವನ್ನು ಮನಸ್ಸಿನಲ್ಲಿಟ್ಟುಕೊಂಡು, "ಯುದ್ಧ ಮಾಡುವದಕ್ಕೆ" ಎಂಬ ಪದಗುಚ್ಛವು ಶಾರೀರಿಕ ನೋವು ಅಥವಾ ಮರಣವನ್ನು ಉಂಟುಮಾಡುವದನ್ನು ಒಳಗೊಂಡಿರಬಹುದು ಅಥವಾ ಒಳಗೊಂಡಿಲ್ಲದೆ ಇರಬಹುದು. ಸೈತಾನನ ಪ್ರಾಥಮಿಕ ಉದ್ದೇಶವು ಕ್ರೈಸ್ತರನ್ನು ಶಾರೀರಿಕವಾಗಿ ನಾಶಗೊಳಿಸುವದಾಗಿರಲಿಲ್ಲ, ಆದರೆ ಅವರನ್ನು ಆತ್ಮೀಕವಾಗಿ ನಾಶಗೊಳಿಸುವದೇ ಆಗಿತ್ತು. ಆತನ ಯುದ್ಧದ ಕಾರ್ಯನೀತಿಗಳು ಪ್ರತಿಯೊಬ್ಬ ವ್ಯಕ್ತಿಯ ಸಾಮರ್ಥ್ಯಗಳು ಹಾಗೂ ದುರ್ಬಲತೆಗಳಿಗನುಗುಣವಾಗಿ ವ್ಯತ್ಯಾಸವಾಗಿರುತ್ತವೆ. ಸೈತಾನನು ಪ್ರತಿಯೊಬ್ಬ ವ್ಯಕ್ತಿಯ ದುರ್ಬಲತೆಗಳನ್ನು ಬಲ್ಲವನಾಗಿದ್ದಾನೆ (ನೋಡಿರಿ ಯಾಕೋಬ 1:14) ಮತ್ತು ಅವುಗಳನ್ನು ತನ್ನಿಷ್ಟದಂತೆ ದುರುಪಯೋಗಪಡಿಸಿಕೊಳ್ಳುತ್ತಾನೆ. ಕೆಲವು ಕ್ರೈಸ್ತರು ಒತ್ತಡಕ್ಕೆ ಮಣಿಯುವವರಾಗಿದ್ದರೆ, ಇನ್ನು ಕೆಲವರು ಶಾರೀರಿಕ ಸೋಧನೆಗಳಿಗೆ ಒಳಗಾಗುತ್ತಾರೆ, ಮತ್ತು ಬೇರೆ ಕೆಲವರು ಸುಳ್ಳು ಉಪದೇಶಗಳಿಗೆ ತುತ್ತಾಗುತ್ತಾರೆ. "ಸೈತಾನನು ನಮ್ಮನ್ನು ವಂಚಿಸಿ ನಷ್ಟಪಡಿಸಬಾರದಂತೆ" ಖಾತ್ರಿಪಡಿಸಿಕೊಳ್ಳಬೇಕಾದರೆ ನಾವು "ಅವನ ಯೋಚನೆಗಳನ್ನು ಅರಿಯದವರಾಗಿ" ಇರುವ ಧೈರ್ಯ ಮಾಡಬಾರದು (2 ಕೊರಿಂಥ 2:11).

ಅನೇಕ ಲೇಖಕರು ಪ್ರಕಟನೆ 12ನೇ ಅಧ್ಯಾಯದ ಕಠಿಣತೆಗಳನ್ನು ಮತ್ತು ಸಂಕೀರ್ಣತೆಗಳನ್ನು ಒತ್ತಿ ಹೇಳುತ್ತಾರೆ, ಆದರೆ Westನು ಹೀಗೆ ಹೇಳುತ್ತಾನೆ, "ಇದೊಂದು ಸುಲಭವಾಗಿ ಅರ್ಥಮಾಡಿಕೊಳ್ಳಲ್ಪಡುವ ಅಧ್ಯಾಯವಾಗಿದೆ."[57] ನಾವು Westನ ರೀತಿಯ ನಿರ್ಧಾರಕ್ಕೆ ಬರದೆ ಇರಬಹುದು, ಆದರೆ ವಾಕ್ಯಭಾಗದ ಪ್ರಮುಖ ಅಂಶಗಳು ಸ್ಪಷ್ಟವಾಗಿವೆ ಎಂಬುದನ್ನಂತೂ ನಾವು ಒಪ್ಪಿಕೊಳ್ಳುತ್ತೇವೆ:

1. ಕ್ರೈಸ್ತರು ಒಂದು ಯುದ್ಧದಲ್ಲಿ ಇದ್ದಾರೆ; ಅದೊಂದು ನಿಜವಾದ ಯುದ್ಧ - ಅದು ಅತ್ಯಂಥ ಪ್ರಬಲ ಹೋರಾಟವನ್ನು ನೀಡಬಲ್ಲ ವೈರಿಯಾಗಿರುವ ಸೈತಾನನೊಂದಿಗಿನ ಯುದ್ಧ.
2. ಆ ಯುದ್ಧವನ್ನು ಗೆಲ್ಲಬೇಕಾದರೆ, ಕ್ರೈಸ್ತರು ತಮಗೆ ಸಾಧ್ಯವಾದಷ್ಟು ಉತ್ತಮ ಪ್ರಯತ್ನವನ್ನು ಪಡಬೇಕು.
3. ಅಂತಿಮವಾಗಿ, ಕ್ರೈಸ್ತರು ಯೇಸುವಿನ ಮೂಲಕವಾಗಿ ಮಾತ್ರವೇ ಗೆಲ್ಲಬಲ್ಲರು.

ನಾವು ಅಧ್ಯಾಯದ ಮುಖ್ಯ ಪದವನ್ನು ಎಂದಿಗೂ ಮರೆಯಬಾರದು: "ಅವರು ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು [ಸೈತಾನ] ಜಯಿಸಿದರು" (ವ. 11).

# ಅನ್ವಯಿಸುವಿಕೆ

## ಒಬ್ಬ ಸ್ತ್ರೀ, ಒಂದು ಘಟಸರ್ಪ, ಮತ್ತು ಒಂದು ಮಗು (ಅಧ್ಯಾಯ 12)

12ನೇ ಅಧ್ಯಾಯದ ಮೇಲಿನ ಸಂದೇಶವೊಂದಕ್ಕೆ ನೀಡಬಹುದಾದ ಅತ್ಯಂಥ ಸಾಮಾನ್ಯವಾದ ಶೀರ್ಷಿಕೆ ಎಂದರೆ "ಒಬ್ಬ ಸ್ತ್ರೀ, ಒಂದು ಘಟಸರ್ಪ, ಮತ್ತು ಒಂದು ಮಗು," ಪದಗಳು ವ್ಯತ್ಯಾಸವಾಗುವ ಕ್ರಮದಲ್ಲಿ ಜೋಡಿಸಲ್ಪಟ್ಟಿವೆ. 12ನೇ ಅಧ್ಯಾಯದಕ್ಕೆ ಒಂದು ಸಂಭಾವ್ಯ ಶೀರ್ಷಿಕೆಯೆಂದರೆ "ಭೂಗ್ರಹದ ಮೇಲೆ ಜೀವಂತವಾಗಿಯೂ ಚಟುವಟಿಕೆಯಿಂದಲೂ ಇರುವದು," ಸೈತಾನನ್ನು ಸೂಚಿಸುವದಾಗಿದೆ. ಅಲ್ಲದೆ ನೀವು "ಸಾರ್ವಜನಿಕರ ವೈರಿ ನಂಬರ್ 1" ಅಥವಾ "ಕ್ರೈಸ್ತರ ವೈರಿ ನಂಬರ್ 1" ಎಂಬ ಪದಗುಚ್ಛವನ್ನು ಸಹ ಬಳಸಬಹುದು.

W. B. Westನು 12ನೇ ಅಧ್ಯಾಯವನ್ನು "ಸಮತೋಲನದಲ್ಲಿ ಗಮ್ಯತೆ"[58] ಎಂದು ಕರೆದರೆ, Robert Mulhollandನು ಈ ಅಧ್ಯಾಯದಿಂದ ಆರಂಭಗೊಳ್ಳುವ ಈ ವಿಭಾಗಕ್ಕೆ "ದೊಡ್ಡ ಚಿತ್ರಣ"[59] ಎಂದು ಹೆಸರಿಟ್ಟನು. ಇನ್ನು ಕೆಲವರು 12ನೇ ಅಧ್ಯಾಯವನ್ನು "ನಮ್ಮ ದೃಷ್ಟಿಯ ಆಚೆ ನಡೆಯುವ ಆತ್ಮೀಕ ಹೋರಾಟ" ಅಥವಾ "ಪರದೆಯ ಹಿಂದೆ ನಡೆಯುವ ಯುದ್ಧ" ಎಂದು ಕರೆಯುತ್ತಾರೆ. Michael Wilcockನು ಹೇಳಿದ್ದೇನೆಂದರೆ 12ನೇ ಅಧ್ಯಾಯದಿಂದ ಆರಂಭಗೊಳ್ಳುವ ವಿಭಾಗವು "ಇತಿಹಾಸದ ನಾಟಕ"[60] ಎಂಬದೆ. ಆ ಚರ್ಚೆಯಾಂಶವನ್ನು ಬಳಸಿಕೊಂಡು, ನೀವು ಅಧ್ಯಾಯದ ಈ ವಿಭಾಗಗಳನ್ನು ಮಾಡಿಕೊಳ್ಳಬಹುದು: (1) ಪಾತ್ರದಾರಿಗಳು (ವಚನಗಳು 1-3, 5); (2) ಕಥಾಹಂದರ (ವಚನಗಳು 1-6); (3) ನಾಟಕ (ವಚನಗಳು 7-16); (4) ಪೀಠಿಕೆ (ವ. 17). Merrill Tenneyನು 12ನೇ ಅಧ್ಯಾಯವನ್ನು ಮೂರು "f" ಗಳಿಂದ ಸಾರಾಂಶಗೊಳಿಸುತ್ತಾನೆ: ಫೋಯ್ (ವೈರಿ), ಫೈಟ್ (ಕಾದಾಟ), ಮತ್ತು ಫಿನಿಶ್ (ಮುಕ್ತಾಯ).[61]

Warren Wiersbeನು 12 ಮತ್ತು 13 ಎರಡೂ ಅಧ್ಯಾಯಗಳನ್ನು ಸೇರಿಸಿ "ಭಯಂಕರ ತ್ರಿಮೂರ್ತಿಗಳು"[62] ಎಂಬ ಶೀರ್ಷಿಕೆಯನ್ನು ಕೊಟ್ಟನು. William Hendriksenನು ಮೆಸ್ಸೀಯನನ್ನು ಈ ಲೋಕದೊಳಗೆ ಬರದಂತೆ ತಡೆಯುವದಕ್ಕೆ ಸೈತಾನನು ಮಾಡಿರುವ

ಪ್ರಯತ್ನಗಳ ಕುರಿತಾಗಿ ಬರೆದಿರುವ ಟಿಪ್ಪಣಿಗಳು ಸ್ವತಃ ಒಂದು ಸಂದೇಶವಾಗಿರುತ್ತವೆ.[63]

## ಸ್ತ್ರೀ ಮತ್ತು ಜಾರಳು (ಅಧ್ಯಾಯ 12)

12ನೇ ಅಧ್ಯಾಯದಲ್ಲಿನ ಸ್ತ್ರೀಯ ಸ್ವಾಭಾವಿಕವಾದ ಸೌಂದರ್ಯವು 17ನೇ ಅಧ್ಯಾಯದಲ್ಲಿರುವ ಜಾರಳ ಕೃತಕ ಹೊಳಪಿಗೆ ತದ್ವಿರುದ್ಧವಾಗಿ ನಿಲ್ಲುತ್ತದೆ. ನೀವು ಆ ವಿರುದ್ಧ ಹೋಲಿಕೆಯನ್ನು ಎತ್ತಿ ತೋರಿಸುವದಕ್ಕೆ ಒಂದು ನಕ್ಷೆಯನ್ನು ಸಿದ್ಧಪಡಿಸಿಕೊಳ್ಳಬಹುದು. ನಿಮಗೆ ಆರಂಭಗೊಳಿಸಲು ಕೆಲವೊಂದು ಉಪಾಯಗಳು ಇಲ್ಲಿವೆ: (1) ಮೊದಲಿನವಳು ಬೆಳಕಿನಲ್ಲಿ ಜೀವಿಸುತ್ತಾಳೆ; ಎರಡನೆಯವಳು ಕತ್ತಲೆಯಲ್ಲಿ ಜೀವಿಸುವವಳು. (2) ಮೊದಲಿನವಳು ಪರಲೋಕಿಕವಾದವಳು; ಎರಡನೆಯವಳು ಭೂಲೋಕದವಳು. (3) ಮೊದಲಿನವಳು ವೇದನೆಯಲ್ಲಿ ತುಡಿಯುತ್ತಿರುತ್ತಾಳೆ; ಎರಡನೆಯವಳು ಅಮಲೇರಿರುತ್ತಾಳೆ. (4) ಮೊದಲಿನವಳು ರಕ್ತಸಾಕ್ಷಿಗಳ ತಾಯಿ; ಎರಡನೆಯವಳು ಜಾರರಿಗೆ ತಾಯಿ. ಮೊದಲಿನವಳು ಒಳ್ಳೇದನ್ನು ಉಂಟು ಮಾಡುತ್ತಾಳೆ; ಎರಡನೆಯವಳು ಕೆಟ್ಟದ್ದನ್ನು ಉಂಟು ಮಾಡುತ್ತಾಳೆ. (6) ಮೊದಲಿನವಳನ್ನು ಸೈತಾನನು ಬೆನ್ನಟ್ಟಿ ಕಾಡುತ್ತಿರುತ್ತಾನೆ; ಎರಡನೆಯವಳು ಸೈತಾನನೊಂದಿಗೆ ಹೊಂದಿಕೊಂಡಿರುತ್ತಾಳೆ. (7) ಮೊದಲಿನವಳು ಸಹಾಯಕಳಂತೆ ಕಾಣಿಸುತ್ತಾಳೆ; ಆದರೆ ಬದುಕುಳಿಯುತ್ತಾಳೆ; ಎರಡನೆಯವಳು ಶಕ್ತಿಶಾಲಿಯ ಹಾಗೆ ತೋರುತ್ತಾಳೆ, ಆದರೆ ನಾಶಗೊಳಿಸಲ್ಪಡುತ್ತಾಳೆ.

## ಪರಲೋಕದಲ್ಲಿ ಯುದ್ಧ (12:7-12)

ಈ ವಾಕ್ಯಭಾಗಕ್ಕೆ ಸಾಮಾನ್ಯವಾಗಿರುವ ಒಂದು ಶೀರ್ಷಿಕೆಯೆಂದರೆ "ಪರಲೋಕದಲ್ಲಿ ಯುದ್ಧ ನಡೆಯುವದು - ಭೂಮಿಯ ಮೇಲೆ ವಿಪತ್ತು."[64] ಇನ್ನೊಂದು ಸಂಭಾವ್ಯ ಶೀರ್ಷಿಕೆಯೆಂದರೆ "ಜಯದ ಗುಟ್ಟು." Albert Baldingerನು ಅದಕ್ಕೆ ಈ ಶೀರ್ಷಿಕೆಯನ್ನು ಕೊಟ್ಟನು "ಒಂದು ಪವಿತ್ರ ಯುದ್ಧ."[65] ನೀವು ಈ ಅರ್ಥೈಸುವ ದಾರಿಯನ್ನು ಅನುಸರಿಸುವದಾದರೆ, ನೀವು 12ನೇ ಅಧ್ಯಾಯದಲ್ಲಿನ ಯುದ್ದ ಹಾಗೂ ಭೂಮಿಯ ಮೇಲೆ ನಡೆಯುವ "ಪವಿತ್ರ ಯುದ್ಧಗಳು" ಎಂಬುದರೊಂದಿಗೆ ವಿರುದ್ಧ ಹೋಲಿಕೆ ಮಾಡುವದರೊಂದಿಗೆ ಆರಂಭಿಸಬಹುದು.

ಒಂದು ಅತ್ಯುತ್ತಮವಾದ ಪೂರಕ ಸಂದೇಶವು 11ನೇ ವಚನದ ಮೇಲೆ ಆಧಾರ ಮಾಡಿಕೊಂಡು ರಕ್ತದ ಮೂಲಕವಾದ ರಕ್ಷಣೆಯ ಕುರಿತು ಒತ್ತಿ ಹೇಳಬಹುದಾಗಿದೆ. ಈ ಸಂದೇಶವು ಆದಿಯಿಂದಲೂ ದೇವರ ಯೋಜನೆಯಲ್ಲಿ ರಕ್ತದ ಬಳಕೆಯ ಮೇಲೆ, ನಮಗಾಗಿ ಯೇಸುವು ಶಿಲುಬೆಯ ಮೇಲೆ ಮಾಡಿದ ಕಾರ್ಯದ ಮೇಲೆ, ಮತ್ತು ರಕ್ತದಿಂದ ನಾವು ಹೇಗೆ ಪ್ರಯೋಜನವನ್ನು ಪಡೆಯುತ್ತೇವೆಂಬುದರ ಮೇಲೆ ಮುಖ್ಯ ಗಮನವನ್ನು ಹರಿಸಬಹುದು. ಅದಕ್ಕೆ ಒಂದು ಸಂಭಾವ್ಯ ಶೀರ್ಷಿಕೆಯು ಹೀಗಿರಬಲ್ಲದು, "ಶಿಲುಬೆಯ ದಾರಿಯು ಮನೆಯ ಕಡೆಗೆ ನಡಿಸುತ್ತದೆ." ನೀವು ಈ ವಿಚಾರವನ್ನು ಬಳಸುವದಾದರೆ, ದೀಕ್ಷಾಸ್ನಾನದೊಂದಿಗೆ, ಕರ್ತನ ಭೋಜನ, ಮತ್ತು ಸಭೆಯ ಸಂಗಡ ಕ್ರಿಸ್ತನ ರಕ್ತಕ್ಕಿರುವ ಸಂಬಂಧವನ್ನು ನಿಶ್ಚಯವಾಗಿಯೂ ಒತ್ತಿ ಹೇಳಿರಿ.

## ನಿಮ್ಮ ವೈರಿಯನ್ನು ತಿಳಿದುಕೊಳ್ಳಿರಿ (12:7-9)

ಮೊದಲನೆಯ ವಿಶ್ವ ಯುದ್ಧವು ಆರಂಭಗೊಂಡ ವೇಳೆ, ಲಂಡನ್ ಪಟ್ಟಣದಲ್ಲಿದ್ದ ಯುದ್ಧ ಸಚಿವಾಲಯವು ಆಫ್ರಿಕಾದಲ್ಲಿ ಯಾರೂ ಹೋಗಲಾಗದಂತಹ ಸ್ಥಳಗಳಲ್ಲಿದ್ದ ಒಂದು ಬ್ರಿಟಿಷ್

ಸೇನೆಯ ಹೊರ ಪಡೆಯೊಂದಕ್ಕೆ ನಿಗೂಢ ಲಿಪಿಯುಳ್ಳ ಸಂದೇಶವನ್ನು ಕಳಹಿಸಿ ಕೊಟ್ಟರು. ಸಂದೇಶವು ಹೀಗಿತ್ತು: "ಯುದ್ಧವು ಆರಂಭಗೊಂಡಿತು. ನಿಮ್ಮ ಜಿಲ್ಲೆಯಲ್ಲಿರುವ ಎಲ್ಲಾ ವೈರಿ ಪರದೇಶಿಗಳನ್ನು ಬಂಧಿಸಿರಿ." ಸಚಿವಾಲಯಕ್ಕೆ ಒಂದು ತಕ್ಷಣದ ಪ್ರತ್ಯುತ್ತರ ಸಿಕ್ಕಿತು: "ಆರು ಬೆಲ್ಜಿಯಮ್ ವಾಸಿಗಳನ್ನು, ನಾಲ್ವರು ಜರ್ಮನ್ನರನ್ನು, ನಾಲ್ವರು ಫ್ರೆಂಚ್-ವ್ಯಕ್ತಿಗಳನ್ನು, ಇಬ್ಬರು ಇಟಲಿಯದವರನ್ನು, ಮೂವರು ಅಸ್ಟ್ರೇಲಿಯನ್ನರನ್ನು, ಮತ್ತು ಅಮೆರಿಕದ ಒಬ್ಬನನ್ನು ಬಂದಿಸಲಾಗಿದೆ. ದಯವಿಟ್ಟು ನಾವು ಯಾರೊಂದಿಗೆ ಯುದ್ಧದಲ್ಲಿದ್ದೇವೆಂಬುದನ್ನು ಶೀಘ್ರವೇ ತಿಳಿಸಿರಿ."[66] ನೀವು ಒಂದು ಯುದ್ಧದಲ್ಲಿರುವ ವೇಳೆ, ನಿಮ್ಮ ವೈರಿಯು ಯಾರೆಂಬುದನ್ನು ತಿಳಿದುಕೊಂಡರೆ ಸಹಾಯವಾಗುವದು!

## ಸೈತಾನನ್ನು ಎದುರಿಸಿರಿ (12:7-9)

ಆದಿ ಕ್ರೈಸ್ತರಿಗೆ ಅವರನ್ನು ತೊಂದರೆಗೆ ಜವಾಬ್ದಾರ ರೋಮನ್ ಸಾಮ್ರಾಜ್ಯವಲ್ಲ, ಆದರೆ ಸೈತಾನನೇ ಎಂಬುದು ತಿಳಿದಿರುವದು ಅಗತ್ಯವಾಗಿತ್ತು. ನಮಗೆ ಏನೇ ಸಂಕಷ್ಟಗಳು ಬಂದರೂ ಸರಿಯೇ, ಅವುಗಳ ಹಿಂದಿರುವ ಚಲಿಸುವ ಶಕ್ತಿಯು ಸೈತಾನನೇ ಎಂಬುದನ್ನು ನಾವು ಅರ್ಥಮಾಡಿಕೊಳ್ಳತಕ್ಕದ್ದು.

ನಮ್ಮ ವೈರಿಯನ್ನು ಹಗುರವಾಗಿ ಪರಿಗಣಿಸದಿರೋಣ. ಆತನು ಪ್ರಬಲ ಎದುರಾಳಿಯಾಗಿದ್ದಾನೆ. ಅದೇ ವೇಳೆಯಲ್ಲಿ, ಆತನಿಗೆ ನಮ್ಮನ್ನು ಹೆದರಿಸುವಂತೆ ಅವಕಾಶ ಕೊಡಬಾರದು. ದೇವರು ಗಂಡು ಮಗುವಿಕೆ ಸಹಾಯ ಮಾಡಿದನು, ಸ್ತ್ರೀಗೆ ಸಹಾಯ ಮಾಡಿದನು, ಮತ್ತು ಆತನು ನಮಗೆ ಸಹಾಯ ಮಾಡುವನು - ನಾವು ಆತನಿಗೆ ಸಮೀಪದಲ್ಲಿದ್ದು ಆತನಲ್ಲಿ ಭರವಸವಿಡುವದಾದರೆ ಸಹಾಯ ಮಾಡುವನು. ಯಾಕೋಬ 4:7 ಹೀಗೆ ಹೇಳುತ್ತದೆ, "ಸೈತಾನನನ್ನು ಎದುರಿಸಿರಿ, ಆಗ ಆತನು ನಿಮ್ಮನ್ನು ಬಿಟ್ಟು ಓಡಿಹೋಗುವನು." ಆ ವಿರೋಧಿಸುವಿಕೆಗೆ ಮುಖ್ಯವಾಗಿರುವ ಸಂಗತಿಯನ್ನು ವಚನದ ಮೊದಲನೆಯ ಭಾಗವು ತಿಳಿಯಪಡಿಸುತ್ತದೆ: "[ನೀವು] ದೇವರಿಗೆ ಒಳಗಾಗಿರಿ." ಪೌಲನು ಹೀಗೆ ಹೇಳಿದನು, "ಸೈತಾನನಿಗೆ ಅವಕಾಶ ಕೊಡಬೇಡಿರಿ" (ಎಫೆಸ 4:27; KJV). ನಾವು ನಮ್ಮ ಸ್ವಬಲವನ್ನಲ್ಲದೆ ಕರ್ತನ ಬಲವನ್ನೆ ಆಶ್ರಯಿಸಿಕೊಳ್ಳುವದಾದರೆ (ಎಫೆಸ 6:10), ಆ ಆಜ್ಞೆಗೆ ನಾವು ವಿಧೇಯರಾಗಬಲ್ಲೆವು.

## ನ್ಯಾಯಾಲಯ (12:10)

ಹಲವು ವರ್ಷಗಳ ಹಿಂದೆ, ಒಬ್ಬ ಬೋಧಕನು ಪರಲೋಕದಲ್ಲಿನ ನ್ಯಾಯಾಲಯದ ದೃಶ್ಯವನ್ನು ಚಿತ್ರಿಸುವ ಮೂಲಕ 12:10ನ್ನು ದೃಷ್ಟಾಂತೀಕರಿಸಿದನು. ನ್ಯಾಯಾಧಿಪತಿಯಾದ ದೇವರ ಮುಂದೆ ವಿಚಾರಣೆಗೆ ನಿಂತಿರುವವನು ಒಬ್ಬ ಕ್ರೈಸ್ತನಾಗಿದ್ದನು. ಫಿರ್ಯಾದಿ ವಕೀಲನಾಗಿದ್ದ ಸೈತಾನನು ಕ್ರೈಸ್ತನು ದೋಷಿಯಾಗಿದ್ದ ಉಲ್ಲಂಘನೆಗಳ ದೊಡ್ಡ ಪಟ್ಟಿಯ ಸುರುಳಿಯನ್ನು ಬಿಚ್ಚು ಬಿಟ್ಟಾಗ ಕ್ರೈಸ್ತನ ಮುಖವು ಬಿಳಿಚಿಕೊಂಡಿತ್ತು. ಆಗ, ಪ್ರತಿವಾದಿ ವಕೀಲನಾದ ಯೇಸು ಎದ್ದು ನಿಂತುಕೊಂಡನು ಆತನು ಆರೋಪಿಯ ಪಕ್ಕಕ್ಕೆ ಬಂದು, ಆತನ ಸುತ್ತಲು ತನ್ನ ಬಾಹುಗಳನ್ನು ಹಾಕಿದನು, ಮತ್ತು ಹೀಗೆ ಹೇಳಿದನು, "ಆ ಎಲ್ಲಾ ಅಪರಾಧಗಳಿಗಾಗಿ ಈಗಾಗಲೇ ದಂಡವನ್ನು ಕಟ್ಟಲಾಗಿರುತ್ತದೆ. ಈ ಮನುಷ್ಯನ ಪಾಪಗಳಿಗೋಸ್ಕರ ನಾನು *ಮರಣಿಸಿದೆನು.*" ನ್ಯಾಯಾಧಿಪತಿಯು ಮೇಜಿನ ಮೇಲೆ ತನ್ನ ಕೈ ಸುತ್ತಿಗೆಯನ್ನು ಹೊಡೆದು "ಅಪರಾಧಿಯಲ್ಲ" ಎಂದು ತೀರ್ಪು ಕೊಟ್ಟನು!

ಈ ಕಥೆಯು ಕಾಲ್ಪನಿಕವಾದದ್ದು, ಆದರೆ ಶಾಸ್ತ್ರಗಳಲ್ಲಿ ಸಿಕ್ಕುವಂಥ ನ್ಯಾಯಾಲಯದ ಚಿತ್ರಣದ ಒಂದು ನಮೂನೆಯಾಗಿರುತ್ತದೆ. ದೇವರು "ಎಲ್ಲರಿಗೆ ನ್ಯಾಯಾಧಿಪತಿಯಾಗಿರುವನು" (ಇಬ್ರಿಯ 12:23). ನಾವು ಪಾಪ ಮಾಡುವಾಗ, ನಮಗೆ "ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತನೆಂಬ ಸಹಾಯಕನು ನಮಗಿದ್ದಾನೆ" (1 ಯೋಹಾನ 2:1).

## ರಕ್ತದ ಶಕ್ತಿ (12:11)

ಪ್ರತಿ ವರ್ಷ, ಸಾವಿರಾರು ಜನರು ಹೃದಯಾಘಾತದಿಂದ ಕೊಲ್ಲಲ್ಪಡುತ್ತಾರೆಂದು ಹೇಳಲಾಗುತ್ತದೆ. ಇವರಲ್ಲಿ ಅನೇಕರು ವಾಸ್ತವಿಕದಲ್ಲಿ "ರಕ್ತಾಘಾತ" ಅನುಭವಿಸುತ್ತಾರೆ. ಒಂದಿಲ್ಲಾ ಒಂದು ಕಾರಣದಿಂದಾಗಿ, ರಕ್ತವು ಹೃದಯ, ಮೂತ್ರಪಿಂಡಗಳು, ಶ್ವಾಸಕೋಶಗಳು, ಅಥವಾ ಮೆದುಳಿಗೆ ಹೋಗುವದಕ್ಕೆ ಸಾಧ್ಯವಾಗುವದಿಲ್ಲ. ನಮ್ಮ ಅತಿ ಮುಖ್ಯವಾದಂಥ ಅಂಗಾಂಗಳಿಗೆ ರಕ್ತದ ಸರಬರಾಜು ಸರಿಯಾಗಿ ಆಗತಕ್ಕದ್ದು, ಇಲ್ಲವಾದರೆ ನಾವು ಸಾಯುತ್ತೇವೆ. ಅದೇ ರೀತಿಯಲ್ಲಿಯೇ, ನಾವು ಕ್ರಿಸ್ತನ ಸಂಗಡ ಶಾಶ್ವತವಾಗಿ ಜೀವಿಸುವವರಾಗಿದ್ದಲ್ಲಿ ನಮ್ಮ ಆತ್ಮಗಳು ನಿರಂತರವಾಗಿ ಆತನ ರಕ್ತದಿಂದ ಶುದ್ಧಮಾಡಲ್ಪಡತಕ್ಕದ್ದು.[67]

## ದಾಳಿಗೆ ಸಿಲುಕಿರುವ ನಂಬಿಕೆ (12:13-17)

12:13-17ರ ಆಧಾರಿತ ಒಂದು ಸಂದೇಶಕ್ಕೆ "ದಾಳಿಗೆ ಸಿಲುಕಿರುವ ನಂಬಿಕೆ" ಎಂಬ ಶೀರ್ಷಿಕೆಯನ್ನಿಡಬಹುದು. ನಮ್ಮ ನಂಬಿಕೆಯು ದಾಳಿಗೆ ಸಿಲುಕಿಕೊಳ್ಳುವಾಗ ನಂಬಿಕೆಯು ನಿಜವಾದದ್ದೋ ಇಲ್ಲವೋ ಎಂಬುದಕ್ಕೆ ಅದೊಂದು ಉತ್ತಮ ಪರೀಕ್ಷೆಯಾಗಿರುತ್ತದೆ. ಕೆಲವು ಸಾರಿ ಅತಿ ಧೈರ್ಯಶಾಲಿಗಳಂತೆ ತೋರುವವರು ದಾಳಿಗೆ ಸಿಲುಕಿಕೊಳ್ಳುವಾಗ ಕುಸಿದು ಹೋಗುವರು, ಅದೇ ವೇಳೆಯಲ್ಲಿ ಹೇಡಿಗಳಂತಿರುವವರು ತಮ್ಮೊಳಗೆ ಅಡಗಿರುವ ಶಕ್ತಿಯ ಮೂಲಗಳನ್ನು ಕಂಡುಕೊಂಡು ಅತ್ಯಂಥ ಶ್ರೇಷ್ಠವಾದ ಎದೆಗಾರಿಕೆಯನ್ನು ತೋರಿಸುತ್ತಾರೆ.

ಈ ವಚನಗಳಿಗೆ ಹಲವಾರು ಲೇಖಕರಿಂದ ಸಲಹೆ ಮಾಡಲ್ಪಟ್ಟಿರುವ ಇನ್ನೊಂದು ಶೀರ್ಷಿಕೆ ಎಂದರೆ "ಮೂರು-ಸಾರಿ ಸೋತವನು!" ಒಂದು ತಪ್ಪನ್ನು ಮಾಡಿದವನು ಪುನಃ ಅದನ್ನು ಮಾಡದಂತೆ ತಡೆಯುವದಕ್ಕಾಗಿ ಅಮೆರಿಕದ ದಂಡ ಸಂಹಿತೆಯು ಒಬ್ಬ ವ್ಯಕ್ತಿಯು ಗಂಭೀರ ತಪ್ಪುಗಳಲ್ಲಿ ಮೂರು ಸಾರಿ ತಪ್ಪಿತಸ್ಥನೆಂದು ಸಾಭಿತುಗೊಂಡರೆ ಅವನು ತನ್ನಿಂದ ತಾನೇ ಜೈಲು ಪಾಲಾಗುವನೆಂದು ಹೇಳುತ್ತದೆ. ಒಬ್ಬ "ಮೂರು-ಸಾರಿ ಸೋತವನು" ವೈಯಕ್ತಿಕ ವಿಫಲತೆಯ ವ್ಯಕ್ತೀಕರಣವಾಗಿರುತ್ತಾನೆ. 12ನೇ ಅಧ್ಯಾಯದಲ್ಲಿ ಸೈತಾನನು ಮೂರು ಸಾರಿ ಸೋಲುತ್ತಾನೆ - ಅಂದರೆ, ತನ್ನ ಪ್ರಯತ್ನಗಳಲ್ಲಿ ವಿಫಲನಾಗುತ್ತಾನೆ.

## ಸ್ತ್ರೀಯ ತಪ್ಪಿಸಿಕೊಳ್ಳುವಿಕೆ (12:14)

12ನೇ ಅಧ್ಯಾಯವು ಸಹಜವಾಗಿ ಕಣ್ಣಿಗೆ ಕಟ್ಟಿದಂಥ ಘಟನಾವಳಿಗಳನ್ನು ಒಳಗೊಂಡಿರುತ್ತದೆ. ಒಂದು ಕ್ಷಣ, ನಿಮ್ಮನ್ನು ಆ ಗರ್ಭಿಣಿ ಸ್ತ್ರೀಯ ಸ್ಥಾನದಲ್ಲಿ ಊಹಿಸಿಕೊಳ್ಳಿರಿ. ನಿಮ್ಮ ಮಗುವಿನ ಹೆರಿಗೆ ವೇದನೆಯಲ್ಲಿ ಗೋಳಾಡುತ್ತಿರುವ ವೇಳೆ, ಘಟಸರ್ಪನು ಮಗುವನ್ನು ನುಂಗುವದಕ್ಕೆ ಸಿದ್ಧವಾಗಿ ನಿಂತಿದ್ದಾನೆ; ಆದರೆ ಆ ಜೀವಿಯು ಹೊಸದಾಗಿ ಹುಟ್ಟಿದ ಕೂಸಿನ ಕಡೆಗೆ ಜಿಗಿಯುವಷ್ಟರಲ್ಲಿ ಕೂಸು ಮೇಲಕ್ಕೆ ಹಾರಿ ಮೇಘಗಳನ್ನು ಹಾದು ಪರಲೋಕದೊಳಗೆ ಸಾಗುತ್ತದೆ. ಕೋಪಿಸಿಕೊಂಡ ಘಟಸರ್ಪನು ನಿಮ್ಮ ಕಡೆಗೆ ತಿರುಗಿಕೊಳ್ಳುವನು. ಆತನ ಅನೇಕ ತಲೆಗಳು ಹಿಂದೆ ಮತ್ತು ಮುಂದೆ ಅಲ್ಲಾಡುತ್ತಾ, ಆತನ ಅನೇಕ ಕಣ್ಣುಗಳು ನಿಮ್ಮ ಮೇಲೆಯೇ

ನೆಟ್ಟಿವೆ, ಮತ್ತು ಆತನ ಸರ್ಪದಂಥ ನಾಲಿಗೆಯು ಹೊರಗೆ ಮತ್ತು ಒಳಗೆ ಬಂದು ಹೋಗುತ್ತಿದೆ, ಆ ಮೃಗವು ನಿಮಗೆ ಸಮೀಪವಾಗುತ್ತಲೇ ಹೋಗಿ ಕೊನೆಗೆ ಆತನ ಇರುವಿಕೆಯ ದುರ್ವಾಸನೆಯನ್ನು ನೀವು ಮೂಸುವಿರಿ ಮತ್ತು ಆತನ ಬೆಚ್ಚನೆಯ ಉಸಿರು ನಿಮಗೆ ಬಡಿಯುವದು. ಬಳಲಿ ಸಹಾಯಕವಾಗಿರುವ ನೀವು, ಅಲ್ಲಿಂದ ತಪ್ಪಿಸಿಕೊಳ್ಳುವದು ಹೇಗೆ ಸಾಧ್ಯವಿರುತ್ತದೆ?

ಬಳಿಕ, ಒಂದು ಆಶ್ಚರ್ಯಕರ ಸಂಗತಿಯು ಸಂಭವಿಸುತ್ತದೆ: ನಿಮ್ಮ ಹೆಗಲ ಚಪ್ಪಟೆ ಮೂಳೆಗಳ ನಡುವೆ ಒಂದು ಜುಮ್ಮೆನ್ನಿಸುವ ಅನುಭವವಾಗುತ್ತದೆ. ನಿಮ್ಮ ಹೆಗಲಿನ ಮೇಲೆ ನೋಡಿಕೊಳ್ಳುವಾಗ, ಅಲ್ಲಿ ಹದ್ದಿನ ರೆಕ್ಕೆಗಳಂತೆ ನಿಮಗೆ ರೆಕ್ಕೆಗಳಿರುತ್ತವೆ! ಪ್ರಾಯೋಗಿಕ ಸಿದ್ಧತೆಯಾಗಿ, ನೀವು ನಿಮ್ಮ ಭುಜದ ಮೇಲ್ಭಾಗದಲ್ಲಿನ ಸ್ನಾಯುಗಳನ್ನು ಉದ್ವೇಗಗೊಳಿಸುವಾಗ, ರೆಕ್ಕೆಗಳು ಹರಡಿಕೊಳ್ಳುವಂತಾಗುತ್ತದೆ. ನೀವು ಸ್ನಾಯುಗಳನ್ನು ವಿಶ್ರಮಿಸುವಂತೆ ಮಾಡುವಾಗ, ರೆಕ್ಕೆಗಳು ಮಡಚಿಕೊಳ್ಳುತ್ತವೆ. ಅದೇ ಹೊತ್ತಿಗೆ ರಾಕ್ಷಸ ಮೃಗವು ಜಿಗಿಯುತ್ತದೆ. ತಕ್ಷಣವೇ, ನೀವು ನಿಮ್ಮ ರೆಕ್ಕೆಗಳನ್ನು ಹರಡಿ ಮೇಲಕ್ಕೆ ಜಿಗಿಯುತ್ತೀರಿ. ಒಂದು ಕ್ಷಣಕ್ಕೆ, ನೀವು ಆತನ ಹಿಡಿತದೊಳಗೆ ಹಿಂದಕ್ಕೆ ಬಿದ್ದು ಬಿಡುವಿರೆನೋ ಎಂದು ನಿಮಗೆ ಅನ್ನಿಸುವದು, ಆದರೆ ಆಗ ನೀವು ಹಾರುವದಕ್ಕೆ ಆರಂಭಿಸುವಿರಿ! ಆತನ ಬೃಹತ್ ಬಾಲದಿಂದ ಆಕಾಶದ ನಕ್ಷತ್ರಗಳೊಳಗೆ ಮೂರರಲ್ಲಿ ಒಂದು ಭಾಗವನ್ನು ಹೊಡೆದು ಉರುಳಿಸಿದ್ದ ಪ್ರಕಾರವೇ (12:4), ಘಟಸರ್ಪನು ನಿಮ್ಮನ್ನು ಆಕಾಶದಿಂದ ಹೊಡೆದು ಉರುಳಿಸುವದಕ್ಕೆ ಪ್ರಯತ್ನಿಸುತ್ತಾನೆ, ಆದರೆ ನೀವು ಆತನಿಗಿಂತ ಮೇಲಕ್ಕೆ ಬಹು ಎತ್ತರವಾಗಿ ಹಾರಿ ಹೋಗುವಿರಿ. ಆಗ, ಆತನಿಂದ ದೂರಕ್ಕೆ ಹೋದವರಾಗಿ ಹೋದ ಬಳಿಕ ನಿಮಗೊಂದು ಸುರಕ್ಷಿತ ಸ್ಥಳವು ಕಾಣಿಸುತ್ತದೆ. ನಿಮ್ಮ ಹೊಸ ರೆಕ್ಕೆಗಳನ್ನು ಬಡಿಯುತ್ತಾ ನೀವು ಆ ಆಶ್ರಯ ಸ್ಥಳದ ಕಡೆಗೆ ಸಾಗುವಿರಿ. ಈ ವಾಕ್ಯಭಾಗವು ದೇವರ ಕಾಪಾಡುವಿಕೆ ಹಾಗೂ ಒದಗಿಸುವಿಕೆಯನ್ನು ಚಿತ್ರಿಸುವ ಒಂದು ಗಮನ ಸೆಳೆಯುವ ವಿಧವಾಗಿರುವದಿಲ್ಲವೋ?

## ಘಟಸರ್ಪನನ್ನು ಎದುರಿಸಿ ನಿಲ್ಲುವದು (12:17)

ಸೈತಾನನು ನಮ್ಮನ್ನು ನಾಶಮಾಡಬೇಕೆಂಬ ಕಡ್ಡಾಯವನ್ನು ಹೊಂದಿದ್ದಾನೆಂಬುದನ್ನು ಆಲೋಚಿಸುವಾಗ, ಆತನು ಹಗಲಿರುಳು ಮಾಡುವ ದಾಳಿಗಳನ್ನು ಎದುರಿಸಿ ನಿಲ್ಲುವದು ನಮಗೆ ಹೇಗೆ ಸಾಧ್ಯವಾಗುತ್ತದೆ? ಅದನ್ನು ಕರ್ತನ ಸಹಾಯದಿಂದ ಮಾತ್ರವೇ ಮಾಡುವದಕ್ಕೆ ಸಾಧ್ಯವಿರುತ್ತದೆ. ಮೋಶೆಯ ಮಾತುಗಳು ಆತನು ಮೊದಲು ನುಡಿದ ಸಂದರ್ಭದಲ್ಲಿ ಹೇಗೆ ಪ್ರಸ್ತುತವಾಗಿದ್ದವೋ ಈ ದಿನವೂ ಅಷ್ಟೇ ಪ್ರಸ್ತುತವಾಗಿರುತ್ತವೆ: "ನೀವು ಶೂರರಾಗಿ ಧೈರ್ಯದಿಂದಿರಿ; ... ಅಂಜಬೇಡಿರಿ, ಕಳವಳಪಡಬೇಡಿರಿ. ನಿಮ್ಮ ದೇವರಾದ ಯೆಹೋವನೇ ನಿಮ್ಮ ಸಂಗಡ ಇರುತ್ತಾನಲ್ಲಾ; ಆತನು ನಿಮ್ಮನ್ನು ಕೈಬಿಡುವದಿಲ್ಲ, ಅಪಜಯಕ್ಕೆ ಗುರಿಪಡಿಸುವದೇ ಇಲ್ಲ" (ಧರ್ಮೋಪದೇಶಕಾಂಡ 31:6).

ಇನ್ನೊಂದು ಕಡೆಯಲ್ಲಿ, ನಾವು ಏನೂ ಮಾಡದೆ ಸುಮ್ಮನೆ ಕುಳಿತುಕೊಂಡು ಕರ್ತನು ಎಲ್ಲವನ್ನೂ ಮಾಡುವನೆಂದು ಕಾದು ಕುಳಿತುಕೊಳ್ಳಲು ಸಾಧ್ಯವಿಲ್ಲ. ನಾವು ನಮ್ಮ ಪಾತ್ರವನ್ನು ನಿರ್ವಹಿಸಬೇಕೆಂದು ಆತನು ಬಯಸುತ್ತಾನೆ. ನಾವು ಒಂದು ಆತ್ಮೀಕ ಯುದ್ಧದಲ್ಲಿ ತೊಡಗಿಸಿಕೊಂಡಿದ್ದೇವಾದ್ದರಿಂದ, ನಾವು ಆಯುಧಗಳನ್ನು ಧರಿಸಿಕೊಂಡು ಹೋರಾಟವನ್ನು ಆರಂಭಿಸತಕ್ಕದ್ದು:

ಕಡೇ ಮಾತೇನಂದರೆ, ನೀವು ಕರ್ತನನ್ನೂ ಆತನ ಅತ್ಯಧಿಕವಾದ ಶಕ್ತಿಯನ್ನೂ

ಆಶ್ರಯಿಸಿಕೊಂಡವರಾಗಿ ಬಲಗೊಳ್ಳಿರಿ. ಸೈತಾನನ ತಂತ್ರೋಪಾಯಗಳನ್ನು ನೀವು ಎದುರಿಸಿ ನಿಲ್ಲುವದಕ್ಕೆ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ. ನಾವು ಹೋರಾಡುವದು ಮನುಷ್ಯ ಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಿಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ. ಆದದರಿಂದ ಕಠಿನ ಯುದ್ಧವು ನಡೆಯುವ ದಿವಸದಲ್ಲಿ ಆ ವೈರಿಗಳನ್ನು ಎದುರಿಸುವದಕ್ಕೂ ಮಾಡಬೇಕಾದದ್ದೆಲ್ಲವನ್ನು ಮಾಡಿ ಜಯಶಾಲಿಗಳಾಗಿ ನಿಲ್ಲುವದಕ್ಕೂ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ತೆಗೆದುಕೊಳ್ಳಿರಿ. ಸತ್ಯವೆಂಬ ನಡುಕಟ್ಟನ್ನು ಕಟ್ಟಿಕೊಂಡು ನೀತಿಯೆಂಬ ವಜ್ರಕವಚವನ್ನು ಧರಿಸಿಕೊಂಡು ಸಮಾಧಾನದ ವಿಷಯವಾದ ಸುವಾರ್ತೆಯನ್ನು ತಿಳಿಸುವದರಲ್ಲಿ ಸಿದ್ಧವಾದ ಮನಸ್ಸೆಂಬ ಕೆರಗಳನ್ನು ಮೆಟ್ಟಿಕೊಂಡು ನಿಲ್ಲಿರಿ. ಮತ್ತು ನಂಬಿಕೆಯೆಂಬ ಗುರಾಣಿಯನ್ನು ಹಿಡುಕೊಳ್ಳಿರಿ; ಅದರಿಂದ ನೀವು ಕೆಡುಕನ ಅಗ್ನಿಬಾಣಗಳನ್ನೆಲ್ಲಾ ಆರಿಸುವದಕ್ಕೆ ಶಕ್ತರಾಗುವಿರಿ. ಇದಲ್ಲದೆ ರಕ್ಷಣೆಯೆಂಬ ಶಿರಸ್ತ್ರಾಣವನ್ನು ಇಟ್ಟುಕೊಂಡು ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ. ನೀವು ಪವಿತ್ರಾತ್ಮಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ ... (ಎಫೆಸ 6:10-18).

"ನಂಬಿಕೆಯೆಂಬ ಗುರಾಣಿ" ಎಂಬ ಪದಗುಚ್ಛದ ಕಡೆಗೆ ಗಮನವನ್ನು ಕೊಡಿರಿ. ಯೋಹಾನನು ತನ್ನ ಮೊದಲನೆಯ ಪತ್ರಿಕೆಯಲ್ಲಿ, "ಕೆಡುಕನನ್ನು ಜಯಿಸಿರುವದರಿಂದ" ಎಂಬುದಾಗಿ ಮಾತಾಡುತ್ತಾನೆ (1 ಯೋಹಾನ 2:13); ಬಳಿಕ ಆತನು ಅದನ್ನು ಹೇಗೆ ಮಾಡಬಹುದೆಂಬ ಬಗ್ಗೆ ತಿಳಿಸುತ್ತಾನೆ "ಲೋಕವನ್ನು ಜಯಿಸಿದಂಥದು ನಮ್ಮ ನಂಬಿಕೆಯೇ" (1 ಯೋಹಾನ 5:4).

ಪ್ರಕಟನೆ 12ನೇ ಅಧ್ಯಾಯವು ಜಯಶಾಲಿ ನಂಬಿಕೆಯನ್ನು ಹೇಗೆ ವ್ಯಕ್ತಪಡಿಸಲ್ಪಡಬೇಕು ಎಂಬುದನ್ನು ಒತ್ತಿ ಹೇಳುತ್ತದೆ: ಸ್ತ್ರೀಯ ಮಕ್ಕಳು "ದೇವರ ಆಜ್ಞೆಗಳನ್ನು ಕೈಕೊಂಡು ನಡೆದು ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವವರು" ಎಂಬದಾಗಿ ಬಣ್ಣಿಸುತ್ತದೆ (ವ. 17). ನಾವು ವಿಧೇಯರಾಗಿರಬೇಕು (ಮತ್ತಾಯ 7:21; ಯೋಹಾನ 14:21, 23; ಇಬ್ರಿಯ 5:8, 9; 1 ಯೋಹಾನ 2:3). ಯೇಸು ತನ್ನ ಶಿಷ್ಯರಿಗೆ "ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ" (ಯೋಹಾನ 14:15).

ಅಷ್ಟುಮಾತ್ರವಲ್ಲದೆ, ನಾವು *ಪರಿಣಾಮವು ಏನೇ ಆಗಿದ್ದರೂ* ವಿಧೇಯತೆಯುಳ್ಳವರಾಗಿ ಇರತಕ್ಕದ್ದು. ಪ್ರಕಟನೆ 12:17ನೇ ವಚನವು "ಯೇಸುವಿನ ವಿಷಯವಾದ ಸಾಕ್ಷಿಯನ್ನು *ಹೇಳಿರುವವರು"* ಎಂದು ಹೇಳುತ್ತದೆ (ಒತ್ತಿ ಹೇಳಿದ್ದನು ನನ್ನದು). ಏನೇ ನಡೆದರೂ ಸರಿಯೇ, ನಾವು ಕೈಯಿಂದ ತಪ್ಪಿ ಹೋಗುವದಕ್ಕೆ ಬಿಡಬಾರದು. ನಾವು ಅದನ್ನು ಹಿಡಿದುಕೊಂಡವರಾಗಿರಬೇಕು. ಇದು ಸುಲಭವಾದದ್ದಲ್ಲ. ಶಾರೀರಿಕ ಯುದ್ಧದಲ್ಲಿರುವ ಸೈನಿಕರಿಗೆ ಯಾವಾಗಲಾದರೂ ಒಮ್ಮೆ ಯುದ್ಧದ ಕರ್ತವ್ಯದಿಂದ ವಿಶ್ರಾಂತಿ ಸಿಕ್ಕುತ್ತದೆ, ಆದರೆ ಕ್ರೈಸ್ತರು ಯಾವಾಗಲೂ ದುಷ್ಟ ಶಕ್ತಿಗಳ ದಾಳಿಗೆ ಒಳಗಾಗುತ್ತಿರುತ್ತಾರೆ.

ಎಷ್ಟೇ ಕಷ್ಟಕರವಾಗಿದ್ದರೂ ಸರಿಯೇ, ನಾವು "ನಮ್ಮ ನಿರೀಕ್ಷೆಯನ್ನು ಕುರಿತು ಮಾಡಿದ ಪ್ರತಿಜ್ಞೆಯನ್ನು ನಿಶ್ಚಂಚಲವಾಗಿ ಪರಿಗ್ರಹಿಸೋಣ" (ಇಬ್ರಿಯ 10:23). ನಾವು ದಾವೀದನ ಜೊತೆಗೂಡಿ ಹೀಗೆ ಹೇಳೋಣ, "ದೇವರನ್ನು ನಂಬಿ ನಿರ್ಭಯದಿಂದಿರುವೆನು. ನರಪ್ರಾಣಿಗಳು ನನಗೆ ಮಾಡುವದೇನು?" (ಕೀರ್ತನೆ 56:4).

ಸೈತಾನನ ತಲೆಗೆ ಒಂದು ಹೊಡೆತವನ್ನು ಕೊಡುವ ಹಾಗೆ ಯೇಸುವನ್ನು ಶಕ್ತಗೊಳಿಸಿದ ಅದೇ ದೇವರು "ಶೀಘ್ರವಾಗಿ ಸೈತಾನನನ್ನು *ನಿಮ್ಮ* ಕಾಲುಗಳ ಕೆಳಗೆ ಹಾಕಿ ತುಳಿಸಿಬಿಡುವನು" (ರೋಮಾ 16:20; ಒತ್ತಿ ಹೇಳಿದ್ದು ನನ್ನದು). ನೀವು 11ನೇ ವಚನದಲ್ಲಿರುವವರ ರೀತಿಯಲ್ಲಿ ಬೆಲೆಯನ್ನು ತೆತ್ತುವದಕ್ಕೆ ಮನಸ್ಸುಳ್ಳವರಾ*ಗಿದ್ದರೆ,* ಕರ್ತನು ಯೇಸುವಿನ ಮೂಲಕ ನಿಮಗೆ ಸಹಾಯವನ್ನು ಮಾಡುವನು.

ಅರಸನಾದ Arthurನ ಕುರಿತಾಗಿ ಇರುವ ದಂತಕಥೆಗಳಲ್ಲೊಂದೆಂದರೆ, ಆತನು ತನ್ನ ವಿಶೇಷ ವೀರಯೋಧರ ಜೊತೆಯಲ್ಲಿ ಕುಳಿತು ಸಮಾಲೋಚಿಸುತ್ತಿದ್ದ ಒಂದು ಬೃಹತ್ ವೃತ್ತಾಕಾರದ ಮೇಜು ಇತ್ತು ಎಂಬುದೆ. ಆತನು ತನ್ನ ವೀರಯೋಧರಿಗೆ ಕೊಟ್ಟ ಒಂದು ಕೆಲಸವೆಂದರೆ ದೇಶದಲ್ಲಿ ಭಯ ಹುಟ್ಟಿಸುತ್ತಿದ್ದ ಬೆಂಕಿ ಉಗುಳುವ ಘಟಸರ್ಪಗಳನ್ನು ಕೊಲ್ಲುವದು. ದಂತಕಥೆಯ ಪ್ರಕಾರ, ಹಲವು ವೀರಯೋಧರು ಮಹಾನ್ "ಘಟಸರ್ಪ ಕೊಲ್ಲುವವರು" ಎಂಬ ಖ್ಯಾತಿಗೆ ಗುರಿಯಾದರು. ನಾವು "ಘಟಸರ್ಪ ಕೊಲ್ಲುವವರು" ಎಂದು ಎಂದಿಗೂ ಶಾಶ್ವತ ನೆನಪಿನಲ್ಲಿ ಉಳಿಯದಿರಬಹುದು; ಹೇಗೂ, 12ನೇ ಅಧ್ಯಾಯದ ಪ್ರಕಾರ, ನಾವು "ಸಾಕ್ಷಿಯನ್ನು ಹೇಳುವವರಾಗಿ" ಮತ್ತು "ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು" ಇರುವದಾದರೆ "ಮಹಾ ಘಟಸರ್ಪನ" ನಿರಂತರವಾದ ಸೋಲಿನಲ್ಲಿ ನಾವು ಒಂದು ಮಹತ್ವದ ಪಾತ್ರವನ್ನು ನಿರ್ವಹಿಸುವವರಾಗಿದ್ದೇವೆ.

---

**ಅಡಿಟಿಪ್ಪಣಿಗಳು**

[1]Frank Pack, *Revelation,* Part 2 (Austin, Tex.: R. B. Sweet Co., 1965), 4. [2]ಈ ವ್ಯಾಖ್ಯಾನಗಳು W. B. West, Jr., *Revelation Through First-Century Glasses*, ed. Bob Prichard (Nashville: Gospel Advocate Co., 1997), 87, and C. G. Wilke and Wilibald Grimm, *"sēmeion," A Greek-English Lexicon of the New Testament*, trans. and rev. Joseph H. Thayer (Edinburgh: T. & T. Clark, 1901; reprint, Grand Rapids, Mich.: Regency Reference Library, n.d.), 573 ರಿಂದ ಆಯ್ದುಕೊಳ್ಳಲ್ಪಟ್ಟಿವೆ. [3]West, 87. [4]ಉದಾಹರಣೆಗೆ, William Barclay, *The Revelation of John*, vol. 2, rev. ed., The Daily Study Bible Series (Philadelphia: Westminster Press, 1976), 74. [5]ಈ ವಾಕ್ಯಸಾಲು Martin Kiddle, *The Revelation of St. John*, The Moffatt New Testament Commentary, ed. James Moffatt (New York: Harper & Brothers, Publishers, 1940), 219, and G. B. Caird, *A Commentary on the Revelation of St. John the Divine*, Harper's New Testament Commentaries, ed. Henry Chadwick (London: Adam & Charles Black, 1966), 149ದಿಂದ ಆಯ್ದುಕೊಳ್ಳಲ್ಪಟ್ಟಿದೆ. [6]Earl F. Palmer, *1, 2, 3 John & Revelation*, The Communicator's Commentary, ed. Lloyd J. Ogilvie, vol. 12 (Dallas: Word Publishing, 1982), 199. [7]ಈ ಬಣ್ಣನೆಯು Eugene H. Peterson, *Reversed Thunder* (San Francisco: HarperCollins Publishers, 1988), 119ದಿಂದ ಆಯ್ದುಕೊಳ್ಳಲ್ಪಟ್ಟಿದೆ. [8]Myer Pearlman, *Windows Into the Future: Devotional Studies in the Book of Revelation* (Springfield, Mo.: Gospel Publishing House, 1941), 99. [9]G. R. Beasley-Murray, *The Book of Revelation*, The New Century Bible Commentary, ed. Matthew Black (Grand Rapids, Mich.: Wm. B. Eerdmans Publishing Co., 1974), 198. [10]Barclay, 76.

[11]Gilles Quispel, *The Secret Book of Revelation* (New York: McGraw-Hill Book Co., 1979), 77; ನೋಡಿರಿ Victorinus *Commentary on the Apocalypse* 12.1, 6. [12]Leon Morris, *Revelation*, rev. ed., The Tyndale New Testament Commentaries, ed. Leon Morris (Grand Rapids, Mich.: Wm. B. Eerdmans Publishing Co., 1987), 153. [13]Edward P. Myers, *After These Things I Saw: A Study of Revelation* (Joplin, Mo.: College Press Publishing Co., 1997), 216. [14]Bruce M. Metzger, *Breaking the Code: Understanding the Book of Revelation* (Nashville:

Abingdon Press, 1993), 74. [15]ಈ ವಾಕ್ಯಸಾಲಿನ ಕಡೇ ಪದಗಳು Peterson, 120ದಿಂದ ಆಯ್ದುಕೊಳ್ಳಲ್ಪಟ್ಟಿವೆ. [16]Metzger, 73. [17]Morris, 154. [18]Albertus Pieters, *Studies in the Revelation of St. John* (Grand Rapids, Mich.: Wm. B. Eerdmans Publishing Co., 1954), 159. [19]Peterson, 120. [20]Warren W. Wiersbe, *The Bible Exposition Commentary*, vol. 2 (Wheaton, Ill.: Victor Books, 1989), 602.

[21]ಈ ವಾಕ್ಯಸಾಲು Robert H. Mounce, *The Book of Revelation*, The New International Commentary on the New Testament, ed. F. F. Bruce (Grand Rapids, Mich.: Wm. B. Eerdmans Publishing Co., 1977), 238ದಿಂದ ಆಯ್ದುಕೊಳ್ಳಲ್ಪಟ್ಟಿದೆ. [22]H. L. Ellison, *1 Peter-Revelation*, Scripture Union Bible Study Books (Grand Rapids, Mich.: Wm. B. Eerdmans Publishing Co., 1969), 67. [23]Ibid. John Milton ನು1608-74ರಲ್ಲಿ ಜೀವಿಸಿದ್ದ ಒಬ್ಬ ಆಂಗ್ಲ ಕವಿಯಾಗಿದ್ದನು. ಆತನ ಕೊನೆಯ ಪ್ರಸಿದ್ಧ ಕೃತಿಯಾದ, *Paradise Lost* (written in 1667), ಎಂಬುದು ಪ್ರಪಂಚದ ಶ್ರೇಷ್ಠ ಮಹಾಕಾವ್ಯಗಳಲ್ಲೊಂದು ಎಂಬದಾಗಿ ಪರಿಗಣಿಸಲ್ಪಟ್ಟಿದೆ. [24]Ray Summers, *Worthy Is the Lamb* (Nashville: Broadman Press, 1951), 172–73. [25]J. W. Roberts, *The Revelation to John (The Apocalypse)*, The Living Word Commentary, ed. Everett Ferguson (Austin, Tex.: Sweet Publishing Co., 1974), 102. [26]Beasley-Murray, 203. [27]Palmer, 188. [28]William Hendriksen, *More Than Conquerors* (Grand Rapids, Mich.: Baker Book House, 1954), 165. [29]John R. W. Stott, *The Letters of John*, rev. ed., Tyndale New Testament Commentaries, ed. Leon Morris (Grand Rapids, Mich.: Wm. B. Eerdmans Publishing Co., 1988), 142. [30]The first part of this sentence is adapted from Martin H. Franzmann, *The Revelation to John* (St. Louis: Concordia Publishing House, 1976), 87.

[31]ಈ ವಾಕ್ಯಸಾಲಿನ ಕಡೇ ಪದಗಳು Merrill C. Tenney, *The Book of Revelation*, Proclaiming the New Testament (Grand Rapids, Mich.: Baker Book House, 1963), 62 ದಿಂದ ಆಯ್ದುಕೊಳ್ಳಲ್ಪಟ್ಟಿವೆ. [32]ಈ ವಾಕ್ಯಸಾಲು Roberts, 102ದಿಂದ ಆಯ್ದುಕೊಳ್ಳಲ್ಪಟ್ಟಿದೆ. [33]Homer Hailey, *Revelation: An Introduction and Commentary* (Grand Rapids, Mich.: Baker Book House, 1979), 273. [34]Morris, 157. [35]See Barclay, 83. [36]Caird, 155. [37]Roberts, 102. [38]Tenney, 63. [39]Mounce, 243. [40]Beasley-Murray, 202.

[41]Ellison, 67. [42]Beasley-Murray, 203. [43]Clovis G. Chappell, *Sermons From Revelation* (New York: Abingdon Press, 1943), 177. [44]ಈ ವಾಕ್ಯಸಾಲು Pearlman, 106ದಿಂದ ಆಯ್ದುಕೊಳ್ಳಲ್ಪಟ್ಟಿದೆ. [45]Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 177. [46]M. Robert Mulholland, Jr., *Revelation: Holy Living in an Unholy World*, Francis Asbury Press Commentary, ed. M. Robert Mulholland, Jr. (Grand Rapids, Mich.: Francis Asbury Press, 1990), 222. [47]Chappell, 179. [48]McGuiggan, 180. [49]Hailey, 276. [50]ಈ ವಾಕ್ಯಸಾಲಿನ ಕಡೇ ಭಾಗವು Philip E. Hughes, *The Book of the Revelation: A Commentary* (Grand Rapids, Mich.: Wm. B. Eerdmans Publishing Co., 1990), 140ದಿಂದ ಆಯ್ದುಕೊಳ್ಳಲ್ಪಟ್ಟಿವೆ.

[51]McGuiggan, 181. [52]Beasley-Murray, 202. [53]Morris, 158. [54]T. F. Glasson, *The Revelation of John*, The Cambridge Bible Commentary on the New English Bible, ed. P. R. Ackroyd, A. R. C. Leaney, and J. W. Packer (Cambridge: Cambridge University Press, 1965), 75. [55]ನೋಡಿರಿ Eusebius *Ecclesiastical History* 3.5; Matthew 24:15–21. [56]Henry B. Swete, *The Apocalypse of St. John*, 3d ed. (London: Macmillan Co., 1909; reprint, Grand Rapids, Mich.: Wm. B. Eerdmans Publishing Co., 1954), 159. [57]West, 90. [58]Ibid., 87. [59]Mulholland, 214. [60]Michael Wilcock, *The Message of Revelation: I Saw Heaven Opened*, The Bible Speaks Today, ed. John R. W. Stott (Downers Grove, Ill.: Intervarsity Press, 1975), 110.

[61]Tenney, 62–64. [62]Wiersbe, 601–6. [63]Hendriksen, 165–70. [64]Pearlman, 105. [65]Albert H. Baldinger, *Preaching From Revelation: Timely Messages for Troubled Hearts* (Grand Rapids, Mich.: Zondervan Publishing House, 1960), 58. [66]ಈ ದೃಷ್ಟಾಂತವು Paul Lee Tan, *Encyclopedia of 7,700 Illustrations: Signs of the Times* (Rockville, Md.: Assurance Publishers, 1979), 1574ದಿಂದ ಆಯ್ದುಕೊಳ್ಳಲ್ಪಟ್ಟಿದೆ [67]ಈ ದೃಷ್ಟಾಂತವು John Stacy, *Preaching Through Revelation* (Winona, Miss.: J. C. Choate Publications, 1983), 116ದಿಂದ ಆಯ್ದುಕೊಳ್ಳಲ್ಪಟ್ಟಿದೆ.